ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 22 ಶನಿವಾರ 2025

ಸಂಪುಟ: 45 | ಸಂಚಿಕೆ: 332 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಹನಿಟ್ರ್ಯಾಪ್ ಪ್ರಕರಣ ಸಿಬಿಐ ಇಲ್ಲವೇ ಹೈಕೋರ್ಟ್ ಹಾಲಿ ನ್ಯಾಯಮೂರ್ತಿಯಿಂದ ತನಿಖೆಗೆ ಆಗ್ರಹಿಸಿ ವಿಧಾನಸಭೆಯಲ್ಲಿ ಬಿಜೆಪಿ ಧರಣಿ ವೇಳೆ ಸ್ಪೀಕರ್ ಪೀಠಕ್ಕೆ ಅಗೌರವ

ಬಿಜೆಪಿ 18 ಶಾಸಕರು 6 ತಿಂಗಳು ಸಸ್ಪೆಂಡ್

• ಸ್ಪೀಕರ್ ಯು.ಟಿ. ಖಾದರ್ ಆದೇಶ • ಸದನದ ಕಲಾಪ ಅನಿರ್ದಿಷ್ಟಾವಧಿಗೆ ಮುಂದೂಡಿಕೆ • ಅಮಾನತುಗೊಂಡ ಶಾಸಕರ ಸದನದಿಂದ ಹೊತ್ತು ತಂದು ಹೊರಬಿಟ್ಟ ಮಾರ್ಷಲ್‌ಗಳು • ಅಧಿವೇಶನದ ಕೊನೇ ದಿನ ನಡೆದೋಯ್ತು ಬಾರೀ ಹೈಡ್ರಾಮಾ

ಬೆಂಗಳೂರು, ಮಾ. 21 (ಕೆಎಂಶಿ)– ಹನಿಟ್ರ್ಯಾಪ್ ಪ್ರಕರಣವನ್ನು ಸಿಬಿಐ ಇಲ್ಲವೇ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಒಬ್ಬರಿಂದ ತನಿಖೆ ನಡೆಸುವಂತೆ ಆಗ್ರಹಿಸಿ, ಧರಣಿ ನಡೆಸುವ ವೇಳೆ ವಿಧೇಯಕ ಹರಿದು, ಕಾಗದವನ್ನು ಸ್ಪೀಕರ್ ಮೇಲೆ ತೂರಿ, ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ 18 ಬಿಜೆಪಿ ಶಾಸಕರನ್ನು ಮುಂದಿನ 6 ತಿಂಗಳವರೆಗೆ ಸದನದಿಂದ ಅಮಾನತುಗೊಳಿಸಿ ಸ್ಪೀಕರ್ ಯು.ಟಿ.ಖಾದರ್ ಆದೇಶಿಸಿ, ಸದನವನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದರು.

ಸದನ ಮುಂದೂಡುವುದಕ್ಕೂ ಮುನ್ನ ಸದಸ್ಯರಾದ ದೊಡ್ಡನಗೌಡ ಪಾಟೀಲ್,



ಯು.ಟಿ.ಖಾದರ್

ಡಾ.ಸಿ.ಎನ್.ಅಶ್ವತ್ಥನಾರಾಯಣ, ಎಸ್.ಆರ್. ವಿಶ್ವನಾಥ್, ಬೈರತಿ ಬಸವರಾಜು, ಎಂ.ಆರ್. ಪಾಟೀಲ್, ಚನ್ನಬಸಪ್ಪ, ■ 6ನೇ ಪುಟಕ್ಕೆ

ಸಸ್ಪೆಂಡ್ ಆದ ಶಾಸಕರು


ದೊಡ್ಡನಗೌಡ ಪಾಟೀಲ್, ಡಾ. ಸಿ.ಎನ್.ಅಶ್ವತ್ಥನಾರಾಯಣ, ಎಸ್.ಆರ್. ವಿಶ್ವನಾಥ್, ಬೈರತಿ ಬಸವರಾಜು, ಎಂ.ಆರ್. ಪಾಟೀಲ್, ಚನ್ನಬಸಪ್ಪ, ಉಮಾನಾಥ್ ಎ. ಕೋಟ್ಯಾನ್, ಬಿ.ಸುರೇಶ್‌ಗೌಡ, ಡಾ.ಶೈಲೇಂದ್ರ ಬೆಲ್ದಾಳೆ, ಶರಣು ಸರಲಗರ, ಸಿ.ಕೆ.ರಾಮಮೂರ್ತಿ, ಯಶ್‌ಪಾಲ್ ಎ. ಸುವರ್ಣ, ಬಿ.ಪಿ. ಹರೀಶ್, ಡಾ.ವೈ.ಭರತ್ ಶೆಟ್ಟಿ, ಬಸವರಾಜ್ ಮತ್ತಿಮೂಡ್, ಧೀರಜ್ ಮುನಿರಾಜು, ಮುನಿರತ್ನ ಹಾಗೂ ಡಾ.ಚಂದ್ರು ಲಮಾಣಿ.



ಬಿಜೆಪಿ ಶಾಸಕರನ್ನು ಮಾರ್ಷಲ್‌ಗಳ ಹೊತ್ತೊಯ್ಯುತ್ತಿರುವುದು.

ಹನಿಟ್ರ್ಯಾಪ್ ವಿಷಯದಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ

ಬೆಂಗಳೂರು, ಮಾ. 21(ಕೆಎಂಶಿ)–ಹನಿಟ್ರ್ಯಾಪ್‌ಗೆ ಸಂಬಂಧಿಸಿದಂತೆ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ಸ್ಪಷ್ಟಪಡಿಸಿದರು. ಹನಿಟ್ರ್ಯಾಪ್ ತನಿಖೆಗೆ ಪ್ರತಿಪಕ್ಷ ಸದಸ್ಯರು ಒತ್ತಾಯಿಸಿದಾಗ ಉತ್ತರಿಸಿದ ಮುಖ್ಯ



ಮಂತ್ರಿ, ಸಚಿವ ಕೆ.ಎನ್.ರಾಜಣ್ಣ ಮಾಡಿರುವ ಆರೋಪಕ್ಕೆ ಈಗಾಗಲೇ ಗೃಹ ಸಚಿವರು ಉತ್ತರಿಸಿದ್ದಾರೆ. ಪ್ರಕರಣದಲ್ಲಿ ಯಾರೇ ಸಿಲುಕಿದ್ದರೂ ರಕ್ಷಣೆ ಕೊಡುವುದು ಸರ್ಕಾರದ ಜವಾಬ್ದಾರಿ ಎಂದರು. ಕಾನೂನಿನ ಪ್ರಕಾರ ತಪ್ಪಿತಸ್ಥರಿಗೆ ಶಿಕ್ಷೆಯಾಗಲೇಬೇಕು. ■ 6ನೇ ಪುಟಕ್ಕೆ

ಇಂದು ಕರ್ನಾಟಕ ಬಂದ್

ಬೆಂಗಳೂರು, ಮಾ.21– ಬೆಳಗಾವಿಯಲ್ಲಿ ಎಂಇಎಸ್ ಪುಂಡಾಟಿಕೆಗೆ ಕಡಿವಾಣ, ಮರಾಠಿಗರ ದೌರ್ಜನ್ಯಕ್ಕೆ ತಕ್ಕಪಾಠ ಕಲಿಸಬೇಕು, ವಿವಿಧ ಕ್ಷೇತ್ರಗಳಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡಬೇಕು, ಕನ್ನಡಿಗರ ಮೇಲೆ ಪರಭಾಷಿಕರ ದಾಳಿ ನಿಲ್ಲಬೇಕು ಎಂಬಿತ್ಯಾದಿ ಬೇಡಿಕೆಗಳನ್ನು ಮುಂದಿರಿಸಿ,



ವಿವಿಧ ಕನ್ನಡಪರ ಸಂಘಟನೆಗಳು ಶನಿವಾರ (ಮಾ.22) ಕರ್ನಾಟಕ ಬಂದ್‌ಗೆ ಕರೆಕೊಟ್ಟಿವೆ.


ಕರ್ನಾಟಕದಲ್ಲಿ ಎಂಇಎಸ್ ನಿಷೇಧ, ಮೇಕೆದಾಟು, ಕಳಸ–ಬಂಡೂರಿ ಯೋಜನೆಗೆ ಶೀಘ್ರ ಅನುಮತಿ ಸೇರಿದಂತೆ ನಾಡು–ನುಡಿ, ನೆಲ–ಜಲ ವಿಷಯವಾಗಿ ಕನ್ನಡ ಒಕ್ಕೂಟಗಳು ಶನಿವಾರ ಕರ್ನಾಟಕ ಬಂದ್ ಹಮ್ಮಿಕೊಂಡಿವೆ. ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆವರೆಗೆ ಅಖಂಡ ಕರ್ನಾಟಕ ಬಂದ್ ಕೈಗೊಂಡಿವೆ. ಬೆಳಗ್ಗೆ 10.30ಕ್ಕೆ ಬೆಂಗಳೂರಿನ ಟೌನ್ ಹಾಲ್‌ನಿಂದ ಫ್ರೀಡಂ ಪಾರ್ಕ್ ತನಕ ಪ್ರತಿ ಭಟನಾ ಮೆರವಣಿಗೆ ನಡೆಯಲಿದೆ. ಅಖಂಡ ಕರ್ನಾಟಕ ಬಂದ್‌ಗೆ ಬೆಂಗಳೂರಿನ ಪ್ರಮುಖ ಮಾಲ್‌ಗಳಾದ ಒರಾಯನ್ ಮಾಲ್, ಮಂತ್ರಿ ಮಾಲ್, ಯಶವಂತಪುರದ ಮೆಟ್ರೋ ಹೋಲ್ ಸೇಲ್ ಮಾರ್ಕೆಟ್, ರಾಜಾಜಿನಗರದ ರಾಮೇಶ್ವರ ಕೆಫೆಯ ಜೊತೆ ಕನ್ನಡ ಒಕ್ಕೂಟ ■ 6ನೇ ಪುಟಕ್ಕೆ

ಮೈಸೂರಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುವ ಲಕ್ಷಣ

ಮೈಸೂರು, ಮಾ.21(ಆರ್‌ಕೆ)– ಬೆಳಗಾವಿ ವಿಭಾಗದ ಕೆಎಸ್‌ಆರ್‌ಟಿಸಿ ಬಸ್ ಕಂಡಕ್ಟರ್ ಮತ್ತು ಚಾಲಕರ ಮೇಲೆ ಮರಾಠಿ ಪುಂಡರು ಹಲ್ಲೆ ನಡೆಸಿದ ಘಟನೆ ಖಂಡಿಸಿ ಕನ್ನಡ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಹಾಗೂ ವಿವಿಧ ಕನ್ನಡಪರ ಸಂಘಟನೆಗಳು ನಾಳೆ (ಮಾರ್ಚ್ 22) ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಮೈಸೂರಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುವ ಲಕ್ಷಣಗಳು ಕಂಡು ಬರುತ್ತಿವೆ.

ಶನಿವಾರ ಕರೆ ನೀಡಿರುವ ಕರ್ನಾಟಕ ಬಂದ್‌ಗೆ ಹೋಟೆಲ್ ಮಾಲೀಕರ ಸಂಘ ನೈತಿಕ ಬೆಂಬಲ ನೀಡುವುದಾಗಿ ಸಂಘದ ಅಧ್ಯಕ್ಷ ಸಿ.ನಾರಾಯಣ ಗೌಡ ಈಗಾಗಲೇ ■ 6ನೇ ಪುಟಕ್ಕೆ

ಕೆಬಿಜಿಯವರ
ಭೂಮಂತ್ರ...



ಮಡಿಕೇರಿಯ ಕೊಡವ ಪರಂಪರೆ ಕೇಂದ್ರ ಪ್ರಾರಂಭಕ್ಕೆ ಇಚ್ಛಾಸಕ್ತಿ ಕೊರತೆ

■ ಪುಟ–4

ಹಾಸನ ಮಿತ್ರ

ಆಪರೇಷನ್ ವಿಕ್ರಾಂತ್ ಸಕ್ಸಸ್

ಚಳ್ಳೆಹಣ್ಣು ತಿನ್ನಿಸುತ್ತಿದ್ದ ಕಾಡಾನೆ ಸೆರೆ



ಹಾಸನ,ಮಾ.21–ಜಿಲ್ಲೆಯ ಮಲೆನಾಡು ಭಾಗದಲ್ಲಿ ಜನರ ಜೀವ ಬಲಿಪಡೆಯುವ ಮೂಲಕ ಆತಂಕ ಸೃಷ್ಟಿಸಿದ್ದ ಕಾಡಾನೆಗಳ ಸೆರೆಗೆ ಕಳೆದ ಎರಡು ದಿನಗಳ ಕಾಲ ನಡೆದ ಕಾರ್ಯಾಚರಣೆ ಸಕ್ಸಸ್ ಆಗಿದ್ದು, ಆಪರೇಷನ್ ಟೀಂಗೆ ಚಳ್ಳೆಹಣ್ಣು ತಿನ್ನಿಸಿದ್ದ ವಿಕ್ರಾಂತ್ ಹೆಸರಿನ ಕಾಡಾನೆ ಕೂನೆಗೂ ಸೆರೆ ಸಿಕ್ಕಿದೆ.

ಏಳು ಸಾಕಾನೆ, 200 ಸಿಬ್ಬಂದಿ ನೇತೃತ್ವದಲ್ಲಿ ಸತತ 6 ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೇಲೂರು ತಾಲೂಕಿನ ವಾಟೀಹಳ್ಳಿ ಬಳಿಯ ಕಾಫಿ ತೋಟದಲ್ಲಿ ಅರವಳಿಕೆ ಮದ್ದು ನೀಡಿ ವಿಕ್ರಾಂತ್‌ನನ್ನು ಸೆರೆಹಿಡಿಯಲಾಗಿದೆ.

ಗುರುವಾರ ಮುಂಜಾನೆಯೇ ಆಪರೇಷನ್ ಶುರು ಮಾಡಿದ್ದ ಅರಣ್ಯ ಇಲಾಖೆ ಇಟಿಎಫ್ ಸಿಬ್ಬಂದಿ, ವಿಕ್ರಾಂತ್ ಇರುವ ಜಾಗವನ್ನು ಪತ್ತೆ ಮಾಡಿದ್ದರು. ಹೀಗಾಗಿ ಸಾಕಾನೆಗಳೊಂದಿಗೆ ಅರವಳಿಕೆ ಚುಚ್ಚುಮದ್ದು ನೀಡಿ ಸೆರೆಗೆ ಮುಂದಾಗಿದ್ದರು. ಕಾರ್ಯಾಚರಣೆಯಲ್ಲಿ ಪ್ರಶಾಂತ, ಕರ್ನಾಟಕ ಭೀಮ, ಧನಂಜಯ, ಕಂಜನ್, ಹರ್ಷ, ಏಕಲವ್ಯ ಮತ್ತು ಮಹೇಂದ್ರ ಸಾಕಾನೆಗಳು ಭಾಗಿಯಾಗಿದ್ದವು. ಮೂರು ದಿನಗಳಿಂದ ಸಿಬ್ಬಂದಿಗಳ ಜೊತೆ ಡಿಎಫ್‌ಓ ಸೌರಭ್‌ಕುಮಾರ್ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಮಧ್ಯಾಹ್ನದ ವೇಳೆಗೆ ಎರಡು ಥರ್ಮಲ್ ಡ್ರೋನ್ ಬಳಕೆ ಮಾಡಿ ಕಾಡಿನಲ್ಲಿ ಶೋಧ ಮಾಡಿದರೂ ವಿಕ್ರಾಂತ್ ಸುಳಿವಿರಲಿಲ್ಲ. ಏಳು ಸಾಕಾನೆಗಳು, 200 ಸಿಬ್ಬಂದಿ ಕಾಫಿತೋಟ ಕಾಡು ಎಲ್ಲೆಡೆ ತಡಕಾಡಿದರೂ ಪತ್ತೆಯಾಗದೆ ವಿಕ್ರಾಂತ್ ಎಸ್ಕೇಪ್ ಆದರೆ ಕಾರ್ಯಾಚರಣೆ ಸ್ಥಳಕ್ಕೆ ಕಾಡಾನೆ ಭೀಮನ ದಿಢೀರ್ ಎಂಟ್ರಿ ಇಡೀ ಕಾರ್ಯಾಚರಣೆಯ ದಿಕ್ಕೆಡಿಸಿತ್ತು. ಭೀಮನ ಎಂಟ್ರಿಯಿಂದ ಆತಂಕಗೊಂಡ ಸಾಕಾನೆಗಳು ಕೈಚೆಲ್ಲಿ ಕೂತರೆ ಕಾಡಿನಲ್ಲಿ ಮರೆಯಾದ ವಿಕ್ರಾಂತ್ ಎರಡನೇ ದಿನವೂ ಎಸ್ಕೇಪ್ ಆಗಿದ್ದ.

ಭೀಮನ ಭಯಯಿಂದ ವಿಕ್ರಾಂತ್ ಸೆರೆಗೆ ಅಡ್ಡಿ ಉಂಟಾಗಿತ್ತು. ಭೀಮಾ ಕಾಡಾನೆಗೆ ಅರವಳಿಕೆ ಮದ್ದು ನೀಡಿ ಭೀಮನನ್ನು ಬೇರೆಡೆಗೆ ಓಡಿಸಲು ಯತ್ನಿಸಲಾಯಿತು. ಬೇಲೂರು ತಾಲೂಕಿನ ವಾಟೀಹಳ್ಳಿ ಕಾಫಿ ಎಸ್ಟೇಟ್‌ನಲ್ಲಿ ಭೀಮನಿಗೆ ಆಪರೇಷನ್ ಟೀಂ ಅರವಳಿಕೆ ಮದ್ದು ನೀಡಿದೆ. ಅರವಳಿಕೆ ಮದ್ದು ನೀಡಿದರೂ ಭೀಮಾ ಪ್ರಜ್ಞೆ ತಪ್ಪಿರಲಿಲ್ಲ. ಒಂದುವರೆ ಗಂಟೆ ಬಳಿಕ ಕೆಳಗೆ ಬಿದ್ದರೂ ಭೀಮಾ ಎಚ್ಚರವಾಗಿದ್ದ.

ವಿಧಿಯಿಲ್ಲದೆ ವನ್ಯಜೀವಿ ವೈದ್ಯರು ಭೀಮನಿಗೆ ರಿವರ್ಸಲ್ ಇಂಜೆಕ್ಷನ್ ನೀಡಿದರು. ಭೀಮನನ್ನ ಸಾಂಬಾಳಿಸಲು ಕಾರ್ಯಾಚರಣೆ ತಂಡ ಹೈರಾಣಾಯಿತು. ಭೀಮ ಆನೆ ಹಿಮ್ಮೆಟ್ಟಿಸುವ ಯತ್ನದಲ್ಲಿ ಕಾಡಾನೆ ವಿಕ್ರಾಂತ್ ಎಸ್ಕೇಪ್ ಆಗಿತ್ತು. ಹೀಗೆ ಸತತ ಮೂರನೇ ದಿನವೂ ವಿಕ್ರಾಂತ್ ಆನೆ ಸೆರೆಗೆ ಏನೇ ಪ್ರಯತ್ನ ಮಾಡಿದರೂ ಕಾರ್ಯಾಚರಣೆ ತಂಡದ ಕೈಗೆ ಸಿಗದೆ ಪ್ರಳಯಾಂತಕ ವಿಕ್ರಾಂತ್ ಪರಾರಿಯಾಗುತ್ತಿದ್ದ. ಕೊನೆಗೆ ಬೇಲೂರು ತಾಲೂಕಿನ ವಾಟೀಹಳ್ಳಿ ಬಳಿಯ ಕಾಫಿ ತೋಟದಲ್ಲಿ ಅರವಳಿಕೆ ಮದ್ದು ನೀಡಿ ವಿಕ್ರಾಂತ್‌ನನ್ನು ಸೆರೆಹಿಡಿಯಲಾಯಿತು.

ಹಾಸನ ಹಾಲು ಒಕ್ಕೂಟಕ್ಕೆ ಭರ್ಜರಿ ಲಾಭ: ಐಸ್‌ಕ್ರೀಂ, ಹಾಲು, ಮೊಸರಿಗೆ ಭಾರೀ ಬೇಡಿಕೆ




ಹಾಸನ,ಮಾ.21–ಬೇಸಿಗೆಯ ಸುಡು ಬಿಸಿಲಿನ ಪರಿಣಾಮ ಹಾಸನ ಹಾಲು ಒಕ್ಕೂಟದ ಹಾಲು, ಮೊಸರು, ಮಜ್ಜಿಗೆ, ಐಸ್ ಕ್ರೀಂ, ತುಪ್ಪ ಇತರ ಉತ್ಪನ್ನಗಳಿಗೆ ಭಾರಿ ಬೇಡಿಕೆ ಸೃಷ್ಟಿಯಾಗಿದೆ.

ಪ್ರತಿನಿತ್ಯ 12 ಸಾವಿರ ಲೀಟರ್‌ನಷ್ಟು ಐಸ್ ಕ್ರೀಂಗೆ ಬೇಡಿಕೆ ಇದ್ದು, ದಿನದಿಂದ ದಿನಕ್ಕೆ ಬೇಡಿಕೆ ಹೆಚ್ಚಳವಾಗುತ್ತಿದೆ. ಇನ್ನು 10 ಸಾವಿರ ಲೀಟರ್‌ನಷ್ಟು ಮೊಸರು, ಅದರ ಎರಡು ಪಟ್ಟು ಮಜ್ಜಿಗೆಗೆ ಬೇಡಿಕೆ ಕುದುರಿದೆ. ಗೋದಾಮಿನಲ್ಲಿ ತುಂಬಿ ತುಳುಕುತ್ತಿದ್ದ ಹಾಲಿನ ಪೌಡರ್, ನಂದಿನಿ ತುಪ್ಪ ಮಾರಾಟವಾಗುತ್ತಿದ್ದು, ಹೊಸದಾಗಿ ಹಾಲಿನ ಉತ್ಪನ್ನ ತಯಾರು ಮಾಡಲಾಗುತ್ತಿದೆ ಎನ್ನುತ್ತಾರೆ ಒಕ್ಕೂಟದ ಅಧಿಕಾರಿಗಳು.


ಒಕ್ಕೂಟದಲ್ಲಿ ಸರಿಸುಮಾರು ತಿಂಗಳಿಗೆ 300 ಟನ್ ತುಪ್ಪ ತಯಾರಾಗುತ್ತದೆ. ಇದರಲ್ಲಿ ಸ್ಥಳೀಯವಾಗಿ 20ರಿಂದ 25 ಟನ್ ಮಾರಾಟವಾದರೆ, ಉಳಿದ 200ರಿಂದ 225 ಟನ್ ಬೆಂಗಳೂರು, ಮಂಗಳೂರು, ಶಿವಮೊಗ್ಗ, ಬೆಳಗಾವಿ ಮಾರುಕಟ್ಟೆಗೆ ಸರಬರಾಜು ಮಾಡಲಾಗುತ್ತಿದೆ. ಕಳೆದ ಕೆಲ ತಿಂಗಳವರೆಗೂ ಒಕ್ಕೂಟದಲ್ಲಿ 1,100 ಮೆಟ್ರಿಕ್ ಟನ್ ಬೆಣ್ಣೆ ದಾಸ್ತಾನು ಇತ್ತು. ಬೇಡಿಕೆ ಹೆಚ್ಚಿ ಉತ್ತಮ ಬೆಲೆಯೂ ದೊರೆತ ಕಾರಣ ಬಹುತೇಕ ಖಾಲಿಯಾಗಿದ್ದು, ಉತ್ತಮ ಬೆಲೆಯ ಮೂಲಕ ಲಾಭ ಕೂಡ ಬಂದಿದೆ

ತಿರುಪತಿ ಲಡ್ಡು ತಯಾರಿಸಲು ಕಳೆದ ಏಳೆಂಟು ವರ್ಷದ ಹಿಂದೆ ಹಾಸನ ಒಕ್ಕೂಟದಿಂದ ತಿಂಗಳಿಗೆ ನಾಲ್ಕು ಟ್ಯಾಂಕರ್ ಅಂದರೆ 35 ಸಾವಿರ ಲೀಟರ್ ತುಪ್ಪ ಸರಬರಾಜು ಆಗುತ್ತಿತ್ತು. ಬಳಿಕ ಟೆಂಡರ್ ಕೈತಪ್ಪಿದ ಪರಿಣಾಮ ಸಾಗಣೆಯೂ ನಿಂತಿತ್ತು. ಇದೀಗ ಕೆಎಂಎಫ್‌ಗೆ ತುಪ್ಪ ಸರಬರಾಜು ಟೆಂಡರ್ ಸಿಕ್ಕಿರುವ ಕಾರಣ ಹಾಸನ ಒಕ್ಕೂಟಕ್ಕೂ ತುಪ್ಪ ಸಾಗಣೆ ಅವಕಾಶ ಸಿಗಬಹುದು ಎಂಬ ನಿರೀಕ್ಷೆ ಹೊಂದಲಾಗಿದೆ. ಈ ಎಲ್ಲ ಕಾರಣದಿಂದ ಹಾಸನ ಹಾಲು ಒಕ್ಕೂಟದ ಉತ್ಪನ್ನಕ್ಕೆ ಬೇಡಿಕೆ ಹೆಚ್ಚಿದೆ. ಹಾಲು, ಐಸ್ ಕ್ರೀಂ, ಮೊಸರು, ಮಜ್ಜಿಗೆಗೆ ಬೇಡಿಕೆ ಹೆಚ್ಚಿದೆ. ಗುಣಮಟ್ಟಕ್ಕೆ ಆದ್ಯತೆ ನೀಡಿರುವ ಕಾರಣ ಗ್ರಾಹಕರ ವಿಶ್ವಾಸ ಹೆಚ್ಚಿದೆ ಎಂದಿದ್ದಾರೆ ಹಾಸನ ಹಾಲು ಒಕ್ಕೂಟದ ಎಂಡಿ ರಮೇಶ್.



ಅಭಿನಂದನೆ... ಡಾ.ರಾಜ್ ಶಿವಸೈನ್ಯ ಅಭಿಮಾನಿಗಳ ಸಂಘದಿಂದ ಶ್ರೀರಂಗಪಟ್ಟಣ ಡಿವೈಎಸ್‌ಪಿ ಶಾಂತ ಮಲ್ಲಪ್ಪರನ್ನು ಅಭಿನಂದಿಸಲಾಯಿತು. ಚಿತ್ರನಟ ಸೋಮಣ್ಣ, ರಾಜೇಂದ್ರ ರವಿ ಚಿತ್ರದಲ್ಲಿದ್ದಾರೆ.

ಸೀತಾರಾಮುಗೆ ಪಿಹೆಚ್.ಡಿ ಪದವಿ



ಮೈಸೂರು,ಮಾ.21–ಡಾ.ವೈ.ಎಚ್.ನಾಯಕವಾಡಿ ಅವರ ಮಾರ್ಗದರ್ಶನದಲ್ಲಿ ಸೀತಾರಾಮು ಎಸ್ ಇತಿಹಾಸ ವಿಷಯದಲ್ಲಿ "ನಿಜಾಂ ಕರ್ನಾಟಕದಲ್ಲಿ ಕಾಂಗ್ರೆಸ್ಸೇತರ ಚಳುವಳಿಗಳು (1900–1956)" ಮೇಲಿನ ಸಂಶೋಧನೆ ನಡೆಸಿ ಮಂಡಿಸಿದ ಪದವಿಗೆ ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಅಂಗೀಕರಿಸಿದೆ. ಅಭ್ಯರ್ಥಿಯು ಸದರಿ ಪಿಎಚ್.ಡಿ ಪದವಿಯನ್ನು ಘಟಿಕೋತ್ಸವದಲ್ಲಿ ಪಡೆಯಬಹುದು.

ಕಟ್ಟೆಚ್ಚರದಡಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಆರಂಭ

ನೋಂದಾಯಿಸಿದವರ ಸಂಖ್ಯೆ 36,388; ಹಾಜರಾದವರು 35,968; 420 ಮಂದಿ ಗೈರು





ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಮಹಾರಾಣಿ ಜೂನಿಯರ್ ಕಾಲೇಜಿನಲ್ಲಿ ಶುಕ್ರವಾರ ಪರೀಕ್ಷೆ ಬರೆಯುತ್ತಿರುವ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು. ಬಲಚಿತ್ರದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳ ವೆಬ್–ಕಾಸ್ಟಿಂಗ್ ಮೇಲ್ವಿಚಾರಣೆ ನಡೆಸಿದರು.

ಮೈಸೂರು, ಮಾ.21(ಆರ್‌ಕೆ)– 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಗಳು ಇಂದಿನಿಂದ ಕಟ್ಟೆಚ್ಚರದ ನಡುವೆ ಆರಂಭವಾದವು.

ಕರ್ನಾಟಕ ರಾಜ್ಯ ಶಿಕ್ಷಣ ಮತ್ತು ಪರೀಕ್ಷಾ ಮಂಡಳಿ (ಕೆಎಸ್‌ಇಇಬಿ), ಪರೀಕ್ಷೆಯಲ್ಲಿ ಯಾವುದೇ ಅಕ್ರಮ ನಡೆಯದಂತೆ ತೀವ್ರ ಕಟ್ಟೆಚ್ಚರ ವಹಿಸಿದ್ದು, ಮೊದಲ ದಿನವಾದ ಇಂದು ಪ್ರಥಮ ಭಾಷೆ ಕನ್ನಡ ಪರೀಕ್ಷೆಗಳು ಯಾವುದೇ ಗೊಂದಲ, ಸಮಸ್ಯೆಗಳಿಲ್ಲದೆ ನಡೆದವು. ಮೈಸೂರು ನಗರದ 43 ಸೇರಿದಂತೆ ಜಿಲ್ಲೆಯಾದ್ಯಂತ 133 ಕೇಂದ್ರಗಳಲ್ಲಿ ಇಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.15 ಗಂಟೆವರೆಗೆ ನಡೆದ ಪರೀಕ್ಷೆಗೆ ಒಟ್ಟು 36,388 ವಿದ್ಯಾರ್ಥಿಗಳು ನೋಂದಣಿಯಾಗಿದ್ದರು. ಆದರೆ, ಇಂದಿನ ಪರೀಕ್ಷೆಗೆ 35,968 ವಿದ್ಯಾರ್ಥಿಗಳು ಹಾಜರಾಗಿದ್ದು, 420 ಮಂದಿ ಗೈರು ಹಾಜರಾಗಿದ್ದಾರೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಮೈಸೂರು ಜಿಲ್ಲಾ ಉಪನಿರ್ದೇಶಕ ಎಸ್.ಟಿ.ಜವರೇಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾ ಮಟ್ಟದ ಅಧಿಕಾರಿಗಳ ಸಮುಚ್ಚಯದಲ್ಲಿರುವ ಜಿಲ್ಲಾ ಖಜಾನೆಯಿಂದ ಜಿಪಿಎಸ್ ಅಳವಡಿಸಿದ್ದ ವಾಹನದಲ್ಲಿ ಪ್ರಶ್ನೆಪತ್ರಿಕೆ ಮತ್ತು ಉತ್ತರ ಪ್ರತಿಗಳನ್ನು ಶಸ್ತ್ರಸಜ್ಜಿತ ಪೊಲೀಸ್ ಬೆಂಗಾವಲಿನಲ್ಲಿ 16 ಮಾರ್ಗಗಳ ಮೂಲಕ ಮೈಸೂರು ಜಿಲ್ಲೆಯಾದ್ಯಂತ ಇರುವ ಎಲ್ಲಾ 133 ಪರೀಕ್ಷಾ ಕೇಂದ್ರಗಳಿಗೂ ಒದಗಿಸಲಾಯಿತು. ಪ್ರತೀ ಕೇಂದ್ರದಲ್ಲಿ ಸಿಸಿ ಕ್ಯಾಮರಾಗಳ ಮೂಲಕ ಸೆರೆ ಹಿಡಿದಿದ್ದ ದೃಶ್ಯಾವಳಿಗಳನ್ನು ವೆಬ್ ಕಾಸ್ಟಿಂಗ್ ಮಾಡಲಾಯಿತು. ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ್ದ ಕೇಂದ್ರದಲ್ಲಿ ಕಂಪ್ಯೂಟರ್ ಮೂಲಕ ವೀಕ್ಷಿಸಿ ಪರೀಕ್ಷಾ ಪ್ರಕ್ರಿಯೆಗಳಲ್ಲಿ ಯಾವುದಾದರೊಂದು ಲೋಪ ಕಂಡುಬಂದರೆ ತಕ್ಷಣ ಕ್ರಮವಹಿಸಲು ಅಧಿಕಾರಿಗಳನ್ನು ನಿಯೋಜಿಸಲಾಗಿತ್ತು. ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ವೆಬ್‌ಕಾಸ್ಟಿಂಗ್ ಸೆಂಟರ್‌ಗೆ ಭೇಟಿ ನೀಡಿ ಪರಿವೀಕ್ಷಣೆ ನಡೆಸಿದರು. ಪರೀಕ್ಷೆಗೆ ಬಂದ ಪ್ರತಿಯೊಬ್ಬ ವಿದ್ಯಾರ್ಥಿಯನ್ನು ತಪಾಸಣೆ ನಡೆಸಿ ಮೊಬೈಲ್, ಇಯರ್ ಫೋನ್, ಸ್ಮಾರ್ಟ್ ವಾಚ್, ಬ್ಲೂಟೂತ್ ಸೇರಿದಂತೆ ಇತರೆ ಎಲೆಕ್ಟ್ರಾನಿಕ್ ವಸ್ತುಗಳನ್ನು ಕೊಂಡೊಯ್ಯದಂತೆ ಎಚ್ಚರವಹಿಸಲಾಗಿತ್ತು.

ಸ್ಥಳದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿಯನ್ನೂ ನಿಯೋಜಿಸಿ ತುರ್ತು ವೈದ್ಯಕೀಯ ಸೇವಾ ಸೌಲಭ್ಯಗಳನ್ನು ಒದಗಿಸಲಾಗಿತ್ತು. ಅಲ್ಲದೆ, ಪರೀಕ್ಷಾ ಕೇಂದ್ರಗಳ ಸುತ್ತ 200 ಮೀಟರ್ ವ್ಯಾಪ್ತಿಯಲ್ಲಿ ಜೆರಾಕ್ಸ್ ಅಂಗಡಿಗಳನ್ನು ಬಂದ್ ಮಾಡಿಸಿ ನಿಷೇಧಿತ ಪ್ರದೇಶದಲ್ಲಿ ಪರೀಕ್ಷಾರ್ಥಿಗಳು, ಅಧಿಕಾರಿಗಳನ್ನು ಹೊರತುಪಡಿಸಿ ಬೇರೆ ಯಾರೂ ಸುಳಿಯದಂತೆ ಬಂದೋಬಸ್ತ್ ಕರ್ತವ್ಯದಲ್ಲಿದ್ದ ಪೊಲೀಸರು ಅಗತ್ಯ ಕ್ರಮ ವಹಿಸಿದ್ದರು.

ತಿರುಪತಿ ವೆಂಕಟೇಶ್ವರ ದೇವಾಲಯದಲ್ಲಿ ಹಿಂದೂಗಳಿಗೆ ಮಾತ್ರ ಉದ್ಯೋಗ



ತಿರುಮಲ: ಆಂಧ್ರಪ್ರದೇಶದ ಪ್ರಸಿದ್ಧ ಯಾತ್ರಾ ಕ್ಷೇತ್ರ ತಿರುಮಲದ ವೆಂಕಟೇಶ್ವರ ದೇವಾಲಯದಲ್ಲಿ ಹಿಂದೂಗಳನ್ನು ಮಾತ್ರ ಕೆಲಸಕ್ಕೆ ನೇಮಿಸಿಕೊಳ್ಳಬೇಕು. ಸದ್ಯ ಅಲ್ಲಿ ಇತರ ಸಮುದಾಯದವರು ಕೆಲಸ ಮಾಡುತ್ತಿದ್ದರೆ ಅವರ ಭಾವನೆಗಳಿಗೆ ಧಕ್ಕೆಯಾಗದಂತೆ ಅವರನ್ನು ಬೇರೆಡೆಗೆ ಸ್ಥಳಾಂತರಿಸಲಾಗುವುದು ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹೇಳಿದ್ದಾರೆ.

ತಿರುಮಲ ದೇಗುಲದಲ್ಲಿ ಹಿಂದೂಗಳಿಗೆ ಮಾತ್ರ ಉದ್ಯೋಗ ನೀಡಬೇಕು. ಸದ್ಯ ಬೇರೆ ಧರ್ಮದ ವ್ಯಕ್ತಿಗಳು ಕೆಲಸ ಮಾಡುತ್ತಿದ್ದರೆ ಅವರ ಭಾವನೆಗಳಿಗೆ ಧಕ್ಕೆಯಾಗದಂತೆ ಬೇರೆಡೆಗೆ ಸ್ಥಳಾಂತರಿಸಲಾಗುವುದು ಎಂದು ತಿಳಿಸಿದ್ದಾರೆ. ದೇಶದ ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ವೆಂಕಟೇಶ್ವರ ಸ್ವಾಮಿ ದೇವಾಲಯಗಳನ್ನು ನಿರ್ಮಿಸುವ ಯೋಜನೆಯನ್ನು ಘೋಷಿಸಿದ್ದಾರೆ. ವಿದೇಶಗಳಲ್ಲಿಯೂ ವೆಂಕಟೇಶ್ವರನ ದೇವಾಲಯ ಸ್ಥಾಪನೆಯಾಗಲಿ ಎಂದು ಅನೇಕ ಭಕ್ತರು ಬಯಸುತ್ತಿದ್ದಾರೆ. ಸೆವೆನ್ ಹಿಲ್ಸ್ ಪ್ರದೇಶದ ಬಳಿಯ ವಾಣಿಜ್ಯ ಚಟುವಟಿಕೆಗಳ ಬಗ್ಗೆ ಮಾತನಾಡಿದ ನಾಯ್ಡು, ಈ ಪ್ರದೇಶಕ್ಕೆ ಹೊಂದಿಕೊಂಡಿರುವ ಮುಮ್ತಾಜ್ ಹೋಟೆಲ್‌ಗೆ ಈ ಹಿಂದೆ ಅನುಮತಿ ನೀಡಲಾಗಿತ್ತು. ಇದೀಗ 35.32 ಎಕರೆ ಜಾಗದಲ್ಲಿ ಹೋಟೆಲ್ ನಿರ್ಮಾಣಕ್ಕೆ ಮಂಜೂರಾತಿ ರದ್ದುಗೊಳಿಸಲು ಸರ್ಕಾರ ನಿರ್ಧರಿಸಿದೆ.

ನಾಳೆ ಲಯನ್ಸ್‌ನಿಂದ ಪ್ರಾಂತೀಯ ಸಮ್ಮೇಳನ

ಮೈಸೂರು, ಮಾ.21(ಜಿಎ)–ಅಂತಾರಾಷ್ಟ್ರೀಯ ಲಯನ್ಸ್ ಜಿಲ್ಲೆ 317ಜಿ ವತಿಯಿಂದ ಮಾ.23ರಂದು ಬೆಳಗ್ಗೆ 10.30ಕ್ಕೆ ಜೆ.ಪಿ.ನಗರದಲ್ಲಿರುವ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಜಿಲ್ಲಾ ಸಭಾಂಗಣದಲ್ಲಿ ಪ್ರಾಂತ್ಯ 6, 7ರ ಪ್ರಾಂತೀಯ ಸಮ್ಮೇಳನ ಏರ್ಪಡಿಸಿಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಅತಿಥೇಯ ಸಮಿತಿ ಅಧ್ಯಕ್ಷ ಜಯಕುಮಾರ್ ಈ ವಿಷಯ ತಿಳಿಸಿ, ಭಾರತೀಯ ಸಂಸ್ಕೃತಿಯಲ್ಲಿ ಗ್ರಾಮೀಣತೆಯ ಪಾತ್ರ ವಿಷಯವನ್ನು ಈ ಸಮ್ಮೇಳನ ಆಧರಿಸಿದೆ. ಸಾಹಿತಿ ನಾಗತಿಹಳ್ಳಿ ಚಂದ್ರಶೇಖರ್ ಮುಖ್ಯ ಭಾಷಣ ಮಾಡುವರು. ಡಾ.ಎನ್.ಕೃಷ್ಣೇಗೌಡ, ಕೆ.ದೇವೇಗೌಡ ಅತಿಥಿಗಳಾಗಿರುವರು. ಲಯನ್ ಶಿವರಾಮು ಅಧ್ಯಕ್ಷತೆ ವಹಿಸಲಿದ್ದಾರೆ. 3 ಲಕ್ಷಕ್ಕೂ ಹೆಚ್ಚು ಸೇವಾ ಕಾರ್ಯ ನಡೆಯಲಿದ್ದು, ನಾಗತಿಹಳ್ಳಿಯ ಸರ್ಕಾರಿ ಶಾಲೆ ಪುನಶ್ಚೇತನಕ್ಕಾಗಿ 1 ಲಕ್ಷ ರೂ. ನೆರವು ನೀಡಲಾಗುತ್ತದೆ ಎಂದರು.

ಅರ್ಥಪೂರ್ಣವಾಗಿ ಲಾ ಗೈಡ್ ವೆಂಕಟೇಶ್ ಹುಟ್ಟುಹಬ್ಬ ಆಚರಣೆ





ಮೈಸೂರಿನ ವಕೀಲರ ಸಂಘದಲ್ಲಿ ಶುಕ್ರವಾರ ಹಿರಿಯ ವಕೀಲ ಎಚ್.ಎನ್.ವೆಂಕಟೇಶ್ (ಲಾ ಗೈಡ್ ವೆಂಕಟೇಶ್) ಅವರ ಹುಟ್ಟುಹಬ್ಬದ ಅಂಗವಾಗಿ ರಕ್ತದಾನ ಶಿಬಿರ (ಬಲಚಿತ್ರ) ಆಯೋಜಿಸಲಾಗಿತ್ತು. ಈ ವೇಳೆ ವಕೀಲರ ಸಂಘದ ವತಿಯಿಂದ ಲಾ ಗೈಡ್ ವೆಂಕಟೇಶ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಮೈಸೂರು, ಮಾ.21(ಬಿಎಲ್‌ಯು)– ಮೈಸೂರಿನ ಹಿರಿಯ ವಕೀಲರೂ ಆದ ಲಾ ಗೈಡ್ ಕನ್ನಡ ಕಾನೂನು ಮಾಸ ಪತ್ರಿಕೆ ಗೌರವ ಸಂಪಾದಕ ಎಚ್.ಎನ್. ವೆಂಕಟೇಶ್ (ಲಾ ಗೈಡ್ ವೆಂಕಟೇಶ್) ಅವರ ಹುಟ್ಟುಹಬ್ಬವನ್ನು ಇಂದು ಅರ್ಥಪೂರ್ಣವಾಗಿ ಆಚರಿಸಲಾಯಿತು.

ವೆಂಕಟೇಶ್ ಅವರ ಬಳಗ ಹಾಗೂ ಸ್ನೇಹಿತರು ಹುಟ್ಟುಹಬ್ಬ ನಿಮಿತ್ತ ರಕ್ತದಾನ ಶಿಬಿರ ಸೇರಿದಂತೆ ಹಲವು ಸಾಮಾಜಿಕ ಕಾರ್ಯಕ್ರಮ ಆಯೋಜಿಸಿದ್ದರು.

ವೆಂಕಟೇಶ್ ಹುಟ್ಟುಹಬ್ಬದ ಅಂಗವಾಗಿ ನಗರದ ವಕೀಲರ ಸಂಘದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಮೈಸೂರು ವಕೀಲರ ಸಂಘ ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ 50ಕ್ಕೂ ಹೆಚ್ಚು ವಕೀಲರು ರಕ್ತದಾನ ಮಾಡಿದರು.

ವೆಂಕಟೇಶ್ ಅವರ ಹುಟ್ಟುಹಬ್ಬದ ಹಿನ್ನೆಲೆ ಮೈಸೂರು ಜಿಲ್ಲಾ ವಕೀಲರ ಸಂಘದ ಲೈಬ್ರರಿಗೆ 30 ಸಾವಿರ ಪುಸ್ತಕ ನೀಡಲಾಯಿತು. ಈ ವೇಳೆ ವೆಂಕಟೇಶ್ ಕೊಡುಗೆಯ ಪುಸ್ತಕ ವಿಭಾಗವನ್ನು ಲೋಕಾರ್ಪಣೆ ಮಾಡಲಾಯಿತು. ಜೊತೆಗೆ ಎರಡು ವಾಟರ್ ಪ್ಯೂರಿಫೈ ಕೂಡ ನೀಡಲಾಯಿತು.


ತರುವಾಯ ವೆಂಕಟೇಶ್ ಅವರನ್ನು ವಕೀಲರ ಸಂಘದಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು. ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಕಾರ್ಯದರ್ಶಿ ಎ.ಜಿ.ಸುಧೀರ್, ಮಹಿಳಾ ಜಂಟಿ ಕಾರ್ಯದರ್ಶಿ ವಿನೋದ ಬಿ.ವಿ., ಹಿರಿಯ ವಕೀಲರಾದ ಎಂ.ಡಿ.ಹರೀಶ್ ಸೇರಿದಂತೆ ಹಲವರು ಹಾಜರಿದ್ದರು.

ರಕ್ತದಾನ ಶಿಬಿರ, ವಕೀಲರ ಸಂಘಕ್ಕೆ ಪುಸ್ತಕಗಳ ಕೊಡುಗೆ

ನಗರದ ಏರ್ ಲೈನ್ಸ್ ಹೋಟೆಲ್‌ನಲ್ಲಿ ಮಾಜಿ ಕಾರ್ಪೊರೇಟರ್ ಲೋಕೇಶ್ ಪಿಯಾ, ಬಿಜೆಪಿ ಮುಖಂಡ ಶಂಭು ಸೇರಿದಂತೆ ಇತರರು ವೆಂಕಟೇಶ್ ಅವರಿಂದ ಕೇಕ್ ಕಟ್ ಮಾಡಿಸಿದರು. ತರುವಾಯ ಮೈಸೂರು ಪೇಟ ತೊಡಿಸಿ ಆತ್ಮೀಯವಾಗಿ ಸನ್ಮಾನಿಸಿದರು.

ಇದೇ ವೇಳೆ ನಗರದ ಸರಸ್ವತಿಪುರಂನ ವೃದ್ಧಾಶ್ರಮದಲ್ಲಿ ಎಚ್.ಎನ್.ವೆಂಕಟೇಶ್ ಅವರು ಊಟದ ವ್ಯವಸ್ಥೆ ಮಾಡಿದ್ದರು. ಈ ವೇಳೆ ವೆಂಕಟೇಶ್ ಅವರೇ ವೃದ್ಧರಿಗೆ ಊಟ ಬಡಿಸಿದರು. ವಕೀಲರಾದ ಜೈಶಂಕರ್, ಗಿರೀಶ್, ಸಿದ್ಧರಾಜು, ರವಿ ಸೇರಿದಂತೆ ಹಲವರು ಹಾಜರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.03.2025 ಶನಿವಾರ, ಮಳೆ ನಕ್ಷತ್ರ: ಉತ್ತರಭಾದ್ರಾ 17.03.2025 ರಿಂದ 30.03.2025
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 9ರಿಂದ ಮೂಲವ್ಯಾಧಿ/ಪೈಲ್ಸ್ ರೋಗ ಚಿಕಿತ್ಸಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಒಟೋಮೈಕೋಸಿಸ್–ಕಿವಿಯ ಫಂಗಲ್ ಸೋಂಕಿಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಮೈಸೂರು ಸಾಹಿತ್ಯ ದಾಸೋಹ :** 113ನೇ ಸಾಹಿತ್ಯ ದಾಸೋಹ ಹಾಗೂ ವಾಣಿ ಸುಬ್ಬಯ್ಯ ವಿರಚಿತ ಎರಡು ಕೃತಿಗಳ ಲೋಕಾರ್ಪಣೆ, ಅಧ್ಯಕ್ಷತೆ : ಮೈಸೂರು ಸಾಹಿತ್ಯ ದಾಸೋಹ ಸಂಸ್ಥಾಪಕ ಎಂ.ಆರ್. ಆನಂದ್, ಕೃತಿಗಳ ಲೋಕಾರ್ಪಣೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು : ಲೇಖಕ ಎ.ಆರ್. ಶ್ರೀಧರ್, ರಂಗನಾಥ್ ಮೈಸೂರು, ಲೇಖಕಿ ಶ್ರೀಮತಿ ವಾಣಿ ಸುಬ್ಬಯ್ಯ, ಶ್ರೀಮತಿ ಸುಮಾ ರಂಗನಾಥ್, ಶ್ರೀಮತಿ ರಾಜೇಶ್ವರಿ ಶಿವರಾಂ, ಶ್ರೀಮತಿ ಆಶಾ ಅರಸ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

■ **ಶ್ರೀ ಶನೇಶ್ವರಸ್ವಾಮಿ ಭಕ್ತ ಮಂಡಲಿ :** 16ನೇ ವರ್ಷದ ಶ್ರೀ ಶನೇಶ್ವರಸ್ವಾಮಿ ಆರಾಧನೆ, ಬೆಳಗ್ಗೆ ಶ್ರೀ ಸ್ವಾಮಿಗೆ ರುದ್ರಾಭಿಷೇಕ, ಪಂಚಾಮೃತಾಭಿಷೇಕ, ಶ್ರೀ ಛಾಯಾದೇವಿ, ಶ್ರೀ ಸೂರ್ಯನಾರಾಯಣ ಸಹಿತ ಶ್ರೀ ಶನೇಶ್ವರಸ್ವಾಮಿ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಬೆಳಗ್ಗೆ 10.30 ರಿಂದ ಶ್ರೀ ಶನೇಶ್ವರಸ್ವಾಮಿ ಉತ್ಸವ ಮೂರ್ತಿ ಮೆರವಣಿಗೆ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ರಾತ್ರಿ 9 ಗಂಟೆಗೆ ಶನಿಪ್ರಭಾವ ಅಥವಾ ರಾಜಾವಿಕ್ರಮ ಪೌರಾಣಿಕ ನಾಟಕ ಪ್ರದರ್ಶನ, ಸ್ಥಳ: ಸಜ್ಜೆಹುಂಡಿ, ವರುಣಾ ಹೋಬಳಿ.

■ **ಆಫೀಸರ್ಸ್ ಕ್ಲಬ್ :** ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಸ್ಥಳ: ಕ್ಲಬ್ ಆವರಣ, ಸಂಜೆ 4ಕ್ಕೆ.

■ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಕಥೆ ಹೇಳುವವರು : ಶಿಕ್ಷಣ ಇಲಾಖೆ ರಾಜ್ಯ ಸಂಪನ್ಮೂಲ ವ್ಯಕ್ತಿ ಬಿ. ಸಿದ್ದೇಗೌಡ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ.

■ **ಡಾ.ರಾಜ್ ಕುಮಾರ್ ಕಲಾ ಸೇವಾ ಟ್ರಸ್ಟ್:** ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ನೆನಪಿನಾರ್ಥ ಸಂಗೀತ ರಸಸಂಜೆ ಕಾರ್ಯಕ್ರಮ, ಸ್ಥಳ: ಜಗನ್ಮೋಹನ ಅರಮನೆ, ಸಂಜೆ 5 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ನಖ ಶಿಖಾಂತ–ಅಂದ ಆರೋಗ್ಯಗಳ ಆಪ್ತ ಮಾಹಿತಿ, ಪ್ರಸ್ತುತಿ: ಡಾ.ಕೇಶವ ಕೊರಸೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ರಾಘವೇಂದ್ರ, ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ–ಡಾ. ಹೆಚ್. ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ: ಮೈಸೂರಿನ ಡಾ. ಪಿ.ಕೆ.ರಾಜಶೇಖರ್ ಮತ್ತು ಸಂಗಡಿಗರಿಂದ ಜನಪದ ಗೀತೆಗಳು, 3.30 ಮಕ್ಕಳ ಮಂಟಪ–ದೆಹಲಿ ಪಬ್ಲಿಕ್ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 4.00 ನಾಟಕ 'ಅಂಚು ಕತ್ತರಿಸಿದ ಕಾಗದ' ಮೂಲ ಇಂಗ್ಲೀಷ್ ಕಥೆ–ಜಿ.ಕೆ. ಚೆಸ್ಟರ್ ಟನ್, ಕನ್ನಡ ನಾಟಕ ರೂಪಾಂತರ– ಶ್ರೀನಿವಾಸಪ್ರಸಾದ್, ನಿರ್ವಹಣೆ–ಪ್ರಭುಸ್ವಾಮಿ ಮಳಿಮಠ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕರು ಹಾಗೂ ಚಿತ್ರಸಾಹಿತಿಗಳಾದ ಸಿ.ವಿ.ಶಿವಶಂಕರ್ ಅವರೊಂದಿಗೆ ಎಂ. ಶಂಕರಪ್ಪ ಅವರು ನಡೆಸಿದ್ದ ಸಂವಾದದ ಎರಡನೇ ಭಾಗ, 6.50 ಕೃಷಿರಂಗ : ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಕೃಷಿ ಉದ್ಯಮಶೀಲತೆಯಿಂದ ರೈತರಿಗಾಗುವ ಅನುಕೂಲಗಳು ಈ ಕುರಿತು ಸಂವಾದ. ಭಾಗವಹಿಸುತ್ತಾರೆ–ನಂಜನಗೂಡು ತಾಲೂಕು ಸುತ್ತೂರಿನ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ದೀಪಕ್ ಮತ್ತು ಮೈಸುರು ತಾಲೂಕು ಜಯಪುರ ಹೋಬಳಿ ದೂರ ಗ್ರಾಮದ ಎಸ್. ಅಶ್ವಿನಿ, ಪ್ರಸ್ತುತಿ : ಎನ್. ಕೇಶವಮೂರ್ತಿ, 8.15 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಂಡಿತ್. ರವಿನಾಥ್ ಮಿಶ್ರ – ತಬಲಾ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹೀಪಾಲಾನಂದ ಅವರಿಂದ ಇನ್‌ಸೈಟ್ಸ್ ಫ್ರಂ ಪ್ಯಾರಬಲ್ಸ್ ಆಫ್ ಶ್ರೀ ರಾಮಕೃಷ್ಣ–3 ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ವಿಶ್ವ ಜಲ ದಿನಾಚರಣೆ, ಮುಖ್ಯ ಅತಿಥಿಗಳು : ಡೆಹ್ರಾಡೂನ್ ಗ್ರಾಫಿಕ್ ಎರಾ ಡೀಮ್ಡ್ ಟು ಬಿ ಯೂನಿವರ್ಸಿಟಿ ವಿಶ್ರಾಂತ ಕುಲಪತಿ ಡಾ. ಡಿ.ಪಿ. ಗಿರಿಧರ್, ಕಬಿನಿ ಮತ್ತು ವರುಣಾ ಸರ್ಕಲ್ ಸೂಪರಿಂಟೆಂಡಿಂಗ್ ಇಂಜಿನಿಯರ್ ಕೆ. ಮಹೇಶ್, ರೋಟರಿ ಕ್ಲಬ್ ಆಫ್ ಮೈಸೂರು ಎಲೈಟ್ ಅಧ್ಯಕ್ಷ ಎಂ. ರವಿ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ.ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಪರಿವರ್ತನ ರಂಗ ಸಮಾಜ :** ಪರಿವರ್ತನ ರಂಗ ಸಮಾಜದ 25ನೇ ವರ್ಷದ ಅಂಗವಾಗಿ ವಿಕಾಸವಾದ ವಿಚಾರಣೆಯ ಸುಳಿಯಲ್ಲಿ ಸಾಮಾಜಿಕ ವಿಡಂಬನೆ ನಾಟಕ ಪ್ರದರ್ಶನ, ನಿರ್ದೇಶನ : ಎಸ್.ಆರ್. ರಮೇಶ್, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.


Scan for store location
FASHION FACTORY
BRANDS FOR LESS
PRESENTS
FESTIVAL of DISCOUNTS
TILL 31ST MARCH
DENIM
FLAT @ ₹999*
UPTO ₹3999
LEVI'S
Lee
Pepe Jeans LONDON
KILLER
SPECIAL DEALS
FLAT
60% OFF
ON SPORT FOOTWEAR
Reebok
iD
ON BIG BRANDS
PETER ENGLAND
LOUIS PHILIPPE
Raymond
VAN HEUSEN
PARK AVENUE
ವಿಶೇಷ ಕೊಡುಗೆ*
ರೂ 3000 ಮತ್ತು ಮೇಲ್ಪಟ್ಟು ಶಾಪ್ ಮಾಡಿ ಹಾಗೂ
ರೂ 1045 ಮೌಲ್ಯದ ಉಡುಗೊರೆ ಪಡೆಯಿರಿ
ಕೇವಲ ರೂ399
*T & C Apply. Offer Applicable on select merchandise. Participant brands may vary store to store.
BAJAJ FINSERV
Highest spender to get a Lenovo Tab worth ₹21,000 on shopping with Bajaj Easy EMI and many other exciting gifts.
T&C Apply*
ಮೈಸೂರಿನಲ್ಲಿರುವ ಸ್ಟೋರ್: ಕೃಷ್ಣಮೂರ್ತಿಪುರಂ,
ಕೆಜಿ ಕೊಪ್ಪಲ್ ಅಂಡರ್ ಬ್ರಿಡ್ಜ್ ಸಮೀಪ
ಸ್ಟೋರ್ ಮ್ಯಾನೇಜರ್:
6360543723

ನಕ್ಕರೆ ಅದೇ ಸ್ವರ್ಗ

ಹುಷಾರಿಲ್ಲದೆ ಗುಂಡ ಡಾಕ್ಟರ್ ಬಳಿ ಹೋದ...

ಡಾಕ್ಟರ್ : ನೀವು ಬೆಳಗ್ಗೆ ಎದ್ದಾಕ್ಷಣ ಬಿಸಿ ನೀರು ಕುಡಿಯಬೇಕು.

ಗುಂಡ : 25 ವರ್ಷದಿಂದ ಕುಡೀತಾ ಇದ್ದೇನೆ. ನನ್ನ ಹೆಂಡ್ತಿ ಅದನ್ನು ಕಾಫಿ ಅಂತಾಳೆ...

ಮೈಸೂರು ಮಿತ್ರ

ಶನಿವಾರ, 22 ಮಾರ್ಚ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ನೀನು ನಡೆಯುತ್ತಿದ್ದಿಯಾ ಅನ್ನೋದನ್ನ ಅರ್ಥ ಮಾಡಿಕೊಂಡ ಕ್ಷಣ ನಿನ್ನಲ್ಲಿ ಸಾಧಿಸುವ ಛಲ ಬರುತ್ತೆ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನಲ್ಲಿರುವ ಮಾನ ನಿನಗೆ ಕೊಡುವುದು ಬಹುಮಾನ.

ನಿಮ್ಮ ಪತ್ರಗಳು

■ ನಾ ಕಂಡ ಡಾ.ವಿ.ಲಕ್ಷ್ಮೀನಾರಾಯಣ

ಮಾನ್ಯರೆ,



ಡಾ.ವಿ. ಲಕ್ಷ್ಮಿ ನಾರಾಯಣ ಅವರಿಗೆ ಭಾರತದ ಮಹಾನ್ ಸುಪುತ್ರ ಪ್ರಶಸ್ತಿ ದೊರೆತಿರುವುದು ನಿಜಕ್ಕೂ ಪ್ರಶಸ್ತಿಗೆ ಗೌರವ ಬಂದಂತಾಗಿದೆ. ಬಡವರ ಬಂಧು ಲಕ್ಷ್ಮಿ ನಾರಾಯಣ ಅವರ ಸರಳತೆ, ರೋಗಿಗಳೊಂದಿಗೆ ಅವರು ನಡೆಸುವ ಸಂಭಾಷಣೆ, ನಂತರ ಶ್ರೂಶುಷಣೆ ಮಹಾನಂದ ಆರೋಗ್ಯವನ್ನುಂಟು ಮಾಡುತ್ತದೆ.

ಕಷ್ಟದಲ್ಲಿ ಬೆಳೆದ ಲಕ್ಷ್ಮೀನಾರಾಯಣ ಅವರು ಬಡರೋಗಿಗಳಿಗೆ ತುಂಬಾ ಇಷ್ಟವಾಗಿದ್ದಾರೆ. ವೈದ್ಯೋ ನಾರಾಯಣ ಹರಿ ಎಂಬ ನುಡಿ ಡಾ. ಲಕ್ಷ್ಮೀ ನಾರಾಯಣ ಅವರಿಗೆ ಸಲ್ಲುತ್ತದೆ ಎಂದು ಘಂಟಾಘೋಶವಾಗಿ ಹೇಳಲೇಬೇಕು.

ಸೀನು ಹಾಗೂ ಕೆಮ್ಮುಗಳು ಪುಪ್ಪಸವನ್ನು ರಕ್ಷಿಸುವ ಕಾವಲುಗಾರರು ಎಂದು ಹೇಳುತ್ತಾರೆ. ಆದರೆ ಇಲ್ಲಿ ಡಾ.ವಿ.ಲಕ್ಷ್ಮೀನಾರಾಯಣನವರು ಸಿಹಿ ಮೂತ್ರ ರೋಗಕ್ಕೆ (ಮಧುಮೇಹ) ಬೇಗ ಗುಣವಾಗುವುದರಲ್ಲಿ ಅವರ ಶ್ರುಶೂಷೆ ನಿಜಕ್ಕೂ ಅಭಿನಂದನಾರ್ಹವಾಗಿದೆ. ಆರೋಗ್ಯವುಳ್ಳ ಶರೀರ ಆತ್ಮದ ಅರಮನೆ, ಅನಾರೋಗ್ಯವುಳ್ಳ ಶರೀರ ಆತ್ಮದ ಸೆರೆಮನೆ ಇದ್ದಂತೆ. ನಮ್ಮ ವೈದ್ಯರಿಗೆ ಎಲ್ಲರೂ ಆರೋಗ್ಯವಂತಾಗಿರಬೇಕು ಎಂಬುದೇ ಅವರ ಮೂಲಮಂತ್ರ.

ವೈದ್ಯನಾದವನು ಓದುತ್ತಾ, ಬರೆಯುತ್ತಾ, ಶೋಧಿಸುತ್ತಾ ಹೊರಟವರೆ ಉದಯೋನ್ಮುಖ ವೈದ್ಯನಾಗುತ್ತಾನೆ. ಜಡವಾದರೆ ಅಸ್ತೋನ್ಮುಖ ವೈದ್ಯನಾಗುತ್ತಾನೆ. ಆದರೆ ಇಲ್ಲಿ ನಮ್ಮ ಈ ವೈದ್ಯರು ವಿದೇಶದಲ್ಲಿ ಉಪನ್ಯಾಸ, ಸಂಶೋಧನೆ ಮಾಡುತ್ತಾ ಬಹುಮುಖ ಪ್ರತಿಭೆ ಉಳ್ಳವರೆನಿಸಿದರೆ ಅದು ಅತಿಶಯೋಕ್ತಿ ಅಲ್ಲ.

ಸತ್ಯದ ಮಾರ್ಗದಲ್ಲಿ ನಡೆಯುವುದು ದೇವರ ಪೂಜೆಗಿಂತ ದೊಡ್ಡದು. ನಮ್ಮ ಡಾ.ವಿ.ಲಕ್ಷ್ಮೀನಾರಾಯಣನವರು ರೋಗಿಯೇ ದೈವ ಸಮಾನ ಎಂದು ಅವಿರತವಾಗಿ ಸ್ಪಂದಿಸುತ್ತ ರೋಗಿಗಳನ್ನು ಆರೋಗ್ಯವಂತರನ್ನಾಗಿ ಮಾಡಲು ಹಗಲಿರುಳು ದುಡಿಯುತ್ತಿದ್ದಾರೆ ಎಂದರೆ ಖಂಡಿತವಾಗಿ ಅದು ಸುಳ್ಳಂತು ಅಲ್ಲವೇ ಅಲ್ಲ. ಭಗವಂತ ಅವರನ್ನು ನೂರಾರು ಕಾಲ ಬಾಳುವಂತೆ ಅಭಯವೀಯಲಿ.

–ಜಯಪ್ರಕಾಶ್ ನಾರಾಯಣ, ನಂಜನಗೂಡು

■ ರಾಜಕಾಲುವೆಗೆ ಕಸ ಹಾಕುವುದನ್ನು ತಡೆಗಟ್ಟಿ



ಮಾನ್ಯರೆ,

ಮೈಸೂರಿನ ಡಿ. ಸುಬ್ಬಯ್ಯ ರಸ್ತೆಯ ಬಳಿ ಇರುವ ರಾಜಕಾಲುವೆಗೆ ಪ್ರತಿನಿತ್ಯ ಕಸ ಹಾಕುತ್ತಿದ್ದು, ನೀರು ಸರಾಗವಾಗಿ ಹರಿಯದೇ ಸೊಳ್ಳೆ, ನೊಣಗಳ ಹಾವಳಿ ಮಿತಿಮೀರಿ ಸಾಂಕ್ರಾಮಿಕ ರೋಗ ಹರಡುವ ಭೀತಿ ಉಂಟಾಗಿದೆ. ಅಲ್ಲದೆ ಇದರ ವಾಸನೆಯಿಂದ ಇಲ್ಲಿನ ನಿವಾಸಿಗಳು ವಾಸ ಮಾಡಲು ತುಂಬಾ ತೊಂದರೆಯಾಗಿದ್ದು, ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಮಹಾನಗರ ಪಾಲಿಕೆ ಅಧಿಕಾರಿಗಳು ಸಿಸಿ ಕಾಮೆರಾ ಅಳವಡಿಸುವ ಮೂಲಕ ರಾಜಕಾಲುವೆಗೆ ಕಸ ಹಾಕುವವರನ್ನು ಪತ್ತೆ ಹಚ್ಚಿ ದಂಡ ವಿಧಿಸಬೇಕು. –ಶ್ರೀದೇವಿ ಎಸ್., ಡಿ.ಸುಬ್ಬಯ್ಯ ರಸ್ತೆ, ಮೈಸೂರು.

■ ಹಿರಿಯ ನಾಗರಿಕರ ಪಾಲಿಗೆ ವರದಾನವಾಗಿರುವ ಹಿರಿಯ ನಾಗರಿಕರ ಸಂರಕ್ಷಣಾ ಕಾಯ್ದೆ

ಮಾನ್ಯರೆ,

ತಂದೆ–ತಾಯಿಗಳನ್ನು ನಿರ್ಲಕ್ಷಿಸಿ, ಅವರನ್ನು ಸಾಕದಿದ್ದರೆ, ಅಂತಹ ಮಕ್ಕಳಿಗೆ ಆಸ್ತಿಯಲ್ಲಿ ಪಾಲು ದೊರಕುವುದಿಲ್ಲವೆಂದು ಕಂದಾಯ ಸಚಿವ ಕೃಷ್ಣ ಬೈರೇಗೌಡರು ರಾಜ್ಯ ವಿಧಾನಸಭೆಗೆ ತಿಳಿಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಒಂದು ವೇಳೆ ಅಂತಹ ಮಕ್ಕಳ ಹೆಸರಿಗೆ ಆಸ್ತಿಯನ್ನು ವರ್ಗಾಯಿಸುವ ಕುರಿತು ಮರಣ ಶಾಸನ ಅಥವಾ ದಾನಪತ್ರ ಬರೆದಿದ್ದರೂ ಅದನ್ನು ರದ್ದುಗೊಳಿಸಲಾಗುವುದೆಂದು ಸಚಿವರು ತಿಳಿಸಿದ್ದಾರೆ. ಈ ಬಗ್ಗೆ ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆ–2007ರ ಉಪಬಂಧಗಳನ್ನು ಸಚಿವರು ಉಲ್ಲೇಖಿಸಿದ್ದಾರೆ.

ದೇಶದಲ್ಲಿ ವಯಸ್ಸಾದ ತಂದೆ ತಾಯಿಗಳನ್ನು ನಿರ್ಲಕ್ಷಿಸುತ್ತಿರುವ ಹಲವಾರು ಪ್ರಕರಣಗಳು ಬೆಳಕಿಗೆ ಬರುತ್ತಿವೆ. ಜೀವಮಾನದ ಸಂಧ್ಯಾಕಾಲದಲ್ಲಿರುವ ಇಂತಹ ವೃದ್ಧರು, ಮಕ್ಕಳ ಹಿತಕ್ಕಾಗಿ ಜೀವನವಿಡಿ ಕಷ್ಟಪಟ್ಟರೂ ಸಹ, ಅಂತ್ಯಕಾಲದಲ್ಲಿ, ಅನಾಥಾಶ್ರಮಕ್ಕೋ ಅಥವಾ ವೃದ್ಧಾಶ್ರಮಕ್ಕೋ ಸೇರಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಹಿರಿಯ ನಾಗರಿಕರಿಗೆ ಮೇಲೆ ಹೇಳಲಾದ ಕಾಯಿದೆ ನೆರವಿಗೆ ಬರುತ್ತದೆ. ಹಿರಿಯ ನಾಗರಿಕರು ನೀಡುವ ದೂರು ಒಂದು ವೇಳೆ ಸಾಬೀತಾದ ಪಕ್ಷದಲ್ಲಿ ಪೋಷಕರು ತಮ್ಮ ಮಕ್ಕಳ ಅಥವಾ ಸಂಬಂಧಿಕರ ಹೆಸರಿಗೆ ಬರೆದಿರುವ ವಿಲ್ ಅಥವಾ ದಾನಪತ್ರ ರದ್ದುಗೊಳಿಸಿ, ಮತ್ತೆ ಪೋಷಕರ ಹೆಸರಿಗೆ ಮರುಸ್ಥಾಪಿಸಲು ಈ ಕಾಯಿದೆಯ ಸೆಕ್ಷನ್ 23ರ ಅನ್ವಯ ಅವಕಾಶ ಇರುತ್ತದೆ. ಈ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ರಾಜ್ಯ ಸರ್ಕಾರದಿಂದ ಆಗಬೇಕಾಗಿದೆ.


–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

■ ಇವರಿಗೆ ಯಾವ ನೈತಿಕ ಹಕ್ಕಿದೆ

ಮಾನ್ಯರೆ,

ಸಚಿವರು, ಶಾಸಕರ, ವೇತನ ಶೇ.100 ರಷ್ಟು ಹೆಚ್ಚಳಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದು, ಈ ಸುದ್ದಿ ಕೇಳಿ ಬಹುಶಃ ವಿಧಾನ ಸಭೆಯಲ್ಲಿ ಯಾವುದೇ ರೀತಿಯ ಚರ್ಚೆಯಾಗದೇ ಅಂಗೀಕಾರವಾಗುವ ಮಸೂದೆ ಎಂದರೇ ಇದೊಂದೇ ಇರಬಹುದು. ವಿಧಾನ ಸಭೆಯ ಮತ್ತು ಪರಿಷತ್‌ನ ಯಾವೊಬ್ಬ ಶಾಸಕರಿಗೂ ಆತ್ಮಸಾಕ್ಷಿ ಎಂಬುದಿಲ್ಲವೇ? ನಾವು ಸಾರ್ವಜನಿಕರ ತೆರಿಗೆ ಹಣದಿಂದಲೇ ಇಷ್ಟೊಂದು ಸಂಬಳ ಪಡೆಯಲು ಅರ್ಹರೇ ಎಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕು. ತಮ್ಮ ಸಂಬಳವನ್ನು ತಾವೇ ಹೆಚ್ಚು ಮಾಡಿಕೊಳ್ಳುವ ಇವರಿಗೆ ಯಾವ ನೈತಿಕ ಹಕ್ಕಿದೆ?

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು.



ಕೆಬಿಜೆಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...

ಮಡಿಕೇರಿಯ ಕೊಡವ ಪರಂಪರೆ ಕೇಂದ್ರ ಪ್ರಾರಂಭಕ್ಕೆ ಇಚ್ಛಾಸಕ್ತಿ ಕೊರತೆ



ಡಾ.ಮಂತರ್‌ಗೌಡ



'ಕೊಡಗು ಪರಂಪರೆ ಕೇಂದ್ರ' ಒಂದು ನೋಟ.



ರತಿ ವಿನಯ್ ಝಾ

> “ ಯಾವುದೇ ಕೊಡವ ಸಮಾಜ, ಅಖಿಲ ಕೊಡವ ಸಮಾಜ ಅಥವಾ ಕೊಡವ ಸಮಾಜಗಳ ಒಕ್ಕೂಟಗಳು ತಮ್ಮ ಪವಿತ್ರ ಭೂಮಿ ಕೊಡಗಿನ ವಾರಸುದಾರರಾಗಿ ತಮ್ಮದೇ ಈ ಹೆಮ್ಮೆಯ ಯೋಜನೆಯಲ್ಲಿ ಏಕೆ ಆಸಕ್ತಿ ತೋರಿಸಲಿಲ್ಲ ಎಂಬುದು ಅಚ್ಚರಿ ಸಂಗತಿ; ಜೊತೆಗೆ ವಿಷಾದದ ವಿಷಯವೂ ಆಗಿದೆ. ತಮ್ಮನ್ನು ತಾವೇ ಕಡೆಗಳಿಸಿಕೊಂಡರೆ ಬೇರೆಯವರು ಏನು ಮಾಡಲು ಸಾಧ್ಯ?

ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಮಾನರು. ಆದರೆ, ಭಾರತೀಯ ಪ್ರಜಾಪ್ರಭುತ್ವದಲ್ಲಿ ಮಾತ್ರ ಸಮಾನರು ಎಂಬುದು ಪ್ರಮುಖ ಧರ್ಮ ಮತ್ತು ಜಾತಿಗೆ ಸೀಮಿತವಾಗಿದೆ. ಅಲ್ಲದೆ, ಅವರ ಕೂಗು ಕೂಡ ಸರ್ಕಾರಕ್ಕೆ ಬಹುಬೇಗನೆ ತಲುಪುತ್ತದೆ.

ವಿಪರ್ಯಾಸವೆಂದರೆ, ವೋಟ್ ಬ್ಯಾಂಕ್ ಚುನಾವಣಾ ರಾಜಕೀಯಲ್ಲಿ, ಅಲ್ಪಸಂಖ್ಯಾತ ಧರ್ಮಕ್ಕೆ ಸೇರಿದವರ ಬೇಡಿಕೆ, ವಿಚಾರಗಳಿಗೆ ಎಲ್ಲಾ ರಾಜಕೀಯ ಪಕ್ಷಗಳು ವಿಶೇಷ ಗಮನ ನೀಡುತ್ತವೆ. **ಆದರೆ, ಹಿಂದೂಗಳಲ್ಲಿ ಮಾತ್ರ ಸಣ್ಣ ಅಲ್ಪಸಂಖ್ಯಾತ ಜಾತಿ (ಅಥವಾ ಜನಾಂಗೀಯ ಗುಂಪು)ಗೆ ಸೇರಿದವರನ್ನು ನಿರ್ಲಕ್ಷಿಸಲಾಗುತ್ತಿದೆ.** ಅವರ ಕೂಗು ಸರ್ಕಾರಕ್ಕೆ ಕೇಳಿಸುವುದಿಲ್ಲ. ಕರ್ನಾಟಕದ ಕೊಡವರು ಕಡೆಗಣಿತ ಅಂತಹ ಒಂದು ಸಣ್ಣ ಪ್ರವರ್ಗದ ಹಿಂದೂ ಅಲ್ಪಸಂಖ್ಯಾತರು.

ಇಂತಹ ಘೋರ ಅನ್ಯಾಯಕ್ಕೆ ಒಂದು ಸ್ಪಷ್ಟ ಉದಾಹರಣೆಯೆಂದರೆ, ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿರುವ ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿನ **'ಕೊಡಗು ಪರಂಪರೆ ಕೇಂದ್ರ'** (KODAVAHERITAGE CENTRE). ಈ ಯೋಜನೆಯನ್ನು 22 ವರ್ಷಗಳ ಹಿಂದೆ **ಕೊಡವ ಐಎಎಸ್ ಮಹಿಳಾ ಅಧಿಕಾರಿ ಶ್ರೀಮತಿ ರತಿ ವಿನಯ್ ಝಾ** ಅವರು ಕೇಂದ್ರ ಪ್ರವಾಸೋದ್ಯಮ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿದ್ದಾಗ ರೂಪಿಸಲಾಗಿತ್ತು.

ಅವರು ಕೆಲ ಅತ್ಯಂತ ಸಮಂಜಸ ಕಾರಣಗಳಿಗಾಗಿ ಈ ವಿಶೇಷ ಕೊಡವ ಜನಾಂಗೀಯ ಸಮುದಾಯದ ವಸ್ತು ಸಂಗ್ರಹಾಲಯವನ್ನು (ಕೊಡಗು ಪರಂಪರೆ ಕೇಂದ್ರ) ದೃಶ್ಯೀಕರಿಸಿದ್ದು. ಅವುಗಳಲ್ಲಿ;

1. ಕೊಡವರು ಒಂದು ಅನನ್ಯ, ವಿಶಿಷ್ಟ ಜನಾಂಗೀಯ (ಬುಡಕಟ್ಟು) ಸಮುದಾಯವಾಗಿದ್ದು, ಪಶ್ಚಿಮ ಘಟ್ಟಗಳ ದಟ್ಟವಾದ ಮಳೆಕಾಡುಗಳನ್ನು ಹೊರತುಪಡಿಸಿ, ಜಗತ್ತಿನ ಬೇರೆಲ್ಲಿಯೂ ಈ ಸಮುದಾಯ ಕಂಡುಬರುವುದಿಲ್ಲ.

2. ಕೊಡವ ಜನಾಂಗೀಯ ಸಮುದಾಯ ವಾಸಿಸುವ ಭೌಗೋಳಿಕ ಪ್ರದೇಶವು ತುಂಬ ಚಿಕ್ಕದಾಗಿದೆ. ಇದು ಪಶ್ಚಿಮ ಘಟ್ಟಗಳ ಪೂರ್ವ ಇಳಿಜಾರಿನಲ್ಲಿ 4,102 ಚದರ ಕಿ.ಮೀ. (ಸುಮಾರು 60 ಮೈಲಿ ಉದ್ದ ಮತ್ತು 35 ಮೈಲಿ ಅಗಲ) ವಿಸ್ತೀರ್ಣದಲ್ಲಿದೆ.

3. ಕೊಡವರ ಜನಸಂಖ್ಯೆ ಅನಾದಿಕಾಲದಿಂದಲೂ ಅಪೂರ್ವ ಜರ ಭೂಮಿಯಾಗಿರುವ ಕೊಡಗಿನಲ್ಲಿ, 150 ಲಕ್ಷದಷ್ಟು ಕಡಿಮೆ ಇದೆ.

4. ಕೊಡಗಿನಲ್ಲಿ ಕೊಡವರು ಒಕ್ಕ ಎಂಬ ಕುಟುಂಬದೊಂದಿಗೆ ಕುಲಗಳಾಗಿ ವಾಸಿಸುತ್ತಾರೆ. ಅವರ ಪೂರ್ವಜರ ಮನೆಯು ತನ್ನದೇ ಆದ ಪ್ರತ್ಯೇಕ ಹೆಸರಿನೊಂದಿಗೆ 'ಐನ್‌ಮನೆ' ಅಥವಾ 'ಬಲ್ಯ ಮನೆ' ಎಂದು ಕರೆಯಲ್ಪಡುತ್ತದೆ.

5. ಕೊಡವರು ತಮ್ಮ ನೆರೆಹೊರೆಯ ಸಮುದಾಯಗಳಾದ ಮಲಯಾಳಿಗಳು, ಕನ್ನಡಿಗರು, ತುಳುವರು ಮತ್ತು ತಮಿಳರಿಗಿಂತ ತಮ್ಮ ದೈಹಿಕ ಲಕ್ಷಣ, ಭಾಷೆ, ಉಡುಪು, ಆಹಾರ ಪದ್ಧತಿ, ಮದುವೆ ಸಂಪ್ರದಾಯ, ಪೂಜಾ ವಿಧಾನ (ತಮ್ಮ ಪೂರ್ವಜರನ್ನು ಪೂಜಿಸುತ್ತಾರೆ), ಸಂಸ್ಕೃತಿ ಹಾಗೂ ಹಬ್ಬಗಳ ಆಚರಣೆಯಲ್ಲಿ ಭಿನ್ನತೆ ಹೊಂದಿದ್ದಾರೆ.

6. ಕೊಡವರು ಎಂದಿಗೂ ತಮ್ಮದೇ ಸಮುದಾಯದ ರಾಜರನ್ನು ಹೊಂದಿರಲಿಲ್ಲ. ಇತಿಹಾಸದ ಆರಂಭದಲ್ಲಿ ನಾಯಕರೆಂದು ಕರೆಯಲ್ಪಡುವ ಸ್ಥಳೀಯ ಮುಖ್ಯಸ್ಥರು ಇದ್ದರು. ಅವರಲ್ಲಿ ಕೆಲವರು ಕೊಡವರಾಗಿದ್ದರು. ಮೌಖಿಕ ಸಂಪ್ರದಾಯದಲ್ಲಿ ಕೊಡವರ ಜಾನಪದ ಕಥೆಗಳು ಅವರ ಗತಕಾಲದ ಬಗ್ಗೆ ಹೇಳುತ್ತವೆ.

7. ಕೊಡವರು ಮೊದಲಿಗೆ ಬೇಟೆಗಾರರು ಮತ್ತು ಕೃಷಿಕರಾಗಿದ್ದರು. ನಂತರ ವೀರ ಕ್ಷತ್ರಿಯರಾಗಿ ಸೈನಿಕರಾದರು.

8. ಕೊಡವರು ಮೊದಲು ನಾಯಕರ ಸೇನೆಯಲ್ಲಿ ಸೇವೆ ಮಾಡಿದರು. ನಂತರ ಲಿಂಗಾಯತ ರಾಜರು ಹಾಗೂ ಮೊದಲನೆಯ ಮಹಾಯುದ್ಧದ ನಂತರ ಬ್ರಿಟಿಷ್ ಸೈನ್ಯದಲ್ಲಿ ಮತ್ತು ಕೆಲವರು ಮೈಸೂರು ರಾಜರ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಯೋಧ ವರ್ಗವಾಗಿ ದ್ದರು. ತದ ನಂತರ **ಬ್ರಿಟಿಷ್ ಸೈನ್ಯದಲ್ಲಿ ಸೇವೆ ಸಲ್ಲಿಸಿ, ಸ್ವಾತಂತ್ರ್ಯ ನಂತರ ಭಾರತೀಯ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅವರಲ್ಲಿ ಅತ್ಯಂತ ಪ್ರಸಿದ್ಧರು–ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಮತ್ತು ಜನರಲ್ ಕೆ.ಎಸ್.ತಿಮ್ಮಯ್ಯ.**

9. ಕೊಡವರು ಬಹಳ ಚಿಕ್ಕ ಸಮುದಾಯ. ಆ ಕಾರಣ ಅವರಿಗೆ ರಾಜಕೀಯವಾಗಿ ಧ್ವನಿ ಇಲ್ಲ. ಕೊಡವರು ಸಮಸ್ಯೆ ಎದುರಿಸುವಾಗ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಅವರ ಹಕ್ಕು ಮತ್ತು ಸ್ವಾತಂತ್ರ್ಯ ರಕ್ಷಣೆಗೆ ಮುಂದಾಗುವುದಿಲ್ಲ. ಅತೀ ಅಲ್ಪ ಸಂಖ್ಯಾತರಾದ ದೇಶದ ಎಲ್ಲಾ ಕ್ಷೇತ್ರಗಳಲ್ಲಿ ಹೆಸರು ಮಾಡಿರುತ್ತಾರೆ.

10. ಅದಾಗ್ಯೂ **ಕೊಡವ ವಸ್ತು ಸಂಗ್ರಹಾಲಯ** ಸ್ಥಾಪಿಸುವುದು ಅತ್ಯಂತ ತುರ್ತು. ಅದಕ್ಕೆ ಬಲವಾದ ಕಾರಣವೆಂದರೆ, ನೆರೆಹೊರೆಯ ರಾಜ್ಯಗಳಿಂದ ವಲಸೆ ಬಂದವರ ಸಂಖ್ಯೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕೊಡವರು ಶೀಘ್ರದಲ್ಲೇ ತಮ್ಮ ಸ್ವಂತ ನೆಲದಲ್ಲಿ ಕಣ್ಮರೆಯಾಗುವ ಸಮುದಾಯವಾಗಲಿದೆ ಎಂಬ ಆತಂಕವಿದೆ. ಕೊಡಗು ಎಲ್ಲಾ ಋತುಗಳಲ್ಲಿಯೂ ಇಡೀ ಭಾರತದ ಪ್ರವಾಸಿಗರಿಂದ ತುಂಬಿ ತುಳುಕುತ್ತಿರುತ್ತದೆ. ಮುಂಗಾರು ಮಳೆ ಕಾಲದಲ್ಲಿ ಸಹ ಅತೀ ಹೆಚ್ಚು ಪ್ರವಾಸಿಗರು ಇಲ್ಲಿಗೆ ಭೇಟಿ ನೀಡುತ್ತಾರೆ.

ಆದ್ದರಿಂದ, ಕೊಡವರ ಇತಿಹಾಸ ಮತ್ತು ಸಂಸ್ಕೃತಿಯ ಭಂಡಾರ ಹಾಗೂ ನಿಧಿಯಾಗುವ ಈ ವಸ್ತುಸಂಗ್ರಹಾಲಯವು ಅನಿವಾರ್ಯವಾಗಿದೆ ಆ ಮೂಲಕ ಪ್ರತಿದಿನ ಭಾರೀ ಸಂಖ್ಯೆಯಲ್ಲಿ ಕೊಡಗಿಗೆ ಭೇಟಿ ನೀಡುವ ಪ್ರವಾಸಿಗರು ಈ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿ, ಈ ಸುಂದರ ನೆಲದ ಮೂಲ ನಿವಾಸಿಗಳಾದ ಕೊಡವರ ಬಗ್ಗೆ ತಿಳಿದುಕೊಳ್ಳಬಹುದು.

ಇದರ ಪ್ರಸ್ತುತತೆ ಮತ್ತು ಪ್ರಾಮುಖ್ಯತೆ ಬಹಳಷ್ಟು ಇದ್ದರೂ 22 ವರ್ಷಗಳಲ್ಲಿ ಇದು ನಿರ್ಲಕ್ಷ್ಯಕ್ಕೊಳಗಾದ ಯೋಜನೆಯಾಗಿಯೇ ಉಳಿದಿದೆ. ಅದೃಷ್ಟವಶಾತ್, ಇದೀಗ **ಮಡಿಕೇರಿ ಕಾಂಗ್ರೆಸ್ ಶಾಸಕ ಡಾ.ಮಂತರ್‌ಗೌಡ** ಸದರಿ ಯೋಜನೆಯ ಪುನರುಜ್ಜೀವನಗೊಳಿಸುವ ಬಗ್ಗೆ ಆಸಕ್ತಿ ತೋರಿದ್ದಾರೆ. **ದುರದೃಷ್ಟಕರ ಸಂಗತಿಯೆಂದರೆ, ಹಿಂದಿನ ಬಿಜೆಪಿ ಶಾಸಕರಲ್ಲಿ ಒಬ್ಬರು ಸ್ವತಃ ಕೊಡವರಾಗಿದ್ದೂ, ಪತ್ರಿಕೆಯವರು ಮತ್ತು ಕೆಲವು ಕೊಡವ ಕಾರ್ಯಕರ್ತರು ಒತ್ತಾಯ ಮಾಡಿದರೂ ಅದರ ಬಗ್ಗೆ ಕಿಂಚಿತ್ತೂ ತಲೆಕೆಡಿಸಿಕೊಳ್ಳಲಿಲ್ಲ.**

ಅಕ್ಟೋಬರ್ 2023ರಲ್ಲಿ ಶ್ರೀಮತಿ ರತಿ ವಿನಯ್ ಝಾ ಅವರು ಬರೆದ ಪತ್ರಕ್ಕೆ ಡಾ.ಮಂತರ್‌ಗೌಡ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ಈ ಹಿನ್ನೆಲೆಯಲ್ಲಿ ಶಾಸಕರು ಯೋಜನೆ ಪೂರ್ಣಗೊಳಿಸುವ ಭರವಸೆ ಮೂಡಿದೆ. ಶಾಸಕ ಡಾ.ಮಂತರ್ ಗೌಡ ಅವರಿಗೆ ಧನ್ಯವಾದಗಳು.

ಶ್ರೀಮತಿ ರತಿ ಝಾ ಅವರು ಕೊಡಗು ಜಿಲ್ಲಾಧಿಕಾರಿಗೂ ಇದೇ ರೀತಿಯಲ್ಲಿ ಪತ್ರ ಬರೆದಿದ್ದರು. ಆದರೆ ತಕ್ಷಣದ ಪ್ರತಿಕ್ರಿಯೆ ಮಾತ್ರ ಬಂದಿಲ್ಲ. ಆದರೂ ಶ್ರೀಮತಿ ರತಿ ವಿನಯ್ ಝಾ ಅಮ ಪತ್ರ ಬರೆದು ಕನಿಷ್ಠ ಒಂದೂವರೆ ವರ್ಷದ ನಂತರ ಪಿಪಿಪಿ (PPP–ಸಾರ್ವಜನಿಕ; ಖಾಸಗಿ ಸಹಭಾಗಿತ್ವ) ಮಾದರಿಯ ಸಲಹೆಯ ಬಗ್ಗೆ ನಿರ್ಧಾರ ಕೈಗೊಳ್ಳಲಾಗಿದೆ. ಜೊತೆಗೆ ಕರ್ನಾಟಕ ವಿಧಾನಸಭೆಯಲ್ಲಿ ಭರವಸೆ ನೀಡಲಾಗಿದೆ ಎಂದು ಅವರು ಸಂತೋಷ ವ್ಯಕ್ತಪಡಿಸಿದ್ದಾರೆ. ಶ್ರೀಮತಿ ರತಿ ವಿನಯ್ ಝಾ ಅವರ ಪತ್ರದ ಪೂರ್ಣ ಪಾಠವನ್ನು ಪಕ್ಕದ ಕಾಲಂನಲ್ಲಿ ಪ್ರಕಟಿಸಲಾಗಿದೆ.

ಯಾವುದೇ ಕೊಡವ ಸಮಾಜ, ಅಖಿಲ ಕೊಡವ ಸಮಾಜ ಅಥವಾ ಕೊಡವ ಸಮಾಜಗಳ ಒಕ್ಕೂಟಗಳು ತಮ್ಮ ಪವಿತ್ರ ಭೂಮಿ ಕೊಡಗಿನ ವಾರಸುದಾರರಾಗಿ ತಮ್ಮದೇ ಈ ಹೆಮ್ಮೆಯ ಯೋಜನೆಯಲ್ಲಿ ಏಕೆ ಆಸಕ್ತಿ ತೋರಿಸಲಿಲ್ಲ ಎಂಬುದು ಅಚ್ಚರಿ ಸಂಗತಿ; ಜೊತೆಗೆ ವಿಷಾದದ ವಿಷಯವೂ ಆಗಿದೆ.

(ಇಂಗ್ಲೀಷ್ ಲೇಖನದ ಕನ್ನಡಾನುವಾದ)

email:
voice@starofmysore.com

ಶ್ರೀಮತಿ ರತಿ ವಿನಯ್ ಝಾ IAS ಅವರು ಶಾಸಕ ಡಾ.ಮಂತರ್‌ಗೌಡರಿಗೆ ಬರೆದ ಪತ್ರ

ಆತ್ಮೀಯ ಶ್ರೀ ಮಂತರ್‌ಗೌಡ,

ಇಂದು ಬೆಳಗ್ಗೆ ನೀವು ನನಗೆ ಕರೆ ಮಾಡಿದ್ದ ಸಂಬಂಧ ಮಡಿಕೇರಿಯಲ್ಲಿನ ಕೊಡವ ಪರಂಪರೆ ಯೋಜನೆಯ ಸಂಕ್ಷಿಪ್ತ ಮಾಹಿತಿ ಇಲ್ಲಿದೆ; 2003–2004ನೇ ಹಣಕಾಸು ವರ್ಷದಲ್ಲಿ ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು ಕೊಡಗು ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ 5 ಕೋಟಿ ರೂ. ಅನುದಾನ ನೀಡಿತು. ಅಷ್ಟು ವರ್ಷಗಳಲ್ಲಿ ಅದೇ ಮೊದಲ ಬಾರಿಗೆ ಪ್ರವಾಸೋದ್ಯಮಕ್ಕೆ ಉತ್ತಮ ಅವಕಾಶವಿರುವ ಕೊಡಗು ಜಿಲ್ಲೆ ಭಾರತ ಸರ್ಕಾರದಿಂದ ಅಭಿವೃದ್ಧಿಗಾಗಿ ಅನುದಾನ ಪಡೆಯಿತು.

ಗುಜರಾತ್‌ನಲ್ಲಿ ಪಾರ್ಸಿ ಪರಂಪರೆ ಕೇಂದ್ರಕ್ಕೆ ನೀಡಿದ ಅನುದಾನದಂತೆಯೇ ಕೊಡವ ಪರಂಪರೆ ಕೇಂದ್ರವನ್ನು ಸ್ಥಾಪಿಸಲು 1 ಕೋಟಿ ಅನುದಾನ ಮೀಸಲಿಡಲಾಗಿತ್ತು. ಆಗ ನಾನು ಪ್ರವಾಸೋದ್ಯಮ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿದ್ದೆ. **ಆದರೆ ಐದು ವರ್ಷಗಳೇ ಕಳೆದರೂ ಕೇಂದ್ರ ಸ್ಥಾಪನೆ ಸಂಬಂಧ ಯಾವುದೇ ಪ್ರಕ್ರಿಯೆ ನಡೆದಿರಲಿಲ್ಲ. ಹಾಗಾಗಿ ಕೇಂದ್ರಕ್ಕೆ ಅಗತ್ಯ ಭೂಮಿ ಮಂಜೂರು ಮಾಡಲು ಕ್ರಮಕ್ಕೆ ಮುಂದಾದೆ. ಬಳಿಕ ಕೊಡಗು ಜಿಲ್ಲಾಡಳಿತ ಗುರುತಿಸಿದ ಕೆಲವು ಸ್ಥಳಗಳನ್ನು ನಾನು ಪರಿಶೀಲಿಸಿದೆ.**

ಜಿಲ್ಲೆಯ ಬೇರೆಡೆಗಳಿಗಿಂತ ಮಡಿಕೇರಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚಿನ ಅವಕಾಶ ಇರುವ ಹಿನ್ನೆಲೆಯಲ್ಲಿ ಇಲ್ಲಿ ಸ್ಥಳ ಆಯ್ಕೆ ಮಾಡಲಾಯಿತು. ಆ ಮೂಲಕ ಮಡಿಕೇರಿಯ ಗಾಳಿಬೀಡು ಪ್ರದೇಶದಲ್ಲಿ ಮಹೀಂದ್ರ ರೆಸಾರ್ಟ್ ಎದುರು (ಮರ್ಕಾರಾ ಗಾಲ್ಫ್ ಕೋರ್ಸ್ ಮೇಲಿಂದಲೂ ನೋಡಬಹುದು) ಭೂಮಿ ಮಂಜೂರು ಆಯಿತು.

ಬಳಿಕ ಕೇಂದ್ರ ಸರ್ಕಾರದ ಅನುದಾನಕ್ಕೆ ರಾಜ್ಯ ಸರ್ಕಾರದ ಅನುದಾನ ಸೇರ್ಪಡೆಗೊಂಡು ಕೇಂದ್ರದ ನಿರ್ಮಾಣ ಕಾರ್ಯ ಪ್ರಾರಂಭವಾಯಿತು. ಈ ವೇಳೆ ಪ್ರಸಾದ್ ಜಿಲ್ಲಾಧಿಕಾರಿಯಾಗಿದ್ದರು. ನಾನು ಸಹ ಸ್ಥಳ ಪರಿಶೀಲಿಸಿದ್ದೆ. ಆದರೆ ಅವರ ವರ್ಗಾವಣೆಯಾದ ನಂತರ ಕಾಮಗಾರಿ ಹೆಚ್ಚೇನೂ ಪ್ರಗತಿ ಕಾಣಲಿಲ್ಲ. ಜೊತೆಗೆ ಗುತ್ತಿಗೆದಾರ ಭ್ರಷ್ಟಾಚಾರ ಎದುರಿಸುವಂತಾಯಿತು.

ದುರದೃಷ್ಟವಶಾತ್, ಈ ಯೋಜನೆ ಉದಾಸೀನತೆ ಹಾಗೂ ಭ್ರಷ್ಟಾಚಾರದಿಂದ ಹಿನ್ನಡೆ ಅನುಭವಿಸುವಂತಾಯಿತು. ಹೀಗೆ ಇಷ್ಟು ವರ್ಷಗಳು ವಿಳಂಬವಾಗಲು ಕಾರಣವಾಯಿತು. ನಾನು ಈ ವಿಷಯವನ್ನು ಮತ್ತೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಪ್ರಸ್ತಾಪಿಸಿದಾಗ, ರಾಜ್ಯ ಸರ್ಕಾರದ ಪ್ರವಾಸೋದ್ಯಮ ಕಾರ್ಯದರ್ಶಿಯಾಗಿದ್ದ ಪಂಕಜ್ ಪಾಂಡೆ ಕೂಡಲೇ ಕ್ರಮ ಕೈಗೊಂಡರು. ಆ ಬಳಿಕ ನಿರ್ಮಾಣ ಕಾಮಗಾರಿ ಪುನರಾರಂಭಗೊಂಡಿತು.

ಚಾರುಲತಾ ಸೋಮಲ್ ಅವರು ಕೊಡಗು ಜಿಲ್ಲಾಧಿಕಾರಿಯಾಗಿದ್ದಾಗ, 2021ರ ಅಂತ್ಯದ ವೇಳೆಗೆ ನಿರ್ಮಾಣ ಕಾಮಗಾರಿ ಬಹುತೇಕ ಪೂರ್ಣಗೊಂಡಿತ್ತು. ಅಕ್ಟೋಬರ್ 2021ರಲ್ಲಿ ಅವರು ನನ್ನನ್ನು ಸ್ಥಳಕ್ಕೆ ಕರೆದೊಯ್ದಿದ್ದರು. ಸದರಿ ಸ್ಥಳಕ್ಕೆ ಭೇಟಿ ನೀಡಿದ್ದೆ. ಅಂದಿನಿಂದಲೂ ಈ ಸಂಬಂಧ ನಾನು ಗಮನ ಹರಿಸುತ್ತಿದ್ದೇನೆ. ಆದರೆ ನಿರೀಕ್ಷಿತ ಮಟ್ಟದಲ್ಲಿ ಕಾಮಗಾರಿ ಸಾಗುತ್ತಿಲ್ಲ. **ಈ ಎಲ್ಲಾ ವರ್ಷಗಳಲ್ಲಿ ಯಾವುದೇ ಕೊಡವ ಸಂಘ ಸಂಸ್ಥೆ, ಸಂಘಟನೆಗಳು, ಅಥವಾ ಜನಪ್ರತಿನಿಧಿಗಳು ಇಲ್ಲವೇ ಕೊಡಗಿನ ಜಿಲ್ಲಾಡಳಿತದಿಂದ ಕಾಮಗಾರಿ ಪೂರ್ಣಗೊಳ್ಳುವ ಸಂಬಂಧ ಕನಿಷ್ಠ ಬದ್ಧತೆಯಿಂದ ಗಮನ ನೀಡದೇ ಇರುವುದು ನನಗೆ ಅಚ್ಚರಿ ಉಂಟು ಮಾಡಿದೆ.**

ಕಳೆದ ವರ್ಷ ರಾಜ್ಯ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿಯವರು ನಡೆಸಿದ ಕೊನೆಯ ಪರಿಶೀಲನೆಯಲ್ಲಿ ನನ್ನ ಅರಿವಿಗೆ ಬಂದಂತೆ, ಕಟ್ಟಡ, ಲ್ಯಾಂಡ್‌ಸ್ಕೇಪ್ ಹಾಗೂ ಕಾಂಪೌಂಡ್ ಕಾಮಗಾರಿ ಪೂರ್ಣಗೊಳಿಸಲು ಸುಮಾರು 4 ಕೋಟಿ ರೂ.ಗಿಂತಲೂ ಹೆಚ್ಚಿನ ಹಣದ ಅಗತ್ಯ ಇರುವುದು ತಿಳಿಯಿತು. ರಾಜ್ಯ ಸರ್ಕಾರದ ಹಣಕಾಸು ಇಲಾಖೆಯಲ್ಲಿ ಪ್ರಕ್ರಿಯೆ ಬಾಕಿ ಇರಬಹುದು. ಮುಂದಿನ ಕ್ರಮದ ಸಂಬಂಧ ಗಮನಿಸಬೇಕಾದ ಕೆಲ ಅಂಶಗಳು ಇಂತಿವೆ:

1. **ಕಟ್ಟಡ ಪರಿಶೀಲಿಸಿ, ಅದರ ಸದೃಢತೆ ಬಗ್ಗೆ ಪ್ರಮಾಣೀಕರಿಸಬೇಕು.** ಗೋಡೆ ಒಳಭಾಗವನ್ನು ಪ್ಲಾಸ್ಟರ್ ಮಾಡುವ ಮೂಲಕ ವಸ್ತುಸಂಗ್ರಹಾಲಯವಾಗಿ ಬಳಸಲು ಯೋಗ್ಯವಾಗಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ಮಡಿಕೇರಿಯ ಹವಾಮಾನ ಮತ್ತು ಕೀಟಗಳ ಬಾಧೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಎಚ್ಚರ ವಹಿಸಬೇಕು. ಕಟ್ಟಡವನ್ನು ಆದಷ್ಟು ಶೀಘ್ರದಲ್ಲಿ ಬಳಕೆಗೆ ಮುಕ್ತಗೊಳಿಸಬೇಕು. ಏಕೆಂದರೆ ಈ ರೀತಿ ಖಾಲಿ ಬಿಡುವುದರಿಂದ ಕಟ್ಟಡದ ಬಾಳಿಕೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ. ಜೊತೆಗೆ ಸಾರ್ವಜನಿಕರ ನಿಧಿಯ ವ್ಯರ್ಥ ಮತ್ತಷ್ಟು ಹೆಚ್ಚಾಗಲಿದೆ.

2. **ವಸ್ತುಸಂಗ್ರಹಾಲಯವನ್ನು ಸಜ್ಜುಗೊಳಿಸಬೇಕಾಗಿದೆ.** ಇದಕ್ಕಾಗಿ ವೆಚ್ಚವು ತಿಮ್ಮಯ್ಯ ವಸ್ತುಸಂಗ್ರಹಾಲಯದಷ್ಟೇ ಆಗಲಿದೆ. ಜೊತೆಗೆ ಅಷ್ಟೇ ಸಮಯ ತೆಗೆದುಕೊಳ್ಳಲಿದೆ. ಕೊಡಗು ಜಿಲ್ಲಾಧಿಕಾರಿಯವರು ವಸ್ತುಸಂಗ್ರಹಾಲಯದ ಸ್ಥಾಪನೆಯನ್ನು ಮೇಲ್ವಿಚಾರಣೆ ಮಾಡಿದ್ದರು. ಸಿಎಸ್‌ಆರ್ ನಿಧಿ ಸಂಗ್ರಹಿಸಿದ ನಂತರ ನಾನು ವೈಯಕ್ತಿಕವಾಗಿ ಕೊಡವ ಪರಂಪರೆ ಮತ್ತು ಸಂಸ್ಕೃತಿ ಕುರಿತು ವರ್ಚುವಲ್ ವಸ್ತುಸಂಗ್ರಹಾಲಯಕ್ಕಾಗಿ ಯೋಜನೆಯನ್ನು ಪ್ರಾರಂಭಿಸಿದ್ದೇನೆ. ಈ ಸಂಬಂಧಿತ ವೆಬ್‌ಸೈಟ್ ಅನ್ನು ಈ ವರ್ಷದ ಅಂತ್ಯದ ವೇಳೆಗೆ ಪ್ರಾರಂಭಿಸಲಾಗುವುದು. ಕೇಂದ್ರದಲ್ಲಿ ವಸ್ತುಸಂಗ್ರಹಾಲಯ ಸಜ್ಜುಗೊಳಿಸಲು ಅಗತ್ಯವಿದ್ದಲ್ಲಿ ಈ ವರ್ಚುವಲ್ ವಸ್ತುಸಂಗ್ರಹಾಲಯಕ್ಕಾಗಿ ಮಾಹಿತಿಯೊಂದಿಗೆ ಸಹಕರಿಸಲು ಸಿದ್ಧವಿದ್ದೇನೆ. ಇದರಿಂದ ಕೇಂದ್ರದ ವಸ್ತು ಸಂಗ್ರಹಾಲಯ ರೂಪಿಸುವ ವೆಚ್ಚ ಕಡಿಮೆ ಮಾಡಬಹುದು.

3. **ಈ ಕೇಂದ್ರದ ದೀರ್ಘಾವಧಿ ಮತ್ತು ವಾರ್ಷಿಕ ನಿರ್ವಹಣೆಯನ್ನು ಕರ್ನಾಟಕ ರಾಜ್ಯ ಸರ್ಕಾರ ಗಮನಿಸಬೇಕಿದೆ.** ರಾಜ್ಯ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಹಿಂದಿನ ಕಾರ್ಯದರ್ಶಿ, ಇದನ್ನು ಜೆಎಲ್‌ಆರ್ ವಹಿಸಿಕೊಳ್ಳಬಹುದು ಎಂದು ಸಲಹೆ ನೀಡಿದ್ದರು. ಕರ್ನಾಟಕದ ಲಾಭದಾಯಕ ಸಾರ್ವಜನಿಕ ಉದ್ದಿಮೆಯಾಗಿರುವ ಅದು ಅಗತ್ಯವಿರುವಂತೆ ನಿರ್ವಹಣೆ ಮಾಡಬಹುದು. ಆದರೆ ಈ ಜವಾಬ್ದಾರಿ ವಹಿಸಿಕೊಳ್ಳುವ ಸಂಬಂಧ ಆ ಸಂಸ್ಥೆಯವರು ಸಿದ್ಧವಿರುವ ವಿಚಾರ ಸ್ಪಷ್ಟವಾಗಿಲ್ಲ.

4. **ತಾಜ್ ಅಥವಾ ಮಹೀಂದ್ರ ಅಂತಹ ಆತಿಥ್ಯ ಪಾಲುದಾರರೊಂದಿಗೆ ಪಿಪಿಪಿ ಮಾದರಿಯಲ್ಲಿ ಇದನ್ನು ನಿರ್ವಹಿಸುವುದು ಉತ್ತಮ.** ಈ ಸಂಸ್ಥೆಗಳು ಮಡಿಕೇರಿಯಲ್ಲಿ ಸಹ ಇವೆ. ತಮ್ಮ ಸಿಎಸ್‌ಆರ್ ನಿಧಿ ಸೇರಿದಂತೆ ಇನ್ನಿತರೆ ಸಂಪನ್ಮೂಲದೊಂದಿಗೆ ವಾರ್ಷಿಕ ನಿರ್ವಹಣೆಯನ್ನೂ ವಹಿಸಿಕೊಳ್ಳಬಹುದು. ಇದನ್ನು ರಾಜ್ಯ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಸಮಾಲೋಚಿಸಬೇಕಿದೆ.

5. **ಕೊಡವ ಸಮಾಜಗಳು ಕೂಡ ಕೇಂದ್ರವನ್ನು ನಿರ್ವಹಿಸಲು ಮುಂದೆ ಬರಬಹುದು.** ಆದಾಗ್ಯೂ, ಯಾವುದೇ ವ್ಯಕ್ತಿ ಇಲ್ಲವೆ ಮಾಲೀಕತ್ವದ ಮಾದರಿ ಮತ್ತು ವ್ಯವಸ್ಥಾಪನೆಯ ಪಟ್ಟಿ ಮಾಡಲಾದ ನಿಗದಿತ 4, 5, 6ರ ವಾರ್ಷಿಕ ನಿರ್ವಹಣಾ ವೆಚ್ಚಗಳು ಇತ್ಯಾದಿಯನ್ನು ಸ್ಪಷ್ಟವಾಗಿ ತೋರ್ಪಡಿಸಬೇಕು ಹಾಗೂ ಯಾರು ಅದನ್ನು ಕೈಗೆತ್ತಿಕೊಳ್ಳುವರೋ ಅವರು ಅಂತಹ ವಾರ್ಷಿಕ ನಿಧಿಯನ್ನು ಸಂಗ್ರಹಿಸಲು ಸಮರ್ಥರಿರಬೇಕು. ತಿಮ್ಮಯ್ಯ ವಸ್ತು ಸಂಗ್ರಹಾಲಯ ಮಾದರಿಯು ಈ ವಿಷಯದ ಬಗ್ಗೆ ಸಾಕಷ್ಟು ಮಾಹಿತಿ ನೀಡುತ್ತದೆ. ಆದ್ದರಿಂದ ವಸ್ತು ಸಂಗ್ರಹಾಲಯದ ನಿರ್ವಹಣಾ ಯೋಜನೆ ಮತ್ತು ಅಂದಾಜುಗಳನ್ನು ಅದಕ್ಕೆ ಅನುಗುಣವಾಗಿ ಮಾಡಬಹುದು.

6. **ಇನ್ನೂ ಹಲವು ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ.** ಆದರೆ ಆರಂಭಿಕ ಸಮಸ್ಯೆಗಳನ್ನು ಬಗೆಹರಿಸಿ ಕನಿಷ್ಠ 2025ರ ಏಪ್ರಿಲ್ ವೇಳೆಗೆ ವಸ್ತುಸಂಗ್ರಹಾಲಯ ಪ್ರಾರಂಭಿಸಲು ಸಾಧ್ಯವಾದರೆ ಅದು ಒಂದು ದೊಡ್ಡ ಸಾಧನೆಯಾಗಲಿದೆ. ಆ ಮೂಲಕ ಸುಮಾರು 20 ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಯೋಜನೆ ಫಲಪ್ರದವಾಗಲಿದೆ. ಈ ಯೋಜನೆ ಮುಂದುವರೆಸುವ ಸಂಬಂಧ ನಿಮಗೆ ಯಾವುದೇ ಸಲಹೆ ಅಥವಾ ಸಹಾಯ ಬೇಕಾದಲ್ಲಿ ನನಗೆ ತಿಳಿಸಿ. ನನ್ನ ತವರು ನೆಲದ ಬಗ್ಗೆ ಹೆಮ್ಮೆಪಡುವ ಕೊಡವತಿಯಾಗಿ ಸಹಾಯ ಮಾಡಲು ಸಂತೋಷವಾಗುತ್ತದೆ.

ವಂದನೆಗಳೊಂದಿಗೆ,

ರತಿ ವಿನಯ್ ಝಾ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ
ಶನಿವಾರ 22 ಮಾರ್ಚ್ 2025

ಹನಿಟ್ರ್ಯಾಪ್ ಮೇಲಾಟ

ಕಾಂಗ್ರೆಸ್ ಕಡೆಯಿಂದ ಚೀಟಿ ಬಂದ ನಂತರವೇ ಯತ್ನಾಳ್ 'ಹನಿಟ್ರ್ಯಾಪ್' ವಿಚಾರ ಪ್ರಸ್ತಾಪಿಸಿದ್ದು!

ಬಿಜೆಪಿ ಶಾಸಕ ಸುರೇಶ್‌ಗೌಡ ಹೊಸ ಬಾಂಬ್



ಬೆಂಗಳೂರು, ಮಾ.21– ಯಾರೂ ನಿರೀಕ್ಷೆ ಮಾಡದ ಹನಿಟ್ರ್ಯಾಪ್ ವಿಚಾರ ರಾಜ್ಯ ರಾಜಕೀಯದಲ್ಲಿ ಭಾರೀ ಸಂಚಲನವನ್ನು ಮೂಡಿಸಿದೆ. ಗುರುವಾರ ಸದನದಲ್ಲಿ ಈ ವಿಚಾರವನ್ನು ಬಿಜೆಪಿಯ ಹಿರಿಯ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಪ್ರಸ್ತಾಪಿಸಿದ್ದರು.

ಈ ನಡುವೆ ಬಜೆಟ್ ಅಧಿವೇಶನದ ಕೊನೆಯ ದಿನವಾದ ಇಂದು (ಮಾ. 21) ಬಿಜೆಪಿಯ ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರದ ಶಾಸಕ ಬಿ.ಸುರೇಶ್‌ಗೌಡ ಹೊಸ ಬಾಂಬ್ ಸಿಡಿಸಿದ್ದಾರೆ. ಅವರ ಪ್ರಕಾರ, ಆ ಕಡೆಯಿಂದ (ಕಾಂಗ್ರೆಸ್) ಚೀಟಿ ಬಂದ ನಂತರವೇ, ಬಸನಗೌಡ ಪಾಟೀಲ್ ಯತ್ನಾಳ್ ಹನಿಟ್ರ್ಯಾಪ್ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಲು ಆರಂಭಿಸಿದ್ದು ಎಂದು ಹೇಳಿದ್ದಾರೆ.

ಸದನದಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದ ಸುರೇಶ್‌ಗೌಡ, ಹನಿಟ್ರ್ಯಾಪ್ ವಿಚಾರಕ್ಕೆ ಸಂಬಂಧಿಸಿದಂತೆ, ಆ ಕಡೆಯಿಂದ (ಆಡಳಿತ ಪಕ್ಷ) ಚೀಟಿ, ನಮ್ಮ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಬಂತು. ಅದಾದ ನಂತರವೇ ಯತ್ನಾಳ್ ಅವರು ಈ ವಿಚಾರದ ಸಂಬಂಧ ಮಾತನಾಡಲು ಆರಂಭಿಸಿದ್ದು ಎಂದು ಆರೋಪಿಸಿದ್ದಾರೆ.

ಆಡಳಿತ ಪಕ್ಷದ ಯಾರು ಯತ್ನಾಳ್ ಅವರಿಗೆ ಚೀಟಿ ಕಳುಹಿಸಿಕೊಟ್ಟಿದ್ದು, ಅದರ ತನಿಖೆಯಾಗಬೇಕು. ಇದು ಎಲ್ಲರಿಗೂ ಅಗೌರವ ಕೊಡುವ ಮತ್ತು ಗಂಭೀರ ವಿಚಾರ ಇದಾಗಿದೆ. ಸ್ಪೀಕರ್ ಅವರು ಇದರ ಬಗ್ಗೆ ಗಮನ ಕೊಡಬೇಕು, ಇದನ್ನು ತನಿಖೆಗೆ ಒಳಪಡಿಸಬೇಕು. ಇದರಿಂದಾಗಿ ಚೀಟಿ ಕಳುಹಿಸಿದ ಸಚಿವರು ಯಾರು ಎನ್ನುವುದು ರಾಜ್ಯದ ಜನತೆಗೆ ಗೊತ್ತಾಗಬೇಕು ಎಂದು ಸುರೇಶ್ ಗೌಡ ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿ ಏನಾಗುತ್ತಿದೆ ಎನ್ನುವುದು ಗೊತ್ತಾಗಬೇಕಿದೆ. ಇದನ್ನು ಕಡೆಗಣಿಸುವಂತಿಲ್ಲ. ಚೀಟಿ ಕಳುಹಿಸಿದವರು ಯಾರು, ಮುಖ್ಯಮಂತ್ರಿಗಳಿಗೆ ಆಪ್ತರಾಗಿರುವವರಾ ಎನ್ನುವ ಪ್ರಶ್ನೆಯನ್ನು ಸುರೇಶ್ ಗೌಡ ಎತ್ತಿದರು. ಆಗ ಮಧ್ಯ ಪ್ರವೇಶಿಸಿದ ಸಿಎಂ ಸಿದ್ದರಾಮಯ್ಯ, ಸುನೀಲ್ ಕುಮಾರ್ ಏನೋ ಈ ವಿಚಾರವನ್ನು ಪ್ರಸ್ತಾಪಿಸಿದರು. ಎಲ್ಲರೂ ಈ ವಿಚಾರದ ಬಗ್ಗೆ ಮಾತನಾಡಬೇಕಾ ಎಂದು ಸುರೇಶ್ ಗೌಡ ಅವರನ್ನು ಕೂರಿಸಿದರು.

ಕನ್ನಡಿಗರಿಗೆ ಕಾಡುತ್ತಿರುವ ಯಕ್ಷ ಪ್ರಶ್ನೆ ಏನಪ್ಪಾ ಅಂದರೆ, ಹನಿಟ್ರ್ಯಾಪ್ ಜಾಲದ ಬಗ್ಗೆ ಬಹಿರಂಗವಾಗಿ ದನಿ ಎತ್ತಿರುವ ಸಚಿವರೆಲ್ಲರೂ ಸಿಎಂ ಸಿದ್ದರಾಮಯ್ಯ ಅವರ ಬಣದಲ್ಲಿ ಗುರುತಿಸಿಕೊಂಡಿರುವವರು ಎನ್ನುವುದು ಕಾಕತಾಳೀಯವೋ ಅಥವಾ ಇದರ ಹಿಂದೆ ರಾಜಕೀಯ ಷಡ್ಯಂತ್ರವೇ ನಾದರೂ ಇದೆಯೋ. ಕಾಲವೇ ಎಲ್ಲದಕ್ಕೂ ಉತ್ತರಿಸಲಿದೆ ಎಂದು ಆರ್.ಅಶೋಕ್ ಲೇವಡಿ ಮಾಡಿದ್ದರು.

ಹಿಟ್ ಆಂಡ್ ರನ್ ಪ್ರಶ್ನೆಯೇ ಇಲ್ಲ; ಹನಿಟ್ರ್ಯಾಪ್ ಹಿಂದಿರುವವರ ಹೆಸರು ಹೊರ ಬರಲೇಬೇಕು

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ



ಬೆಳಗಾವಿ, ಮಾ.21– ಸಚಿವ ಕೆ.ಎನ್. ರಾಜಣ್ಣ ಈಗಾಗಲೇ ಹೇಳಿದ್ದಾರೆ. ಈ ಪ್ರಕರಣದಲ್ಲಿ ಹಿಟ್ ಆಂಡ್ ರನ್ ಪ್ರಶ್ನೆಯೇ ಇಲ್ಲ. ಹನಿಟ್ರ್ಯಾಪ್ ಹಿಂದೆ ಯಾರಿದ್ದಾರೆ ಅವರ ಹೆಸರು ಹೊರಗಡೆ ಬರಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ರಾಜಣ್ಣ ಹನಿಟ್ರಾಪ್ ವಿಚಾರದ ಬಗ್ಗೆ ಮಾಧ್ಯಮದ ಜೊತೆ ಮಾತನಾಡಿದ ಅವರು, ಕರ್ನಾಟಕ ರಾಜ್ಯದಲ್ಲಿ ಆಗಾಗ ಸಿಡಿ ಸದ್ದು ಆಗುತ್ತಿರುತ್ತದೆ. ಸರಿಯಾದ ದಾರಿಯಲ್ಲಿ ತನಿಖೆ ಆಗಬೇಕು ಎಂದರು. ಸಹೋದರ ರಮೇಶ ಜಾರಕಿಹೊಳಿ ಸಿಡಿ ಪ್ರಕರಣದಲ್ಲಿ ಹೀಗೆ ಆಯ್ತು. ಚರ್ಚೆ ಯಾಯಿತು, ತನಿಖೆಯಾಯಿತು. ಆದರೆ ಮಾಡಿದವರು ಯಾರು ಅಂತ ಬರಲಿಲ್ಲ. ಕೇವಲ ಇಬ್ಬರು ಮೂವರನ್ನು ಬಂಧಿಸಿದರು, ಆ ಪ್ರಕರಣದ ಹಿಂದೆ ಯಾರಿದ್ದರು ಎಂಬುದರ ಕುರಿತು ತಾರ್ಕಿಕ ಅಂತ್ಯ ಆಗಲಿಲ್ಲ ಎಂದು ತಿಳಿಸಿದರು.

ಗಂಭೀರ ಸಮಸ್ಯೆ ಕುರಿತು ಕಾಂಗ್ರೆಸ್ ಹೈಕಮಾಂಡ್ ಸೀರಿಯಸ್ ಆಗಿ ವರದಿ ತರಿಸಿಕೊಳ್ಳಬೇಕು. ರಾಜಣ್ಣ ಹನಿಟ್ರ್ಯಾಪ್ ಗಾಳಿಯಲ್ಲಿ ಹೇಳುವ ಮಾತಲ್ಲ, ತನಿಖೆಯಾಗಲಿ, ಸ್ವಪಕ್ಷೀಯರು ಇರಬಹುದು ಬೇರೆ ಪಕ್ಷದವರು ಇರಬಹುದು. ಇವರೇ, ಅವರೇ ಎಂದು ಹೇಳಲು ಆಗುವುದಲ್ಲ ಎಂದರು. ದೂರು ನೀಡಿದರೆ ಗೃಹ ಮಂತ್ರಿಗಳು ತನಿಖೆ ಮಾಡುವುದಾಗಿ ಹೇಳಿದ್ದಾರೆ. ರಾಜಕಾರಣಿಗಳ ಹೆಸರಿನಲ್ಲಿ ಕರ್ನಾಟಕದ ಹೆಸರನ್ನು ಹಾಳು ಮಾಡುವುದು ಬೇಡ. ಹೋರಾಟ ಮಾಡುವುದಾರೆ ಮಾಡಿ. ಆದರೆ ಇಂಥ ಹೀನ ಕೃತ್ಯಮಾಡಿಸಿ ಬಲಿಪಶು ಮಾಡಬೇಡಿ ಎಂದು ಹೇಳಿದರು.

ಹನಿಟ್ರ್ಯಾಪ್ ಪ್ರಕರಣದಿಂದ ರಾಜ್ಯದ ಮರ್ಯಾದೆ ಹಾಳು

ಮುಖ್ಯಮಂತ್ರಿ ರಾಜೀನಾಮೆ ಕೊಡಲಿ: ಮಾಜಿ ಸಿಎಂ ಬೊಮ್ಮಾಯಿ ಆಗ್ರಹ



ನವದೆಹಲಿ, ಮಾ.21– ಹನಿಟ್ರ್ಯಾಪ್ ಪ್ರಕರಣ ಇಡೀ ದೇಶದಲ್ಲಿ ಕರ್ನಾಟಕದ ಮರ್ಯಾದೆಯನ್ನು ಹಾಳು ಮಾಡಿದೆ. ರಾಜ್ಯದಲ್ಲಿ ನೈತಿಕತೆ ಕಳೆದುಕೊಂಡಿರುವ ಕ್ರಿಮಿನಲ್ ಕ್ಯಾಬಿನೆಟ್ ರಾಜ್ಯದಲ್ಲಿದೆ. ಈ ಪ್ರಕರಣ ಮುಖ್ಯಮಂತ್ರಿಗಳ ಮೂಗಿನ ನೇರಕ್ಕೆ ನಡೆದಿರುವುದರಿಂದ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.

ಈ ಕುರಿತು ನವದೆಹಲಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಧಿಕಾರದ ಲಾಲಸೆಯಿಂದ ಕಾಂಗ್ರೆಸ್ ಪಕ್ಷ ಆಡಳಿತವನ್ನು ನೈತಿಕ ಅಧಃಪತನಕ್ಕೆ ತೆಗೆದುಕೊಂಡು ಹೋಗಿದೆ. ಈ ಸರ್ಕಾರದ ಅವಧಿಯಲ್ಲಿ ಎರಡು ವರ್ಷದಲ್ಲಿ ಸುಮಾರು ಹತ್ತು ಹಗರಣಗಳು ಹೊರಗೆ ಬಂದಿವೆ. ಎಲ್ಲಿ ಕೈ ಹಾಕಿದರೂ ಅಲ್ಲಿ ಹಗರಣ ಸಿಗುತ್ತವೆ. ಹೀಗಾಗಿ ವಿಧಾನಸಭೆಯಲ್ಲಿ ನೈತಿಕ ಅಧಃಪತನ ನೋಡುತ್ತಿದ್ದೇವೆ. ಇದುವರೆಗೂ ರಾಜ್ಯದಲ್ಲಿ ಮನಿ ಕ್ರೈಸಿಸ್ ಇತ್ತು ಈಗ ಹನಿ ಕ್ರೈಸಿಸ್ ಶುರುವಾಗಿದೆ ರಾಜ್ಯ ಸರ್ಕಾರ ಆರ್ಥಿಕವಾಗಿಯೂ ದಿವಾಳಿಯಾಗಿದೆ. ನೈತಿಕವಾಗಿಯೂ ದಿವಾಳಿಯಾಗಿದೆ ಎಂದು ಆಕ್ರೋಶ ಹೊರಹಾಕಿದರು.

ಒಬ್ಬ ಸಚಿವರು ವಿಧಾನಸಭೆಯಲ್ಲಿ ತಮ್ಮ ಮೇಲೆ ಹನಿಟ್ರ್ಯಾಪ್ ಮಾಡುವ ಪ್ರಯತ್ನ ನಡೆದಿತ್ತು ಎಂದು ಹೇಳುವ ಸ್ಥಿತಿಗೆ ಬಂದಿದ್ದಾರೆ. ಕಳೆದ ಹದಿನೈದು ದಿನಗಳಿಂದ ವಿಧಾನಸಭೆಯ ಮೊಗಸಾಲೆಯಲ್ಲಿ ಈ ಬಗ್ಗೆ ಚರ್ಚೆ ನಡೆಯುತ್ತಿದ್ದರೂ ಮುಖ್ಯಮಂತ್ರಿಗಳು ಸುಮ್ಮನೆ ನೋಡುತ್ತಾ ಕೂತಿದ್ದಾರೆ. ಇವತ್ತು ಅದು ಸ್ಫೋಟ ಗೊಂಡಿದೆ. ಸಚಿವ ಸಂಪುಟದಲ್ಲಿಯೇ ಈ ರೀತಿ ನಡೆಯುತ್ತಿರುವಾಗ ಈ ಸಚಿವ ಸಂಪುಟವನ್ನು ಏನೆಂದು ಕರೆಯಬೇಕು. ರಾಜ್ಯವನ್ನು ಆಳುವ ನೈತಿಕತೆ ಕಳೆದುಕೊಂಡಿರುವ ಕ್ರಿಮಿನಲ್ ಕ್ಯಾಬಿನೆಟ್ ರಾಜ್ಯದಲ್ಲಿದೆ ಎಂದು ಹೇಳಿದರು.

ನನ್ನ ಪ್ರಕಾರ ಈ ಅನೈತಿಕ ಚಟುವಟಿಕೆ ಮುಖ್ಯಮಂತ್ರಿಯವರ ಮೂಗಿನ ನೇರಕ್ಕೆ ನಡೆಯುತ್ತಿರುವುದರಿಂದ ಅವರು ನೈತಿಕ ಹೊಣೆ ಹೊತ್ತು ರಾಜಿನಾಮೆ ಕೊಡಬೇಕು. ಇಲ್ಲದಿದ್ದರೆ ರಾಜ್ಯದ ಜನತೆ ಯಾಕಾದರೂ ಇಂತಹ ಸರ್ಕಾರ ಅಧಿಕಾರಕ್ಕೆ ತಂದಿದ್ದೇವೆ ಎಂದು ಪಶ್ಚಾತಾಪ ಪಡುವಂತಾಗುತ್ತದೆ ಎಂದು ಹೇಳಿದರು.

ಸಹಕಾರ ಸಚಿವರು 48 ಜನರ ಸಿಡಿಗಳಿವೆ ಎಂದು ಹೇಳಿರುವ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಸಚಿವ ರಾಜಣ್ಣ ಅವರಿಗೆ ಈ ಬಗ್ಗೆ ಇನ್ನೂ ಹೆಚ್ಚಿ ಮಾಹಿತಿ ಇರಬಹುದು ಅವರು ಅದೆಲ್ಲವನ್ನೂ ತನಿಖೆಗೆ ಒಪ್ಪಿಸಬೇಕು. ಈ ರೀತಿಯ ಅನೈತಿಕ ಚಟುವಟಿಕೆಗಳನ್ನು ಮಾಡುವ ಯಾವುದೇ ಪಕ್ಷದ ವ್ಯಕ್ತಿ ಇರಲಿ ಅವರ ವಿರುದ್ಧ ಕಠಿಣ ಶಿಕ್ಷೆಯಾಗಬೇಕು. ಈ ಪ್ರಕರಣದ ತನಿಖೆಯನ್ನು ಹೈಕೋರ್ಟ್ ನ ಹಾಲಿ ಅಥವಾ ನಿವೃತ್ತ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು. ಈ ಪ್ರಕರಣದ ಬಗ್ಗೆ ಈಗಾಗಲೇ ರಾಷ್ಟ್ರ ಮಟ್ಟದಲ್ಲಿ ಸುದ್ದಿಯಾಗಿರುವುದರಿಂದ ಕೇಂದ್ರದ ನಾಯಕರ ಗಮನಕ್ಕೂ ಬಂದಿರುತ್ತದೆ. ಈ ಪ್ರಕರಣದ ತನಿಖೆಯ ಹಾದಿಯ ನಂತರ ಮುಂದಿನ ಬೆಳವಣಿಗೆಗಳು ನಡೆಯಲಿವೆ ಎಂದು ಹೇಳಿದರು.

ಕೆಎಸ್‌ಆರ್‌ಟಿಸಿಯಲ್ಲಿ ಇಂದು 'ವಾಹನ ಸ್ವಚ್ಛತಾ ದಿನ'

ಮೈಸೂರು, ಮಾ.21(ಎಸ್‌ಪಿಎನ್)– ಸಾರಿಗೆ ನಿಗಮದಲ್ಲಿ ಶನಿವಾರ(ಮಾ.22) ಮತ್ತು ಏ.5ರಂದು ಎರಡು ವಾರ ವಾಹನಗಳ ಸ್ವಚ್ಛತಾ ದಿನವನ್ನಾಗಿ ಆಚರಿಸುವಂತೆ ಕೆಎಸ್‌ಆರ್‌ಟಿಸಿ ನಿಗಮದ ಮುಖ್ಯ ಯಾಂತ್ರಿಕ ಅಭಿಯಂತರರು ಸುತ್ತೋಲೆಯಲ್ಲಿ ಆದೇಶ ಹೊರಡಿಸಿದ್ದಾರೆ. ಮಾರ್ಚ್–2025 ಮತ್ತು ಏಪ್ರಿಲ್–2025 ತಿಂಗಳನ್ನು ವಾಹನಗಳ ನಿರ್ವಹಣಾ ಮಾಸ ಎಂದು ಘೋಷಿಸಿದ್ದು, ವಾಹನದ ಒಳಗೆ, ಹೊರಗೆ ಸಂಪೂರ್ಣವಾಗಿ ಸ್ವಚ್ಛಗೊಳಿಸುವಂತೆ ನಿಗಮದ ಸೂಚಿಸಿದ್ದಾರೆ.

ಆದಾಯ ಕ್ರೋಡೀಕರಿಸುವ ಮಾಸ : 2025–26ನೇ ಸಾಲಿನಲ್ಲಿ ಏಪ್ರಿಲ್, ಮೇ ಹಾಗೂ ಜೂನ್ ಮಾಹೆಗಳನ್ನು 'ಸಾರಿಗೆ ಆದಾಯ ಕ್ರೋಡೀಕರಿಸುವ ಮಾಸ' ಶೀರ್ಷಿಕೆಯಡಿ ಆಚರಿಸಬೇಕು ಎಂದು ಕೆಎಸ್‌ಆರ್‌ಟಿಸಿ ಸೂಚನೆ ನೀಡಿದೆ.

ಈ ತಿಂಗಳಲ್ಲಿ 25 ದಿನ ಕರ್ತವ್ಯ ನಿರ್ವಹಿಸಿರುವ ಸಿಬ್ಬಂದಿಗಳಿಗೆ ನಗದು ಪುರಸ್ಕಾರವನ್ನೂ ನೀಡಲು ನಿರ್ಧರಿಸಿದ್ದು, ನಗದು ಪುರಸ್ಕಾರಕ್ಕೆ ಸಿಬ್ಬಂದಿಗಳು ಕೆಲ ಮಾನದಂಡಗಳನ್ನು ಕೆಎಸ್‌ಆರ್‌ಟಿಸಿ ರೂಪಿಸಿದೆ. ಸಿಬ್ಬಂದಿಗಳು ವಾರದ ರಜೆ, ಇನ್ನಾವುದೇ ರೀತಿಯ ರಜೆಗಳನ್ನು ತೆಗೆದುಕೊಂಡಿದ್ದರೂ ಸಹ ಮಾರ್ಗದ ಮೇಲೆ 26 ದಿನಗಳು ಕರ್ತವ್ಯ ನಿರ್ವಹಿಸಬೇಕು. ಸಿಬ್ಬಂದಿಗಳು ನ್ಯಾಯಾಲಯ ವಿಚಾರಣೆ ಬಗ್ಗೆ ಪರಿಶೀಲನೆ ಸೇರಿದಂತೆ ಒಟ್ಟು 4 ಷರತ್ತುಗಳನ್ನು ವಿಧಿಸಿ ಬೆಂಗಳೂರು ಕೇಂದ್ರೀಯ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿಗಳು ಉಲ್ಲೇಖಿಸಿದ್ದಾರೆ.

ವರಿಷ್ಠರಿಗೆ ದೂರು ನೀಡಲು ಸಚಿವ ರಾಜಣ್ಣ ನಿರ್ಧಾರ



ಬೆಂಗಳೂರು, ಮಾ.21– ಸಹಕಾರ ಸಚಿವ ಕೆ.ಎನ್.ರಾಜಣ್ಣ ನಿನ್ನೆಯಷ್ಟೇ ವಿಧಾನ ಸಭೆಯಲ್ಲಿ ಹನಿಟ್ರ್ಯಾಪ್ ಸಂಬಂಧ ಗೃಹಸಚಿವರಿಗೆ ದೂರು ನೀಡುವುದಾಗಿ ಹೇಳಿಕೆ ನೀಡಿದ ಬೆನ್ನಲ್ಲೇ ಕಾಂಗ್ರೆಸ್ ವರಿಷ್ಠರಿಗೂ ದೂರು ಸಲ್ಲಿಸಲು ನಿರ್ಧರಿಸಿದ್ದಾರೆ.

ತುಮಕೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಳೆ ಗೃಹಸಚಿವ ಪರಮೇಶ್ವರ್ ಭೇಟಿಯಾಗಿ ದೂರು ಸಲ್ಲಿಕೆ ಸಂಬಂಧ ಚರ್ಚೆ ನಡೆಸುವುದಾಗಿ ತಿಳಿಸಿದ್ದಾರೆ. ಅಲ್ಲದೆ ಪಕ್ಷದ ವರಿಷ್ಠರಿಗೂ ದೂರು ನೀಡುವುದಾಗಿ ಇದೇ ವೇಳೆ ಹೇಳಿದ್ದಾರೆ. ದೂರು ನೀಡದೇ ಇದ್ದಲ್ಲಿ ಯಾರಾದರೂ ವರಿಷ್ಠರಿಗೆ ತಮ್ಮ ಸಿಡಿಯನ್ನು ಸಲ್ಲಿಸಿ, ತಪ್ಪು ಮಾಹಿತಿ ನೀಡಬಹುದು. ಹಾಗಾಗಬಾರದೆಂದೇ ವರಿಷ್ಠರಿಗೆ ದೂರು ನೀಡಲು ನಿರ್ಧರಿಸಿರುವುದಾಗಿ ತಿಳಿಸಿದ್ದಾರೆ.

ನಾಳೆ ರಾಮ ಮನೋಹರ ಲೋಹಿಯಾ ನೆನಪು

ಮೈಸೂರು, ಮಾ.21(ಎಸ್‌ಪಿಎನ್)–ಇಲ್ಲಿನ ಜೆಎಲ್‌ಬಿ ರಸ್ತೆಯ ಹಾರ್ಡ್‌ವಿಕ್ ವಿದ್ಯಾಸಂಸ್ಥೆ ಆವರಣದ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯಲ್ಲಿ ಮಾ.23ರಂದು ಬೆಳಗ್ಗೆ 11ಕ್ಕೆ 'ರಾಮ ಮನೋಹರ ಲೋಹಿಯಾ ನೆನಪು' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಕಾರ್ಯಕ್ರಮದಲ್ಲಿ ಸಮತಾ ಅಧ್ಯಯನ ಕೇಂದ್ರದ ಧರ್ಮದರ್ಶಿ ಎಂ.ಎಸ್ ಸುಮನಾ, ಹಿರಿಯ ಸಾಹಿತಿ ಬಿ.ಮಹೇಶ್ ಹರವೆ ಭಾಗವಹಿಸಲಿದ್ದಾರೆ. ಹೆಚ್ಚಿನ ವಿವರಗಳಿಗೆ ದೂ.ಸಂ:9448871815 ಸಂಪರ್ಕಿಸಬಹುದು.

ನೂತನ ಪದಾಧಿಕಾರಿಗಳ ಆಯ್ಕೆ...



ಮೈಸೂರು ವಿಭಾಗ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎಂ.ಎಸ್.ಗಂಗಾಧರ್, ಉಪಾಧ್ಯಕ್ಷರಾಗಿ ಪಿ.ರಾಘವೇಂದ್ರ, ನಿರ್ದೇಶಕರಾಗಿ ಬಿ.ಮರಿಸ್ವಾಮಿ, ಎಂ.ಡಿ.ಮಹದೇವಸ್ವಾಮಿ, ಬಿ.ಶಿವಮ್ಮ, ಎಸ್.ನಾಗರಾಜು, ಎಂ.ಎಸ್.ದಯಾನಂದಸ್ವಾಮಿ, ಹೆಚ್.ಎಂ.ವಿಜಯಕುಮಾರ್, ಡಾ. ಶಿವರಾಮಕೃಷ್ಣ, ಎ.ಶಿವಪ್ಪ, ಎಸ್.ರಾಜೇಂದ್ರ ಪ್ರಸಾದ್, ಬಿ.ಎ.ರಾಜಶೇಖರ ಮೂರ್ತಿ, ಬಿ.ಕೆ.ವೆಂಕಟೇಶ್, ಎಸ್.ವಸಂತಕುಮಾರಿ ಆಯ್ಕೆಯಾದರು.

ಸಿಎಂ ಕುರ್ಚಿಗಾಗಿಯೇ ಹನಿಟ್ರ್ಯಾಪ್; ಸರ್ಕಾರದಲ್ಲಿ ದಲಿತ ಸಚಿವರಿಗೆ ರಕ್ಷಣೆ ಇಲ್ಲ

ವಿಪಕ್ಷ ನಾಯಕ ಆರ್.ಅಶೋಕ್ ಆರೋಪ



ಬೆಂಗಳೂರು, ಮಾ.21– ರಾಜ್ಯ ಕಾಂಗ್ರೆಸ್ ಸರ್ಕಾರದ ಸಹಕಾರಿ ಸಚಿವ ಕೆ.ಎನ್.ರಾಜಣ್ಣ ಅವರ ಮೇಲೆ ಹನಿಟ್ರ್ಯಾಪ್ ಯತ್ನ ನಡೆದಿತ್ತು ಎಂಬ ವಿಚಾರ ರಾಜಕೀಯ ವಲಯವನ್ನು ತಲ್ಲಣಗೊಳಿಸಿದೆ. ಇದೇ ವೇಳೆ ಸಿಎಂ ಕುರ್ಚಿಗಾಗಿ ಹನಿಟ್ರ್ಯಾಪ್ ಯತ್ನ ನಡೆದಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿರುವ ಅವರು, ಸಚಿವ ರಾಜಣ್ಣ ಅವರೇ ಸದನದಲ್ಲಿ 48 ಜನರ ಮೇಲೆ ಹನಿಟ್ರ್ಯಾಪ್ ಆಗಿದೆ ಎಂದಿದ್ದಾರೆ. ಈ ಆರೋಪಕ್ಕೆ ಸಿಎಂ ಸಿದ್ದರಾಮಯ್ಯ ಅವರು ಸರಿಯಾದ ಉತ್ತರ ಕೊಟ್ಟಿಲ್ಲ. ಇದು ಚಿಕ್ಕ ವಿಚಾರ ಅಲ್ಲ, ಗಂಭೀರ ಪ್ರಕರಣ.

ಇದು ಎಲ್ಲಾ ಶಾಸಕರು, ಸದನದ ಹಾಗೂ ರಾಜ್ಯದ ಮರ್ಯಾದೆ ಪ್ರಶ್ನೆಯೂ ಹೌದು. ಹಾಗಾಗಿ ಈ ಬಗ್ಗೆ ಸಿಬಿಐ ಅಥವಾ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದ್ದಾರೆ. ಕೆ.ಎನ್. ರಾಜಣ್ಣ ಅವರು ಸಾಮಾನ್ಯ ವ್ಯಕ್ತಿಯೇನಲ್ಲ. ಅವರು ಇದೇ ಕಾಂಗ್ರೆಸ್ ಸರ್ಕಾರದ ಸಚಿವರು. ಹೀಗಿರುವಾಗ ಅವರೇ ಸದನದಲ್ಲಿ ಆರೋಪ ಮಾಡಿದ್ದು, ಈ ಸರ್ಕಾರದಲ್ಲಿ ದಲಿತ ಸಚಿವರಿಗೆ ಸೂಕ್ತ ರಕ್ಷಣೆಯೇ ಇಲ್ಲ.

ಇದನ್ನೆಲ್ಲ ಗಮನಿಸಿದರೆ ಸಿಎಂ ಕುರ್ಚಿಗಾಗಿಯೇ ಹನಿಟ್ರ್ಯಾಪ್ ಯತ್ನ ನಡೆದಿದೆ ಎಂದು ಅಶೋಕ್ ಹೊಸ ಬಾಂಬ್ ಸಿಡಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಕ್ಯಾಬಿನೆಟ್ ಸಚಿವರ ಗೌರವ ಕಾಪಾಡಬೇಕು.

ಹನಿಟ್ರ್ಯಾಪ್ ದಂಧೆಯ ಕುರಿತು ಸಮಗ್ರ ತನಿಖೆ ನಡೆಸಬೇಕು. ಹನಿ ಟ್ರ್ಯಾಪ್ ದಂಧೆಯಲ್ಲಿ ನ್ಯಾಯಾಧೀಶರನ್ನು, ರಾಜಕೀಯ ನಾಯಕರನ್ನೂ ಬೀಳಿಸಲಾಗಿದೆ ಎಂದು ಪತ್ರಿಕೆಗಳು ವರದಿ ಮಾಡಿವೆ. ಹೀಗಾಗಿ ಹಾಲಿ ಹೈಕೋರ್ಟ್ ನ್ಯಾಯಾಧೀಶರ ಮೂಲಕ ಈ ಬಗ್ಗೆ ತನಿಖೆ ನಡೆಸಬೇಕು. ಮುಖ್ಯಮಂತ್ರಿ ಪದವಿಗೋ, ರಾಜ ಕೀಯ ಹಿತಾಸಕ್ತಿಗೋ ಇಷ್ಟು ಕೀಳು ಮಟ್ಟಕ್ಕೆ ಯಾರೂ ಇಳಿಯಬಾರದು ಎಂದು ವಾಗ್ದಾಳಿ ನಡೆಸಿದ್ದಾರೆ. ಹನಿಟ್ರ್ಯಾಪ್ ವಿಚಾರ ಸದನದಲ್ಲಿ ಪ್ರಸ್ತಾಪ ಆಗಿದ್ದು ಒಂದು ಗ್ಯಾಂಗ್ ಮಾಡಿದೆ ಎಂದು ಹೇಳಿದ್ದಾರೆ. ಏನಿದು ಕಳ್ಳಾಟ ನಡೆಯುತ್ತಿದ್ಯಾ? ರಾಜಣ್ಣ ಹೇಳಿಕೆ ಸದನದ ಆಸ್ತಿ ಎಂದರು.

ಸ್ಪೀಕರ್ 50 ಬಿಜೆಪಿ ಶಾಸಕರ ಸಸ್ಪೆಂಡ್ ಮಾಡ್ತಾರೆ ಅನ್ಕೊಂಡಿದ್ದೆ... ಬರೀ 18 ಮಾಡಿದ್ದಾರೆ..!

ಶಾಸಕ ಪ್ರದೀಪ್ ಈಶ್ವರ್ ಪ್ರತಿಕ್ರಿಯೆ




ಬೆಂಗಳೂರು, ಮಾ.21– ವಿಧಾನಸಭಾ ಅಧಿವೇಶನದಲ್ಲಿ ಸ್ಪೀಕರ್ ಪೀಠಕ್ಕೆ ಅಗೌರವ ತೋರಿದ ಶಾಸಕರನ್ನು ಅಮಾನತು ಮಾಡಿರುವುದು, ಸ್ಪೀಕರ್ ಸ್ಥಾನದ ಗೌರವ ಹೆಚ್ಚಿಸಿದೆ. ಅಧಿವೇಶನದಲ್ಲಿ ಕಲಾಪಕ್ಕೆ ಅಡ್ಡಿಪಡಿಸಿದ ವಿಪಕ್ಷದ 50 ಬಿಜೆಪಿ ಶಾಸಕರನ್ನು ಸಸ್ಪೆಂಡ್ ಮಾಡುತ್ತಾರೆ ಎಂದುಕೊಂಡಿದ್ದೆ. ಆದರೆ, 18 ಜನರನ್ನು ಮಾತ್ರ ಮಾಡಿದ್ದಾರೆ ಎಂದು ಶಾಸಕ ಪ್ರದೀಪ್ ಈಶ್ವರ್ ಹೇಳಿದ್ದಾರೆ.

ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸದನದಲ್ಲಿ ಕಲಾಪಕ್ಕೆ ಅಡ್ಡಿಪಡಿಸಿದ ಶಾಸಕರನ್ನು 6 ತಿಂಗಳವರೆಗೆ ಅಮಾನತು ಮಾಡಿರುವುದು, ಸ್ಪೀಕರ್ ಸ್ಥಾನದ ಗೌರವ ಹೆಚ್ಚಿಸಿದೆ. ಸ್ಪೀಕರ್ ಮೇಲೆ ಪೇಪರ್ ಎಸೆದರೆ ಸುಮ್ಮನಿರಬೇಕಾ. ಬಿಜೆಪಿಯವರಿಗೆ ನಮ್ ಜೊತೆ ಫೈಟ್ ಮಾಡೋಕೆ ಆಗುತ್ತಿಲ್ಲ. ಯಾವತ್ತಾದರೂ ಬಡವರ ಕಷ್ಟ ಕೇಳಿದೀರಾ. ನಿಮಗೆ ಜನರ ಕಷ್ಟ ಬೇಕಾಗಿಲ್ಲ. ಯಾವ್ಯಾವುದೋ ವಿಷಯ ಇಟ್ಟುಕೊಂಡು ಇಲ್ಲಿಗೆ ಬಂದಿದ್ದಾರೆ. ನಾನು 50 ಜನರನ್ನು ಮಾಡುತ್ತಾರೆ ಎಂದುಕೊಂಡಿದ್ದೆ, ಆದರೆ ಸ್ಪೀಕರ್ ಕೇವಲ 18 ಜನರನ್ನು ಮಾಡಿದ್ದಾರೆ ಎಂದರು.

ವಿಧಾನಸಭೆಯಲ್ಲಿ ಸ್ಪೀಕರ್ ಯು.ಟಿ. ಖಾದರ್ ಅವರು ನನ್ನನ್ನು ಅತೀ ಹೆಚ್ಚು ಬೈದಿದ್ದಾರೆ. ನಾನು ಮಾತನಾಡುವಾಗ ಮಧ್ಯದಲ್ಲಿ ಅಡ್ಡಿ ಮಾಡಿದ್ದಾರೆ. ಇಲ್ಲಿ ಗಲಭೆ ಮಾಡಲು ಕಾರಣವಾದ ಬಿಜೆಪಿ ಐಟಿ ಸೆಲ್ ಅನ್ನು ಎತ್ತಿ ಬಿಸಾಕಿದರೆ ಸರಿಯಾಗುತ್ತದೆ. ಆ ದೈತ್ಯಾಕಾರದ ಜೀವಗಳನ್ನು ಹೇಗೆ ಹೊರೋದು. ಯಾರೋ ಒಬ್ಬರನ್ನು 12 ಜನ ಮಾರ್ಷಲ್‌ಗಳು ಸೇರಿ ಎತ್ತಿಕೊಂಡು ಬಂದಿದ್ದಾರೆ. ಮಾರ್ಷಲ್‌ಗಳಿಗೆ ಕಷ್ಟ ಆಗುತ್ತಿದೆ ಎಂದು ಹೇಳಿದರು.

ಸಚಿವ ಕೆ.ಹೆಚ್ ಮುನಿಯಪ್ಪ ಮಾತನಾಡಿ, ಸ್ಪೀಕರ್ ಅವರ ತೀರ್ಮಾನ ವೈಯಕ್ತಿಕ ಅಲ್ಲ. ಸ್ಪೀಕರ್ ಸ್ಥಾನದ ಗೌರವ ಎತ್ತಿ ಹಿಡಿಯುವ ಕೆಲಸ ಮಾಡಿದ್ದಾರೆ. ಸಂವಿಧಾನಬದ್ಧವಾಗಿ ಕೆಲಸ ಮಾಡಲು ಸ್ವತಂತ್ರ ಇದೆ. ಆದರೆ, ಸ್ಪೀಕರ್ ಸ್ಥಾನಕ್ಕೆ ಅಗೌರವ ತೋರಿಸುದು ಸರಿಯಲ್ಲ. ಇಂತಹ ಸಂದರ್ಭಗಳಲ್ಲಿ ಸ್ಪೀಕರ್ ಸರಿಯಾದ ನಿರ್ಣಯ ತಗೊಂಡಿದ್ದಾರೆ. ಇದು ನಮಗೆ ಸಮಾಧಾನ ತಂದಿದೆ. ಇಂತಹದ್ದು ಯಾವತ್ತೂ ಆಗಬಾರದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ನರೇಂದ್ರ ಮೋದಿಯೇ ದೇಶದ ಹನಿಟ್ರ್ಯಾಪ್ ಪಿತಾಮಹ; ಬಿ.ಕೆ.ಹರಿಪ್ರಸಾದ್ ಆರೋಪ



ಬೆಂಗಳೂರು, ಮಾ.21– ಹನಿಟ್ರ್ಯಾಪ್ ಪಿತಾಮಹ ನರೇಂದ್ರ ಮೋದಿ ಆಗಿದ್ದಾರೆ. ದೇಶದಲ್ಲಿ ಮೊದಲ ಬಾರಿಗೆ ಸಂಜಯ್ ಜೋಶಿ ಅವರ ಹನಿಟ್ರ್ಯಾಪ್ ಮಾಡಿದ್ದು ನರೇಂದ್ರ ಮೋದಿ ಎಂದು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಆರೋಪ ಮಾಡಿದ್ದಾರೆ.

ಕರ್ನಾಟಕ ಬಜೆಟ್ ಅಧಿವೇಶನದ ಕೊನೆಯ ದಿನವಾದ ಶುಕ್ರವಾರ ವಿಧಾನ ಪರಿಷತ್ ಕಲಾಪದಲ್ಲಿ ಮಾತನಾಡಿದ ಅವರು, ಪ್ರಧಾನ ಮಂತ್ರಿ ನರೇಂದ್ರ ಮೋದಿಯೇ ಭಾರತದ ಹನಿಟ್ರ್ಯಾಪ್ ಪಿತಾಮಹ ಆಗಿದ್ದಾರೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಬಗ್ಗೆ ಪುಸ್ತಕ ಇದೆ. ಅಲ್ಲಿ ಏನೆಲ್ಲಾ ನಡೆದಿದೆ ಗೊತ್ತಾ? ಎಂದು ಹೇಳಿದರು. ಈ ವೇಳೆ ಮಧ್ಯ ಪ್ರವೇಶ ಮಾಡಿದ ಕಿಶೋರ್ ಕುಮಾರ್ ಅವು ಯಾರಪ್ಪನ ಮನೆಯಲ್ಲೂ ನಡೆದಿಲ್ಲ ಎಂದರು. ಇದಕ್ಕೆ ಸಿಡಿಮಿಡಿಗೊಂಡ ಹರಿಪ್ರಸಾದ್ ಕುಳಿತುಕೊಳ್ಳುವಂತೆ ಸೂಚಿಸಿದರು. ಜೊತೆಗೆ, ಆರ್‌ಎಸ್‌ಎಸ್ ಬಗ್ಗೆ ಮಾತನಾಡದಂತೆ ಹರಿಪ್ರಸಾದ್ ಅವರಿಗೆ ಸಭಾಪತಿ ಎಚ್ಚರಿಸಿದರು.

ಸಿಬಿಐ ಮೂಲಕವೇ ಹನಿಟ್ರ್ಯಾಪ್ ತನಿಖೆಯಾಗಲಿ

ಗೃಹ ಸಚಿವರಿಗೆ ಯತ್ನಾಳ್ ಪತ್ರ



ವಿಜಯಪುರ: ಜನಪ್ರತಿನಿಧಿಗಳ ಭದ್ರತೆಗೆ ಸಿಬಿಐ ಮೂಲಕವೇ ಹನಿಟ್ರ್ಯಾಪ್ ತನಿಖೆಯಾಗಲಿ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರಿಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪತ್ರ ಬರೆದಿದ್ದಾರೆ.

ವಿಧಾನಸಭೆ ಕಲಾಪದಲ್ಲಿ ಬಯಲಾದ ಹನಿಟ್ರ್ಯಾಪ್ ವಿಚಾರ ಪ್ರಸ್ತಾಪಿಸಿ ಪತ್ರ ಬರೆದಿದ್ದು, ಹನಿಟ್ರ್ಯಾಪ್ ಪ್ರಕರಣದ ತನಿಖೆಗೆ ಒತ್ತಾಯಿಸಿದ್ದಾರೆ. ಜನಪ್ರತಿನಿಧಿಗಳನ್ನು ಟಾರ್ಗೆಟ್ ಮಾಡಿ ಹನಿಟ್ರ್ಯಾಪ್ ಮಾಡಲಾಗುತ್ತಿದೆ. ಜನಪ್ರತಿನಿಧಿಗಳ ಭದ್ರತೆಗಾಗಿ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಈ ಮೂಲಕ ನೀವು ಜನಪ್ರತಿನಿಧಿಗಳ ಘನತೆ ಕಾಪಾಡಿ ಎಂದು ಮನವಿ ಮಾಡಿಕೊಂಡಿದ್ದಾರೆ.

ಸಿಬಿಐ ಮೂಲಕವೇ ಹನಿಟ್ರ್ಯಾಪ್ ಪ್ರಕರಣ ತನಿಖೆಯಾಗಲಿ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಗುರುವಾರ ವಿಧಾನಸಭೆಯಲ್ಲಿ ಬಜೆಟ್ ಭಾಷಣದ ಮೇಲಿನ ಚರ್ಚೆಯ ಸಂದರ್ಭದಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದ್ದ ಯತ್ನಾಳ್, ರಾಜ್ಯದಲ್ಲಿ ಸಹಕಾರಿ ಸಚಿವರ ಮೇಲೆ ಹನಿಟ್ರ್ಯಾಪ್ ಮಾಡುವ ಪ್ರಯತ್ನ ಮಾಡಲಾಗಿದೆ. ಇದೊಂದು ಕೆಟ್ಟ ಸಂಸ್ಕೃತಿ. ಜನ ಪ್ರತಿನಿಧಿಗಳನ್ನು ಬ್ಲ್ಯಾಕ್ ಮೇಲ್ ಮಾಡುತ್ತಿದ್ದಾರೆ ಎಂದು ಪ್ರಸ್ತಾಪಿಸಿದ್ದರು.

ಮೈಸೂರು ಮಿತ್ರ

ಶನಿವಾರ 22 ಮಾರ್ಚ್ 2025

ಗದ್ದಲದ ನಡುವೆ ಮುಸ್ಲಿಮರಿಗೆ ಸರ್ಕಾರಿ ಗುತ್ತಿಗೆಗಳಲ್ಲಿ ಶೇ.4ರಷ್ಟು ಮೀಸಲಾತಿ ಕೊಡುವ ಮಸೂದೆ ಅಂಗೀಕಾರ

ಬೆಂಗಳೂರು, ಮಾ.21– ವಿಪಕ್ಷಗಳ ಗದ್ದಲದ ನಡುವೆ ಮುಸ್ಲಿಂ ಗುತ್ತಿಗೆದಾರರಿಗೆ ಶೇ.4 ಮೀಸಲಾತಿ ನೀಡುವ 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (ತಿದ್ದುಪಡಿ) ವಿಧೇಯಕ 2025' ಅನ್ನು ಶುಕ್ರವಾರ ವಿಧಾನ ಸಭೆಯಲ್ಲಿ ರಾಜ್ಯ ಸರ್ಕಾರ ಪಾಸ್ ಮಾಡಿದೆ.

ಈಗಾಗಲೇ ಬಜೆಟ್‌ನಲ್ಲಿ ಗುತ್ತಿಗೆ ಮೀಸಲಾತಿಯನ್ನು ಎಸ್‌ಸಿ–ಎಸ್‌ಟಿ, ಪ್ರವರ್ಗ 1, 2ಎ ಗಳ ಜೊತೆಗೆ 2ಬಿ ಮುಸ್ಲಿಂ ವರ್ಗವನ್ನು ಸೇರಿಸಿ ಗುತ್ತಿಗೆ ಮೊತ್ತವನ್ನು 1 ಕೋಟಿಯಿಂದ 2 ಕೋಟಿ ರೂ.ಗೆ ಏರಿಸುವ ಪ್ರಸ್ತಾಪ ಮಾಡಲಾಗಿತ್ತು. ಇಂದು ಮಂಡನೆಯಾದ ಬಿಲ್‌ನಲ್ಲಿ 2ಬಿ ವರ್ಗಕ್ಕೆ ಶೇ.4 ಮೀಸಲಾತಿ ಕೊಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆಗೆ ತಿದ್ದುಪಡಿ ತರಲಾಗಿದೆ.

ಇದಕ್ಕೆ ರಾಜ್ಯಪಾಲರು ಅಂಕಿತ ಹಾಕಿದ್ದ ಎರಡು ಕೋಟಿ ರೂ. ವರೆಗಿನ ಕಾಮಗಾರಿಗಳಲ್ಲಿ ಮೀಸಲಾತಿ ಸಿಗಲಿದೆ. ವಿಧೇಯಕ ಪಾಸ್ ಮಾಡುತ್ತಿದ್ದಂತೆ ವಿಪಕ್ಷಗಳು ಆಕ್ರೋಶ ಹೊರಹಾಕಿದವು. ಕೇಸರಿ ಶಾಲು ತೋರಿಸುತ್ತಾ ಮಸೂದೆ ಪ್ರತಿಯನ್ನು ಹರಿದು ಆಕ್ರೋಶ ಹೊರಹಾಕಿದವು. ಸ್ಪೀಕರ್ ಪೀಠ ಹಾಗೂ ಕಾಂಗ್ರೆಸ್ ಸದಸ್ಯರತ್ತ ಹರಿದ ಕಾಗದಗಳನ್ನು ಎಸೆದರು. ಕೊನೆಗೆ ಸ್ಪೀಕರ್ ಖಾದರ್ ಅನಿರ್ದಿಷ್ಟಾವಧಿಗೆ ವಿಧಾನಸಭೆ ಕಲಾಪ ಮುಂದೂಡಿದರು. ರಾಷ್ಟ್ರಗೀತೆ ಹಾಡಿ ಅನಿರ್ದಿಷ್ಟಾವಧಿಗೆ ಕಲಾಪ ಮುಂದೂಡಲಾಯಿತು. ವಿಧಾನಸಭೆಯಲ್ಲಿ ಅಂಗೀಕಾರವಾದ ಕೆಟಿಟಿಪಿ ಬಿಲ್ ಅನ್ನು ಸ್ಪೀಕರ್ ಪರಿಷತ್‌ಗೆ ಕಳಿಸಿದರು. ಇದೇ ವೇಳೆ ಬೆಂಗಳೂರು ಅರಮನೆ ಭೂ ಬಳಕೆ ಮತ್ತು ನಿಯಂತ್ರಣ ವಿಧೇಯಕ 2025 ಅನ್ನೂ ಅಂಗೀಕರಿಸಲಾಯಿತು.

ಮಸೂದೆ ತಡೆ ಹಿಡಿಯುವಂತೆ ರಾಜ್ಯಪಾಲರಿಗೆ ಪತ್ರ

ನವದೆಹಲಿ, ಮಾ.21– ಕರ್ನಾಟಕ ಸರ್ಕಾರದ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ4 ಮೀಸಲಾತಿ ನೀಡುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆಟಿಪಿಪಿ) ತಿದ್ದುಪಡಿ ಮಸೂದೆಯನ್ನು ತಡೆ ಹಿಡಿಯಬೇಕು ಎಂದು ಒತ್ತಾಯಿಸಿ ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರಿಗೆ ಶುಕ್ರವಾರ ಪತ್ರ ಬರೆದಿದ್ದಾರೆ.



ಈ ಮಸೂದೆಯು ಅಸಂವಿಧಾನಿಕ ಹಾಗೂ ತಾರತಮ್ಯದಿಂದ ಕೂಡಿದೆ. ಇದು ಭಾರತದ ಸಂವಿಧಾನದ ಆಶಯಗಳಿಗೆ ವಿರುದ್ಧ. ಸಾಮಾಜಿಕ ಹಾಗೂ ಆರ್ಥಿಕ ಹಿಂದುಳಿದಿರುವಿಕೆ ಪರಿಗಣಿಸಿ ಮೀಸಲಾತಿ ನೀಡಬಹುದು. ಆದರೆ, ಧರ್ಮದ ಆಧಾರದಲ್ಲಿ ಮೀಸಲಾತಿ ನೀಡಲು ಅವಕಾಶ ಇಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟ್ ಈ ಹಿಂದೆ ತೀರ್ಪು ನೀಡಿದೆ ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

ಮುಸ್ಲಿಮರ ಓಲೈಕೆಯ ಭಾಗವಾಗಿ ಕೆಟಿಪಿಪಿ ಕಾಯ್ದೆಗೆ ಸರ್ಕಾರ ತಿದ್ದುಪಡಿ ತಂದಿದೆ. ಆರ್ಥಿಕವಾಗಿ ಹಿಂದುಳಿದವರನ್ನು ಸಬಲೀಕರಣ ಮಾಡುವ ಉದ್ದೇಶ ಇದರ ಹಿಂದಿಲ್ಲ. ಇದರಿಂದ ಕೋಮು ಧ್ರುವೀಕರಣ ಹಾಗೂ ಅಪಾಯಕಾರಿ ಬೆಳವಣಿಗೆ ಇದನ್ನು ವಿರೋಧಿಸಿ ನ್ಯಾಯಾಲಯದ ಮೊರೆ ಹೋಗುವ ಸಾಧ್ಯತೆ ಇದೆ. ಹಿರಿಯ ಕಾನೂನು ತಜ್ಞರ ಅಭಿಪ್ರಾಯ ಪಡೆದು ಭಾರತದ ಸಂವಿಧಾನದ ಆಶಯಕ್ಕೆ ತಕ್ಕಂತೆ ಮುಂದಿನ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಮಸೂದೆ ಕೈಬಿಡುವಂತೆ ಬಿಜೆಪಿಯಿಂದ ರಾಜಭವನಕ್ಕೆ ಮನವಿ

ಬೆಂಗಳೂರು, ಮಾ. 21– ಸರ್ಕಾರಿ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿಗೆ ಬಿಜೆಪಿ ಸಾಕಷ್ಟು ವಿರೋಧಿಸುತ್ತಿದೆ. ಆದರೂ ವಿರೋಧದ ನಡುವೆ ಬಿಲ್ ಮಂಡನೆ ಆಗಿದೆ. ಹೀಗಿರುವಾಗ ಮೀಸಲಾತಿ ರದ್ದು ಅಥವಾ ಕೈಬಿಡುವಂತೆ ಬಿಜೆಪಿ ನಿಯೋಗ ರಾಜ್ಯಪಾಲರ ಕಾರ್ಯದರ್ಶಿಗೆ ಮನವಿ ಸಲ್ಲಿಸಿದೆ. ಅದೇ ರೀತಿ ಯಾಗಿ ಸ್ಪೀಕರ್ ಪೀಠಕ್ಕೆ ಅಗೌರವ ತೋರಿದ 18 ಸದಸ್ಯರ ಅಮಾನತು ಖಂಡಿಸಿ ರಾಜಭವನಕ್ಕೆ ಭೇಟಿ ನೀಡಿದ ಬಿಜೆಪಿ ನಾಯಕರ ನಿಯೋಗ, ರಾಜ್ಯಪಾಲರ ಕಾರ್ಯದರ್ಶಿ ಮೂಲಕ ದೂರು ಸಲ್ಲಿಸಿದೆ.

ಧರ್ಮೇಂದ್ರ ಪ್ರಧಾನ್ ತಂದೆ ದೇಬೇಂದ್ರ ಪ್ರಧಾನ್ ನಿಧನದ ಹಿನ್ನೆಲೆ ಒಡಿಶಾದ ಭುವನೇಶ್ವರಕ್ಕೆ ರಾಜ್ಯಪಾಲ ಟಿ.ಸಿ.ಗೆಹ್ಲೋಟ್ ಸಂತಾಪ ಸೂಚಿಸಲು ತೆರಳಿದ್ದು, ಹೀಗಾಗಿ ರಾಜ್ಯಪಾಲರ ಕಾರ್ಯದರ್ಶಿಗೆ ಆರ್.ಅಶೋಕ್ ನೇತೃತ್ವದಲ್ಲಿ ದೂರು ನೀಡಲಾಗಿದೆ. ದೂರು ಬಳಿಕ ಆರ್. ಅಶೋಕ್ ಪ್ರತಿಕ್ರಿಯಿಸಿದ್ದು, ಧರ್ಮಾಧಾರಿತ ಮೀಸಲಾತಿ ನೀಡಲು ಯಾವುದೇ ಅಧಿಕಾರ ಇಲ್ಲ ಇದೊಂದು ರೀತಿ ಹಲಾಲ್ ಬಜೆಟ್ ಮಾಡಿದ್ದಾರೆ. ಹಿಂದೂ–ಮುಸ್ಲಿಂ ಒಟ್ಟಿಗೆ ಹೋಗಬೇಕೆಂದು ಸಂವಿಧಾನ ಹೇಳುತ್ತೆ ಹಿಂದೂ ಗಳನ್ನು ಭಾಗ ಮಾಡಿದ್ದಾರೆ, ಇದು ಸಂವಿಧಾನ ವಿರೋಧಿ. ಸಿಎಂ ಸಿದ್ದರಾಮಯ್ಯ ಮುಸ್ಲಿಮರ ಪರವಾಗಿ ನಿಂತಿದ್ದಾರೆ ಎಂದು ವಾಗ್ದಾಳಿ ಮಾಡಿದ್ದಾರೆ.

ರಂಗಾಯಣದಲ್ಲಿ ಏ.14ರಿಂದ ತಿಂಗಳ ಕಾಲ ಚಿಣ್ಣರ ಮೇಳ

ಮೈಸೂರು, ಮಾ.21(ಎಂಕೆ)– ಹೊಸತನಕ್ಕೆ ಹೊಂದಿಕೊಳ್ಳುತ್ತಾ ಸರಣಿ ರಂಗಭೂಮಿ ಚಟುವಟಿಕೆಗಳಿಂದ ಕ್ರಿಯಾಶೀಲ ವಾಗಿರುವ ಮೈಸೂರು ರಂಗಾಯಣದಲ್ಲಿ ಚಿಣ್ಣರಿಗಾಗಿ ವೇದಿಕೆ ಸಜ್ಜಾಗುತ್ತಿದೆ...!

ಹಾಡು, ನೃತ್ಯ, ನಾಟಕದ ತರಬೇತಿ ಯೊಂದಿಗೆ ಹತ್ತು–ಹಲವು ಪಠ್ಯೇತರ ಚಟುವಟಿಕೆಗಳಲ್ಲಿ ಪುಟಾಣಿಗಳನ್ನು ತಲ್ಲೀನ ರಾಗುವಂತೆ ಮಾಡುವ ಚಿಣ್ಣರ ಮೇಳ, ಈ ವರ್ಷ ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಯಂದೇ(ಏ.14) ಆರಂಭವಾಗಲಿದೆ. ಒಂದು ತಿಂಗಳ ಕಾಲ ನಡೆಯುವ ಚಿಣ್ಣರ ಮೇಳದಲ್ಲಿ ಬೇಸಿಗೆ ರಜಾ ದಿನದಲ್ಲಿ ಮಜಾ ಮಾಡಲು ಪುಟಾಣಿಗಳು ಉತ್ಸುಕರಾಗಿದ್ದಾರೆ.

ಸುಮಾರು ಒಂದು ತಿಂಗಳ ಕಾಲ ನಡೆಯುವ ಚಿಣ್ಣರ ಮೇಳವು ಪ್ರತೀ ವರ್ಷ ಹೊಸ ಹೊಸ ಆಶಯ ಗಳೊಂದಿಗೆ ಆಯೋಜನೆಗೊಳ್ಳಲಿದ್ದು, ಮಕ್ಕಳಲ್ಲಿ ನಾಯಕತ್ವ ಹಾಗೂ ಸಹಬಾಳ್ವೆ ಗುಣ ಬೆಳೆಸುವ ಆಶಯವನ್ನೊಳ ಗೊಂಡಿದೆ. ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದಲ್ಲಿ ಮೊದಲ ಬಾರಿಗೆ ಮಕ್ಕಳ ಬಹುರೂಪಿ ಪರಿಚಯಿಸುವ ಮೂಲಕ ಪುಟಾಣಿಗಳಲ್ಲಿನ ಪ್ರತಿಭೆ ಅನಾವರಣಕ್ಕೆ ವೇದಿಕೆ ರೂಪಿಸಿದಂತೆಯೇ ಈ ವರ್ಷದ ಚಿಣ್ಣರ ಮೇಳದಲ್ಲಿಯೂ ಮಕ್ಕಳಿಗಾಗಿ ಹಲವು ವೇದಿಕೆಗಳು ಸೃಷ್ಟಿಯಾಗಲಿವೆ.

ಈಗಾಗಲೇ ಪ್ರತಿದಿನ ಹತ್ತಾರು ಮಂದಿ ಪೋಷಕರು, ರಂಗಾಯಣದ ಕಚೇರಿಗೆ ಭೇಟಿ ನೀಡಿ, ಚಿಣ್ಣರ ಮೇಳ ಯಾವಾಗ ಎಂದು ಪ್ರಶ್ನಿಸುತಿದ್ದಾರೆ. ಟಿಕೆಟ್ ಯಾವಾಗ ಕೊಡುತ್ತಾರೆ, ಎಷ್ಟು ಮಕ್ಕಳಿಗೆ ಅವಕಾಶ ಇರಲಿದೆ ಎಂದು ಕೇಳುತ್ತಿದ್ದು, ಕೆಲ ದಿನಗಳಲ್ಲಿಯೇ ಪೋಷಕರ ಪ್ರಶ್ನೆಗಳಿಗೂ ಉತ್ತರ ದೊರಕಲಿದೆ. ಸರಣಿ ರಂಗಭೂಮಿ ಚಟುವಟಿಕೆಗಳಿಂದ ಕ್ರೀಯಾಶೀಲವಾಗಿರುವ ಮೈಸೂರು ರಂಗಾಯಣ, ಚಿಣ್ಣರ ಮೇಳ ಆಯೋಜನೆಗೆ ಪೂರ್ವ ತಯಾರಿಗಳು ನಡೆಯುತ್ತಿವೆ ಎಂದು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.



ಏ.14 ರಿಂದ ಚಿಣ್ಣರ ಮೇಳ...

> ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ(ಏ.14) ದಿನದಿಂದ ಚಿಣ್ಣರ ಮೇಳ ನಡೆಯಲಿದೆ. ಇನ್ನೂ 25 ದಿನಗಳು ಬಾಕಿಯಿದ್ದು, ಸದ್ಯಕ್ಕೆ ನಾಳೆಯಿಂದ ನಡೆಯುವ ಹವ್ಯಾಸ ರಂಗೋತ್ಸವದ ಕಡೆಗೆ ಗಮನ ಹರಿಸಲಾಗಿದೆ. ಮೂರ್ನಾಲ್ಕು ದಿನದಲ್ಲಿ ಚಿಣ್ಣರ ಮೇಳ ಕುರಿತು ತಿಳಿಸಲಾಗುವುದು. ಏ.14 ರಿಂದ ಮೇ.10ರವರೆಗೆ ಚಿಣ್ಣರ ಮೇಳ ನಡೆಯಲಿದೆ.
>
> – ಸತೀಶ್ ತಿಪಟೂರು, ರಂಗಾಯಣ ನಿರ್ದೇಶಕ

ಚಿಣ್ಣರ ಮೇಳ ಹಾಗೂ ರಂಗಾಯಣದ ಕಾರ್ಯಕ್ರಮಗಳ ಕುರಿತು ಪ್ರತಿಕ್ರಿಯಿಸಿದ ಅವರು, ಕಳೆದ ಆರು ತಿಂಗಳ ಅವಧಿಯಲ್ಲಿ ಹವ್ಯಾಸಿ ರಂಗೋತ್ಸವ, ಜನಪದ ರಂಗಪ್ರಕಾರ ಗಳನ್ನು ಒಳಗೊಂಡ ನವರಾತ್ರಿ ರಂಗೋತ್ಸವ, ಕಾಲೇಜು ರಂಗೋತ್ಸವ, ಮಕ್ಕಳ ಬಹುರೂಪಿಯನ್ನು ಒಳಗೊಂಡ ರಾಷ್ಟ್ರೀಯ ಬಹುರೂಪಿ ನಾಟಕೋತ್ಸವ, ನಿರಂತರ ವಾರಾಂತ್ಯ ನಾಟಕಗಳ ಪ್ರದರ್ಶನ, ಹೊಸ ನಾಟಕಗಳ ಪ್ರಯೋಗದ ಜೊತೆ ಜೊತೆಗೆ ಚಿಣ್ಣರ ಮೇಳ ಆಯೋಜನೆಗೆ ರಂಗಾಯಣ ಉತ್ಸುಕವಾಗಿದೆ ಎಂದರು.

ಥ್ರೋಬಾಲ್ ಕೋಚಿಂಗ್ ಕ್ಯಾಂಪ್

ಮೈಸೂರು, ಮಾ.21(ಬಿಎಲ್‌ಯು)– ಮೈಸೂರಿನ ಕುವೆಂಪುನಗರದ ಶ್ರೀ ವಿವೇಕ ಎಕ್ಸೆಲ್ ಅಕಾಡೆಮಿಯಲ್ಲಿ ಏಪ್ರಿಲ್ 4ರಿಂದ 20ವರೆಗೆ ಸಮ್ಮರ್ ಥ್ರೋಬಾಲ್ ಕೋಚಿಂಗ್ ಕ್ಯಾಂಪ್ ನಡೆಯಲಿದೆ. ಬೆಳಿಗ್ಗೆ 6ರಿಂದ 9 ಗಂಟೆವರೆಗೆ ಕ್ಯಾಂಪ್ ನಡೆಯಲಿದೆ. ಮೈಸೂರು ಡಿಸ್ಟ್ರಿಕ್ಟ್ ಅಮೇಚೂರ್ ಥ್ರೋ ಬಾಲ್ ಅಸೋಸಿಯೇಷನ್, ಶ್ರೀ ವಿವೇಕ ಬಾಲೋಧ್ಯಾನ ಪಬ್ಲಿಕ್ ಸ್ಕೂಲ್, ಶ್ರೀ ವಿವೇಕ ವಿದ್ಯಾಲಯ ಪಿಯು ಕಾಲೇಜ್ ಮತ್ತು ಶ್ರೀ ವಿವೇಕ ಎಕ್ಸೆಲ್ ಅಕಾಡೆಮಿ ಸಂಯುಕ್ತವಾಗಿ ಈ ಕ್ರೀಡೆ ಆಯೋಜಿಸಿದೆ.

ಯುಗಾದಿಗೆ ಮೈಸೂರು–ಕಾರವಾರ ವಿಶೇಷ ರೈಲು

ಬೆಂಗಳೂರು, ಮಾ.21– ಯುಗಾದಿ ಮತ್ತು ರಂಜಾನ್ ಹಬ್ಬಗಳ ಸಂದರ್ಭದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ಸರಿದೂಗಿಸಲು ಮೈಸೂರು ಮತ್ತು ಕಾರವಾರ, ಬೆಂಗಳೂರು ಕಲಬುರಗಿ ನಡುವೆ ವಿಶೇಷ ಎಕ್ಸ್‌ಪ್ರೆಸ್ ರೈಲು ಕಾರ್ಯಾಚರಣೆಗೆ ರೈಲ್ವೆ ಮಂಡಳಿ ನಿರ್ಧರಿಸಿದೆ.

ರೈಲು ಸಂಖ್ಯೆ 06203 ಮೈಸೂರು–ಕಾರವಾರ ವಿಶೇಷ ಎಕ್ಸ್‌ಪ್ರೆಸ್ ರೈಲು ಮಾರ್ಚ್ 28 ರಂದು ರಾತ್ರಿ 9.35 ಕ್ಕೆ ಮೈಸೂರಿನಿಂದ ಹೊರಟು, ಮರುದಿನ ಸಂಜೆ 4.15ಕ್ಕೆ ಕಾರವಾರ ತಲುಪಲಿದೆ. ಪುನಃ ಇದೇ ರೈಲು (06204) ಮಾರ್ಚ್ 29 ರಂದು ರಾತ್ರಿ 11.30 ಕ್ಕೆ ಕಾರವಾರದಿಂದ ಹೊರಟು, ಮರುದಿನ ಸಂಜೆ 4.40 ಕ್ಕೆ ಮೈಸೂರು ತಲುಪಲಿದೆ.

ಈ ರೈಲು ಎರಡೂ ಮಾರ್ಗಗಳಲ್ಲಿ ಮಂಡ್ಯ, ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ಕುಣಿಗಲ್, ಹಾಸನ, ಸಕಲೇಶಪುರ, ಸುಬ್ರಹ್ಮಣ್ಯ ರೋಡ್, ಕಬಕಪುತ್ತೂರು, ಬಂಟ್ವಾಳ, ಸುರತ್ಕಲ್, ಮೂಲ್ಕಿ, ಉಡುಪಿ, ಬಾರ್ಕೂರು, ಕುಂದಾಪುರ, ಬೈಂದೂರು, ಭಟ್ಕಳ, ಮುರುಡೇಶ್ವರ, ಹೊನ್ನಾವರ, ಕುಮಟಾ, ಗೋಕರ್ಣ ರೋಡ್ ಮತ್ತು ಅಂಕೋಲಾ ನಿಲ್ದಾಣಗಳಲ್ಲಿ ನಿಲುಗಡೆಗೊಳ್ಳಲಿದೆ.

ಈ ರೈಲು 1 ಎಸಿ 2 ಟೈರ್ ಕಮ್ ಎಸಿ 3 ಟೈರ್, 3 ಎಸಿ 3 ಟೈರ್, 13 ಸ್ಲೀಪರ್ ಕ್ಲಾಸ್, 2 ಜನರಲ್ ಸೆಕೆಂಡ್ ಕ್ಲಾಸ್ ಮತ್ತು 2 ಎಸ್‌ಎಲ್‌ಆರ್ / ಡಿ ಬೋಗಿಗಳು ಸೇರಿದಂತೆ 21 ಬೋಗಿಗಳನ್ನು ಒಳಗೊಂಡಿರುತ್ತದೆ. ಕಾಯ್ದಿರಿಸುವಿಕೆ, ಆಗಮನ ಮತ್ತು ನಿರ್ಗಮನ ಸಮಯ ಮತ್ತು ಹೆಚ್ಚಿನ ವಿವರಗಳಿಗಾಗಿ, ಪ್ರಯಾಣಿಕರು ಅಧಿಕೃತ ರೈಲ್ವೆ ವೆಬ್‌ಸೈಟ್‌ಗೆ ಭೇಟಿ ನೀಡಿ ಅಥವಾ ಹತ್ತಿರದ ರೈಲ್ವೆ ಬುಕಿಂಗ್ ಕೌಂಟರ್‌ಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು.

ಕರ್ನಾಟಕ ಲೋಕಸೇವಾ ಆಯೋಗದ ಪರೀಕ್ಷೆ ಮುಂದೂಡಿಕೆ

ಬೆಂಗಳೂರು, ಮಾ.21– ಕರ್ನಾಟಕ ಲೋಕಸೇವಾ ಆಯೋಗ 2023–24ನೇ ಸಾಲಿನ ಗೆಜೆಟ್ ಪ್ರೊಬೇಷನರಿ ಗ್ರೂಪ್ ಎ ಮತ್ತು ಗ್ರೂಪ್ ಬಿ ವೃಂದದ 384 ಹುದ್ದೆಗಳ ನೇಮಕಾತಿ ಪರೀಕ್ಷೆಯನ್ನು ಮುಂದೂಡಿದೆ.

ಮಾರ್ಚ್ 28, 29 ಮತ್ತು ಏಪ್ರಿಲ್ 1, 2ರಂದು ನಡೆಸುವುದಾಗಿ ಕರ್ನಾಟಕ ಲೋಕಸೇವಾ ಆಯೋಗ ಇತ್ತೀಚೆಗೆ ತನ್ನ ಅಧಿಸೂಚನೆಯಲ್ಲಿ ತಿಳಿಸಿತ್ತು. ಆದರೆ ಇದೀಗ ಕಾರಣಾಂತರಗಳಿಂದ ನಿಗದಿಯಾಗಿದ್ದ ಪರೀಕ್ಷೆಯನ್ನು ಮುಂದೂಡಿರುವುದಾಗಿ ಶುಕ್ರವಾರ ಆದೇಶ ಹೊರಡಿಸಲಾಗಿದೆ. ಶೀಘ್ರದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಅಧಿಕೃತ ವೆಬ್‌ಸೈಟ್‌ನಲ್ಲಿ ಹೊಸ ದಿನಾಂಕವನ್ನು ಪ್ರಕಟಿಸುವುದಾಗಿ ಪ್ರಕಟಣೆಯಲ್ಲಿ ಉಲ್ಲೇಖಿಸಿದೆ.

ಕೆಎಎಸ್ ಪರೀಕ್ಷೆಯಲ್ಲಿ ಕೆಪಿಎಸ್‌ಸಿ ಮಾಡಿದ ಎಡವಟ್ಟು ಸಂಬಂಧ ಅಭ್ಯರ್ಥಿಗಳ ಅಸಮಾಧಾನ ಆಕ್ರೋಶ ಮುಗಿಯುವ ಲಕ್ಷಣ ಕಾಣಿಸುತ್ತಿಲ್ಲ. ಪ್ರಶ್ನೆ ಪತ್ರಿಕೆ ಅನುವಾದದಲ್ಲಿ ವಿವಾದಕ್ಕೀಡಾಗಿರುವ ಕರ್ನಾಟಕ ಲೋಕ ಸೇವಾ ಆಯೋಗದ ವಿರುದ್ಧ ಇತ್ತೀಚೆಗೆ ಅಭ್ಯರ್ಥಿಗಳು ಪ್ರತಿಭಟನೆ ಮಾಡಿದ್ದರು. ಅಷ್ಟೇ ಅಲ್ಲದೆ ಸಿಎಂ ಸಿದ್ದರಾಮಯ್ಯಗೆ ರಕ್ತದಲ್ಲಿ ಪತ್ರ ಬರೆದಿದ್ದರು.

ಆಗಸ್ಟ್ 27 ಮತ್ತು ಡಿಸೆಂಬರ್ 29 ರಂದು ಕೆಪಿಎಸ್‌ಸಿ ನಡೆಸಿದ ಕೆಎಎಸ್ ಪರೀಕ್ಷೆಯಲ್ಲಿನ ಯಡವಟ್ಟು ಸಂಬಂಧ ವಿದ್ಯಾರ್ಥಿಗಳು ಮತ್ತು ಕೆಪಿಎಸ್‌ಸಿ ಆಡಳಿತ ಮಂಡಳಿ ನಡುವಿನ ಗುದ್ದಾಟಕ್ಕೆ ಬ್ರೇಕ್ ಬೀಳುವ ಲಕ್ಷಣಗಳೇ ಕಾಣುತ್ತಿಲ್ಲ. ಈ ಮಧ್ಯೆ ಪರೀಕ್ಷಾರ್ಥಿಗಳ ಪರವಾಗಿ ಕರವೇ ಕೂಡ ಸರ್ಕಾರ ಮತ್ತು ಕೆಪಿಎಸ್‌ಸಿಯನ್ನು ಎಚ್ಚರಿಸುವ ಕೆಲಸ ಕೂಡ ಮಾಡಿತ್ತು ಆದರೆ ಸರ್ಕಾರ ಮಾತ್ರ ಕ್ಯಾರೆ ಅಂದಿರಲಿಲ್ಲ ಇದರಿಂದ ಮತ್ತಷ್ಟು ಕೆರಳಿದ್ದ ವಿದ್ಯಾರ್ಥಿಗಳು ಮತ್ತು ಕರವೇ ರಕ್ತದಲ್ಲಿ ಪತ್ರ ಬರೆಯುವ ಮೂಲಕ ಸರ್ಕಾರದ ವಿರುದ್ಧ ವಿಭಿನ್ನ ಪ್ರತಿಭಟನೆ ಮೂಲಕ ಆಕ್ರೋಶ ವ್ಯಕ್ತಪಡಿಸಿದ್ದರು.

ಹುಟ್ಟುಹಬ್ಬ ಸಂಭ್ರಮ





ಮೈಸೂರಿನ ತ್ಯಾಗು ಏಜನ್ಸೀಸ್ ಮಾಲೀಕ ಹಾಗೂ ಕಾಂಗ್ರೆಸ್ ಮುಖಂಡ ವೈ.ಎಸ್.ತ್ಯಾಗರಾಜು ಅವರ ಹುಟ್ಟುಹಬ್ಬವನ್ನು ಬೋಗಾದಿಯ ಯುವಕರು ಹಾಗೂ ಗ್ರಾಮಸ್ಥರು ವಿವಿಧೆಡೆ ಆಚರಿಸಿದರು. ಅಭಿಮಾನಿಗಳು ಬೃಹತ್ ಹಾರ ಹಾಕಿ ಅಭಿನಂದಿಸುವುದರ ಜೊತೆಗೆ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಒಂದನೇ ಪುಟದಿಂದ

ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗುವ ಲಕ್ಷಣ

ಘೋಷಿಸಿದ್ದಾರೆ. ಮೈಸೂರು ಟ್ರಾವೆಲ್ ಅಸೋಸಿಯೇಷನ್ (MTA) ಹಾಗೂ ಸಂಘ–ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಬಿ.ಎಸ್. ಪ್ರಶಾಂತ್ ತಿಳಿಸಿದ್ದಾರೆ. ಹಲ್ಲೆ ಮಾಡಿದವರ ವಿರುದ್ಧ ಕ್ರಮಕ್ಕೆ ಆಗ್ರಹಿಸಬೇಕಿದ್ದರೆ ವಿಧಾನ ಸೌಧದ ಬಳಿ ಪ್ರತಿಭಟನೆ ಮಾಡಲಿ, ನಾವೂ ಪಾಲ್ಗೊಳ್ಳುತ್ತೇವೆ. ಆದರೆ, ಜನರಿಗೆ ತೊಂದರೆ ಆಗುವ ಬಂದ್‌ಗೆ ನಮ್ಮ ಬೆಂಬಲವಿಲ್ಲ ಎಂದು ಸ್ಕಾಲ್ ಇಂಟರ್ ನ್ಯಾಷನಲ್ ಮೈಸೂರು ಚಾಪ್ಟರ್ ಅಧ್ಯಕ್ಷ ಜಯಕುಮಾರ್ ತಿಳಿಸಿದ್ದಾರೆ.

ಪೆಟ್ರೋಲ್ ಬಂಕ್ ತೆರೆದಿರುತ್ತದೆ: ನಾಡಿನ ಭಾಷೆ ಮತ್ತು ಸಂಸ್ಕೃತಿಗೆ ಧಕ್ಕೆ ಉಂಟಾದಾಗ ಪೆಟ್ರೋಲ್ ಬಂಕ್ ಮಾಲೀಕರು ಮುಂಚೂಣಿಯಲ್ಲಿದ್ದು, ಹೋರಾಟಕ್ಕೆ ಬೆಂಬಲ ಸೂಚಿಸಿದ್ದೇವೆ. ಆದರೆ ಬೆಳಗಾವಿ ವಿಭಾಗದ ಕೆಎಸ್‌ಆರ್ ಟಿಸಿ ಬಸ್ ಚಾಲಕ ಮತ್ತು ಕಂಡಕ್ಟರ್ ಮೇಲೆ ಹಲ್ಲೆ ನಡೆಸಿದ ಘಟನೆ ಸಂಬಂಧ ಈಗಾಗಲೇ ರಾಜ್ಯ ಸರ್ಕಾರವು ಕ್ರಮ ವಹಿಸಿರುವುದರಿಂದ ಅತ್ಯಗತ್ಯ ಸೇವೆಗಳಲ್ಲಿ ಒಂದಾಗಿರುವ ಡೀಸೆಲ್, ಪೆಟ್ರೋಲ್ ಮತ್ತು ಅನಿಲ ಪೂರೈಕೆಗೆ ತೊಂದರೆ ಯಾಗಬಾರದೆಂಬ ಉದ್ದೇಶದಿಂದ ಶನಿವಾರ ನಡೆಯುವ ಕರ್ನಾಟಕ ಬಂದ್‌ಗೆ ನಾವು ಬಾಹ್ಯ ಬೆಂಬಲ ನೀಡುತ್ತೇವೆ. ಪೆಟ್ರೋಲ್ ಬಂಕ್‌ಗಳನ್ನು ಬಂದ್ ಮಾಡುವುದಿಲ್ಲ ಎಂದು ಅಖಿಲ ಕರ್ನಾಟಕ ಫೆಡರೇಷನ್ ಆಫ್ ಪೆಟ್ರೋಲಿಯಂ ಟ್ರೇಡರ್ಸ್ ರಾಜ್ಯಾಧ್ಯಕ್ಷ ಕೆ.ಎಂ.ಬಸವೇಗೌಡ ತಿಳಿಸಿದ್ದಾರೆ.

ಕೈಗಾರಿಕೆಗಳು ಕಾರ್ಯನಿರ್ವಹಿಸಲಿವೆ: ಕರ್ನಾಟಕ ಬಂದ್‌ಗೆ ಕೈಗಾರಿಕೆಗಳು, ಉದ್ದಿಮೆಗಳ ಮಾಲೀಕರು ನೈತಿಕ ಬೆಂಬಲ ನೀಡಲಿದ್ದಾರೆ. ಆದ್ದರಿಂದ ನಾವು ಸೂಕ್ಷ್ಮ, ಸಣ್ಣ, ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳು ಕಾರ್ಯನಿರ್ವಹಿಸಲಿದ್ದು, ಬಂದ್‌ಗೆ ಬಾಹ್ಯ ಬೆಂಬಲ ನೀಡುತ್ತೇವೆ ಎಂದು ಮೈಸೂರು ಕೈಗಾರಿಕೆಗಳ ಸಂಘ (MIA)ದ ಪ್ರಧಾನ ಕಾರ್ಯದರ್ಶಿ ಸುರೇಶ್‌ಕುಮಾರ್ ಜೈನ್ ತಿಳಿಸಿದರು.

ವರ್ತಕರ ಬೆಂಬಲ: ಮೈಸೂರಿನ ವಿವಿಧ ಮಾರುಕಟ್ಟೆ ವರ್ತಕರ ಸಂಘಗಳ ಒಕ್ಕೂಟದ ಅಧ್ಯಕ್ಷ ಮಹದೇವ್, ಬಂದ್‌ಗೆ ಸಂಪೂರ್ಣ ಬೆಂಬಲ ನೀಡಲಾಗುವುದು. ಮೈಸೂರಿನ ದೇವರಾಜ, ವಾಣಿವಿಲಾಸ, ಮಂಡಿ ಮಾರುಕಟ್ಟೆಗಳಲ್ಲಿ ಅಂಗಡಿಗಳನ್ನು ಬಂದ್ ಮಾಡಿ ವರ್ತಕರು ಕನ್ನಡ ಸಂಘಟನೆಗಳ ಪರ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುತ್ತೇವೆ ಎಂದರು.

ಆಟೋ ಚಾಲಕರ ಬೆಂಬಲ: ನಾಡು, ನುಡಿ, ಜಲ, ಭಾಷೆ ವಿಷಯ ಬಂದಾಗ ಆಟೋ ಮಾಲೀಕರು ಮತ್ತು ಚಾಲಕರು ಹೋರಾಟದಲ್ಲಿ ಭಾಗಿಯಾಗುತ್ತಾರೆ ಎಂದಿರುವ ಆಟೋ ಚಾಲಕರು ಮತ್ತು ಮಾಲೀಕರ ಸಂಘಗಳ ಒಕ್ಕೂಟದ ಬಿ.ನಾಗರಾಜು, ಮಾರ್ಚ್ 22ರ ಬಂದ್‌ಗೆ ಬೆಂಬಲ ನೀಡಲು ಕರೆ ಕೊಟ್ಟಿದ್ದೇವೆ ಎಂದರು.

ಲಾರಿ ಮಾಲೀಕರ ನಿಲುವು ಅನಿಶ್ಚಿತ: ಸರಕು ಸಾಗಾಣೆ ವಾಹನಗಳು ಹೊರಗಡೆಯಿಂದ ಲೋಡ್ ಆಗಿ ಜಿಎಸ್‌ಟಿ ಪಾವತಿಸಿ ಬಿಲ್‌ನೊಂದಿಗೆ ಬರುತ್ತಿರುವುದರಿಂದ ಏಕಾಏಕಿ ಲಾರಿಗಳನ್ನು ನಿಲ್ಲಿಸಲು ಸಾಧ್ಯವಾಗುವುದಿಲ್ಲ. ಒಂದು ವೇಳೆ ರಜಾ ಬಂದ್ ಆದರೆ ಮಾತ್ರ ನಾವು ಬಂದ್ ಮಾಡಬಹುದು. ಇಲ್ಲದಿದ್ದರೆ ಕರ್ನಾಟಕ ಬಂದ್‌ಗೆ ನಾವು ಬಾಹ್ಯ ಬೆಂಬಲ ನೀಡುತ್ತೇವೆ ಅಷ್ಟೇ ಎಂದು ಮೈಸೂರು ಜಿಲ್ಲಾ ಲಾರಿ ಮಾಲೀಕರ ಒಕ್ಕೂಟದ ಅಧ್ಯಕ್ಷ ಬಿ.ಕೋದಂಡರಾಮ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಪರಿಸ್ಥಿತಿ ಆಧರಿಸಿ ಬಸ್ ಸಂಚಾರ: ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿಯಿಂದ ಇದುವರೆಗೆ ಕರ್ನಾಟಕ ಬಂದ್ ಸಂಬಂಧ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಯಾವುದೇ ನಿರ್ದೇಶನ ಬಂದಿಲ್ಲದ ಕಾರಣ ನಾವು ಬಸ್‌ಗಳನ್ನು ಎಂದಿನಂತೆ ಓಡಿಸಬೇಕಾಗುತ್ತದೆ. ಒಂದು ವೇಳೆ ನಾಳೆ ಪರಿಸ್ಥಿತಿ ಬಿಗಡಾಯಿಸಿದರೆ ಮಾತ್ರ ಪ್ರಯಾಣಿಕರು ಮತ್ತು ಬಸ್‌ಗಳ ಹಿತದೃಷ್ಟಿಯಿಂದ ಪರಿಸ್ಥಿತಿಗನುಗುಣವಾಗಿ ಕ್ರಮವಹಿಸುತ್ತೇವೆ ಎಂದು ಕೆಎಸ್‌ಆರ್‌ಟಿಸಿ ಮೈಸೂರು ನಗರ ಮತ್ತು ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಕರು ತಿಳಿಸಿದ್ದಾರೆ.

ಖಾಸಗಿ ಬಸ್ ಸಂಚಾರ ಎಂದಿನಂತೆ: ಪರೀಕ್ಷೆ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂದು ಕರ್ನಾಟಕ ಬಂದ್ ವೇಳೆ ಖಾಸಗಿ ಬಸ್ ಸಂಚಾರ ಸ್ಥಗಿತವಾಗುವುದಿಲ್ಲ ಎಂದು ಮೈಸೂರು ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ಪೃಥ್ವಿರಾಜ್ ತಿಳಿಸಿದ್ದಾರೆ.

ಚಿತ್ರ ಪ್ರದರ್ಶನ ಇದೆ: ಶನಿವಾರ ಕರೆದಿರುವ ಬಂದ್‌ಗೆ ನಮ್ಮ ನೈತಿಕ ಬೆಂಬಲ ಇದೆಯೇ ಹೊರತು ಸಿನಿಮಾ ಪ್ರದರ್ಶನವನ್ನು ನಿಲ್ಲಿಸುವುದಿಲ್ಲ ಎಂದು ಮೈಸೂರು ಸಿಟಿ ಫಿಲಂ ಎಕ್ಸಿಬ್ಯೂಟರ್ಸ್ ಅಸೋಸಿಯೇಷನ್ ಕಾರ್ಯದರ್ಶಿ ರಾಜಾರಾಂ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸರ್ಕಾರಿ ಕಚೇರಿಗಳಿಗೆ 4ನೇ ಶನಿವಾರವಾಗಿರುವುದರಿಂದ ರಜಾ ದಿನವಾಗಿದ್ದು, ಶಾಲಾ ಕಾಲೇಜುಗಳಿಗೆ ರಜೆ ಘೋಷಣೆಯಾಗಿಲ್ಲ. ಅತ್ಯವಶ್ಯಕ ಸೇವೆಗಳಾದ ಆಸ್ಪತ್ರೆಗಳು, ಡಯಾಗ್ನೋಸ್ಟಿಕ್ ಸೆಂಟರ್‌ಗಳು, ಮೆಡಿಕಲ್ ಸ್ಟೋರ್‌ಗಳು, ಹಾಲು, ಹಣ್ಣು, ತರಕಾರಿ, ದಿನಸಿ, ನೀರು ಮುಂತಾದ ಅಗತ್ಯ ಸರಕು ಪೂರೈಕೆಗೆ ಯಾವ ಅಡ್ಡಿಯೂ ಇಲ್ಲ.

ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ

ರಾಜಣ್ಣ ದೂರು ಕೊಟ್ಟರೆ ಉನ್ನತ ಮಟ್ಟದ ತನಿಖೆ ಮಾಡಿಸಲಾಗುತ್ತದೆ ಎಂಬುದಾಗಿ ಗೃಹ ಸಚಿವರು ಉತ್ತರಿಸಿದ ಮೇಲೆ ಪುನಃ ವಿಷಯ ಪ್ರಸ್ತಾಪಿಸುವುದು ಸರಿಯಲ್ಲ. ಹನಿಟ್ರ್ಯಾಪ್ ಯಾರೇ ಮಾಡಿಸಿದ್ದರೂ, ಅದು ತಪ್ಪು. ಎತ್ತು ಈಯಿತು ಎಂದಾಕ್ಷಣ ಕೊಟ್ಟಿಗೆಗೆ ಕಟ್ಟು ಎಂದು ಹೇಳಲಾಗುವುದಿಲ್ಲ. ರಾಜಣ್ಣ ಯಾರ ಹೆಸರನ್ನೂ ಹೇಳಿಲ್ಲ, ಹೇಳಿದ್ದರೆ ಕ್ರಮ ತೆಗೆದುಕೊಳ್ಳಬಹುದಿತ್ತು. ಪ್ರಕರಣದಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ಮುಖ್ಯಮಂತ್ರಿ ಪುನರುಚ್ಚರಿಸಿದರು.

ಇಂದು ಕರ್ನಾಟಕ ಬಂದ್

ಮಾತುಕತೆ ನಡೆಸಿದ್ದು, ಬಂದ್‌ಗೆ ಬೆಂಬಲ ಯಾಚಿಸಿವೆ.

ನೈತಿಕ ಬೆಂಬಲ: ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನೌಕರರ ಸಂಘ, ಲಾರಿ ಚಾಲಕರ ಸಂಘ, ಮದ್ಯ ಮಾರಾಟಗಾರರ ಸಂಘ, ಕೆಲ ಮಾಲ್ ಅಸೋಸಿಯೇಷನ್, ಗಾರ್ಮೆಂಟ್ಸ್ ಅಸೋಸಿ ಯೇಷನ್, ಹೋಲ್‌ಸೇಲ್ ಬಟ್ಟೆ ವ್ಯಾಪಾರಸ್ಥರು, ಹೋಟೆಲ್ ಅಸೋಸಿಯೇಷನ್, ಬೆಂಗಳೂರು ಸಂಚಾರಿ ಆಟೋ ಸೇನೆ, ಎಪಿಎಂಸಿ ಮಾರುಕಟ್ಟೆಗಳ ಒಕ್ಕೂಟ, ಖಾಸಗಿ ಸಾರಿಗೆ ಒಕ್ಕೂಟ, ಕರ್ನಾಟಕ ರಕ್ಷಣಾ ವೇದಿಕೆ ಅಭಿಮಾನಿ ಸಂಘ, ಕರ್ನಾಟಕ ರಕ್ಷಣಾ ವೇದಿಕೆ ಧ್ವನಿ, ಬೀದಿ ಬದಿ ವ್ಯಾಪಾರಿಗಳ ಸಂಘಟನೆ, ಕರ್ನಾಟಕ ರಾಜ್ಯ ರೈತ ಸಂಘಟನೆ, ಖಾಸಗಿ ಶಾಲೆಗಳ ಒಕ್ಕೂಟ ಕ್ಯಾಮ್ಸ್, ಖಾಸಗಿ ಶಾಲೆಗಳ ಒಕ್ಕೂಟ ಕೃಪಾ, ಖಾಸಗಿ ಶಾಲೆಗಳ ಒಕ್ಕೂಟ ರುಪ್ಸ ಪೋಷಕರ ಸಮನ್ವಯ ಸಮಿತಿ, ಪೀಸ್ ಆಟೋ ಸಂಘಟನೆ ಮತ್ತು ಕರುನಾಡು ಕಾರ್ಮಿಕ ಸೇನೆ ನೈತಿಕ ಬೆಂಬಲ ನೀಡಿವೆ.

ಸಂಪೂರ್ಣ ಬೆಂಬಲ: ಓಲಾ– ಉಬರ್ ಚಾಲಕರ ಸಂಘ, ಕರವೇ ಶಿವರಾಮೇಗೌಡ ಬಣ, ಕರವೇ ಗಜಕೇಸರಿ ಸೇನೆ, ಡಾ.ರಾಜ್‌ಕುಮಾರ್ ಅಭಿಮಾನಿ ಸಂಘ, ವೀರ ಕನ್ನಡಿಗರ ಸೇನೆ, ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್ತು, ರೂಪೇಶ್ ರಾಜಣ್ಣ ಬಣ, ಬೆಂಗಳೂರು ಆಟೋ ಸೇನೆ, ಜಯಭಾರತ್ ಚಾಲಕರ ಸಂಘ, ಕರ್ನಾಟಕ ಜನಪರ ವೇದಿಕೆ, ಆದರ್ಶ ಆಟೋ ಯೂನಿಯನ್, ಗೂಡ್ಸ್ ಚಾಲಕರ ಸಂಘ ಬೆಂಬಲ ನೀಡಿದ್ದರೆ, ಕರವೇ ಪ್ರವೀಣ್ ಶೆಟ್ಟಿ ಬಣ ಮತ್ತು ನಾರಾಯಣಗೌಡರ ಬಣ ಬೆಂಬಲ ನೀಡಿಲ್ಲ.

17 ಜಿಲ್ಲೆಗಳಲ್ಲಿ ಬಂದ್‌ಗೆ ಬೆಂಬಲ ನಿರಾಕರಣೆ: ಎಂಇಎಸ್ ಪುಂಡಾಟ ಖಂಡಿಸಿ ಕರೆ ನೀಡಿರುವ ಬಂದ್‌ಗೆ 17 ಜಿಲ್ಲೆಗಳು ಬೆಂಬಲ ನೀಡಿಲ್ಲ. 11 ಜಿಲ್ಲೆಗಳಲ್ಲಿ ಮಿಶ್ರಪ್ರತಿಕ್ರಿಯೆ ವ್ಯಕ್ತವಾಗಿದೆ. 2 ಜಿಲ್ಲೆಗಳು ಮಾತ್ರ ಸಂಪೂರ್ಣ ಬೆಂಬಲ ನೀಡಿವೆ. ಕರ್ನಾಟಕ ಬಂದ್‌ಗೆ ಬೆಳಗಾವಿ, ಮಂಡ್ಯದಲ್ಲಿ ಮಾತ್ರ ಸಂಪೂರ್ಣ ಬೆಂಬಲ ವ್ಯಕ್ತವಾಗಿದೆ. ಉಳಿದಂತೆ ಬಾಗಲಕೋಟೆ, ಚಾಮರಾಜನಗರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಕೋಲಾರ, ಕೊಪ್ಪಳ, ರಾಯಚೂರು, ರಾಮನಗರ, ಉಡುಪಿ, ಯಾದಗಿರಿ ಜಿಲ್ಲೆಗಳಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬಳ್ಳಾರಿ, ಬೀದರ್, ವಿಜಯಪುರ, ಚಿಕ್ಕಬಳ್ಳಾಪುರ, ಚಿಕ್ಕೋಡಿ, ಕಲಬುರಗಿ, ಹಾಸನ, ಹಾವೇರಿ, ಹುಬ್ಬಳ್ಳಿ, ಕಾರವಾರ, ಮಡಿಕೇರಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು, ಉಡುಪಿ ಹಾಗೂ ಯಾದಗಿರಿ ಜಿಲ್ಲೆಗಳು ಬಂದ್‌ಗೆ ಬೆಂಬಲ ನಿರಾಕರಿಸಿವೆ.

ಏನಿರುತ್ತೆ:

- ದೈನಂದಿನ ಅವಶ್ಯಕ ವಸ್ತುಗಳಾದ ಹಾಲು, ದಿನಪತ್ರಿಕೆ, ಮೆಡಿಕಲ್, ವೈದ್ಯಕೀಯ ಸೇವೆ.
- ಆಂಬುಲೆನ್ಸ್, ಹೋಲ್‌ಸೇಲ್ ಬಟ್ಟೆ ಅಂಗಡಿಗಳು.
- ತರಕಾರಿ, ಹೂ, ಹಣ್ಣುಗಳು, ಸೂಪರ್ ಮಾರ್ಕೆಟ್, ಹೋಟೆಲ್‌ಗಳ ಎಂದಿನಂತೆ ಓಪನ್ ಇರಲಿದೆ
- ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ಮೆಟ್ರೋ ಸಂಚಾರ, ರೈಲು ಓಡಾಡಲಿವೆ
- ಖಾಸಗಿ ಬಸ್, ಶಾಲಾ ವಾಹನ ಓಡಾಟ ಇರಲಿದೆ.
- ಬಾರ್‌ಗಳು ತೆರೆದಿರಲಿದ್ದು, ಏರ್‌ಪೋರ್ಟ್ ಟ್ಯಾಕ್ಸಿ ಸೇವೆ ಇರಲಿದೆ
- ಶೇಕಡ 65ರಷ್ಟು ಆಟೋಗಳ ಸೇವೆ ಇರಲಿದೆ

ಏನಿರಲ್ಲ:

- ಥಿಯೇಟರ್‌ಗಳು ಮಧ್ಯಾಹ್ನ ತನಕ ಬಂದ್
- ಶೇಕಡ 35ರಷ್ಟು ಆಟೋ ಸೇವೆಯಲ್ಲಿ ತುಸು ವ್ಯತ್ಯಯ
- ಗೂಡ್ಸ್ ವಾಹನಗಳ ಸೇವೆಯಲ್ಲಿ ವ್ಯತ್ಯಯ
- ಓಲಾ–ಊಬರ್ ಸೇವೆಯಲ್ಲಿ ವ್ಯತ್ಯಯ

6 ತಿಂಗಳು ಸಸ್ಪೆಂಡ್

ಉಮಾನಾಥ್ ಎ. ಕೋಟ್ಯಾನ್, ಬಿ.ಸುರೇಶ್‌ಗೌಡ, ಡಾ.ಶೈಲೇಂದ್ರ ಬೆಲ್ದಾಳೆ, ಶರಣು ಸರಲಗರ, ಸಿ.ಕೆ.ರಾಮಮೂರ್ತಿ, ಯಶ್‌ಪಾಲ್ ಎ. ಸುವರ್ಣ, ಬಿ.ಪಿ. ಹರೀಶ್, ಡಾ.ವೈಭರತ್ ಶೆಟ್ಟಿ, ಬಸವರಾಜ್ ಮತ್ತಿಮೂಡ್, ಧೀರಜ್ ಮುನಿರಾಜು, ಮುನಿರತ್ನ ಹಾಗೂ ಡಾ.ಚಂದ್ರು ಲಮಾಣಿ ಅವರುಗಳನ್ನು ಹೆಸರಿಸಿ, ಸಭಾಧ್ಯಕ್ಷರು ಸದನದಿಂದ ಅಮಾನತುಗೊಳಿಸಿದರು.

ಕೂಡಲೇ ಮಾರ್ಷಲ್‌ಗಳು ಆ ಶಾಸಕ ರನ್ನು ಸದನದಿಂದ ಹೊತ್ತು ತಂದು, ಹೊರಗೆಬಿಟ್ಟರು. ಮಧ್ಯಾಹ್ನದ ನಂತರ ಸದನ ಸೇರುತ್ತಿದ್ದಂತೆ ಸಭಾಧ್ಯಕ್ಷರ ಪೀಠಕ್ಕೆ ಈ 18 ಶಾಸಕರು ಕೆಲ ವಿಧೇಯಕಗಳ ಪ್ರತಿಯನ್ನು ಹರಿದು ಸ್ಪೀಕರ್ ಮೇಲೆ ತೂರಿ, ಅವರಿಗೆ ಅಗೌರವ ತರುವ ರೀತಿಯಲ್ಲಿ ನಡೆದುಕೊಂಡಿರುವುದು ಪರಿಶೀಲನೆ ಯಿಂದ ಕಂಡುಬಂದಿದೆ ಎಂದು ಸ್ಪೀಕರ್ ಪ್ರಕಟಿಸಿ ದರು. ಹೆಸರಿಸಿದ ಎಲ್ಲಾ 18 ಶಾಸಕರನ್ನು ಆರು ತಿಂಗಳ ಅವಧಿಗೆ ಸದನದಿಂದ ಅಮಾನತು ಮಾಡುವಂತೆ ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಮಂಡಿಸಿದ ಪ್ರಸ್ತಾವವನ್ನು, ಸಭಾಧ್ಯಕ್ಷರು ಧ್ವನಿಮತಕ್ಕೆ ಹಾಕಿದರು, ಗದ್ದಲದ ನಡುವೆಯೇ ನಿರ್ಣಯ ಅಂಗೀಕಾರ ವಾಯಿತು. ವಿಧಾನಸಭೆ ಕಲಾಪ ಆರುಭದಿಂದಲೂ ಹನಿಟ್ರ್ಯಾಪ್ ಪ್ರಕರಣ ಮುಂದಿಟ್ಟು ಕೊಂಡು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು, ಸರ್ಕಾರದ ವಿರುದ್ಧ ಹರಿಹಾಯ್ದು ಧರಣಿ ನಡೆಸಿದರು. ಅಲ್ಲದೇ, ಬಜೆಟ್ ಹಾಗೂ ಮಸೂದೆಗಳ ಪ್ರತಿಗಳನ್ನು ಹರಿದು ಪ್ರತಿಭಟಿಸಿದರು.

ಇದರ ನಡುವೆಯೇ ರಾಜ್ಯ ಬಜೆಟ್, ಶಾಸಕರ ವೇತನ ಹಾಗೂ ಕೆಲವು ಮಸೂದೆಗಳಿಗೆ ಸದನದ ಅಂಗೀಕಾರ ಪಡೆದು ಕೊಳ್ಳಲಾಯಿತು. ಬಜೆಟ್ ಪ್ರತಿಗಳನ್ನು ಹರಿದುಹಾಕಿದ್ದರಿಂದ ರೋಷಗೊಂಡ ಮುಖ್ಯಮಂತ್ರಿ ಹಾಗೂ ಸಚಿವರು, ಪ್ರತಿಭಟನೆ ನಡೆಸುತ್ತಿದ್ದವರನ್ನು ಸದನದಿಂದ ಹೊರಹಾಕುವಂತೆ ಮನವಿ ಮಾಡಿದರು. ಆದರೂ ಧರಣಿನಿರತರು ಪೀಠದತ್ತ ತೆರಳಿ ಗದ್ದಲ ಎಬ್ಬಿಸಿದರು. ಇದಕ್ಕೂ ಮುನ್ನ ಬೆಳಗ್ಗೆ ಸದನ ಆರಂಭವಾಗುತ್ತಿದ್ದಂತೆ ಬಿಜೆಪಿಯ ಸುನೀಲ್ ಕುಮಾರ್ ಮಾತನಾಡಿ, ಸಚಿವರು ಹನಿಟ್ರ್ಯಾಪ್ ಕುರಿತು ಸದನದಲ್ಲಿ ಉಲ್ಲೇಖ ಮಾಡಿದ್ದಾರೆ. ಶಾಸನ ಸಭೆಯಲ್ಲಿ ಮೊದಲ ಬಾರಿಗೆ ಇಂತಹ ಘಟನೆ ನಡೆದಿದೆ, ಇದು ನಂಬಿಕೆಗೆ ವಿಷಪ್ರಾಸನ ಮಾಡುವ ಘಟನೆಯಾಗಿದೆ. ಸಚಿವರ ಹೇಳಿಕೆ ನಂತರ ಅನೇಕ ಸಚಿವರು, ಶಾಸಕರು, ನಮ್ಮ ಮೇಲೂ ಈ ಪ್ರಯತ್ನ ನಡೆದಿದೆ ಎಂದು ಬಹಿರಂಗವಾಗಿ ಹೇಳಿ ಕೊಂಡಿದ್ದಾರೆ. ಹನಿಟ್ರ್ಯಾಪ್ ಫ್ಯಾಕ್ಟರಿ ಇದೆಯೆಂದು ನಿಮ್ಮ ಪಕ್ಷದ ಸಚಿವರೇ ಹೇಳಿದ್ದಾರೆ, ಇಂತಹ ಪರಿಸ್ಥಿತಿ ಯಾರಿಗೂ ಬರಬಾರದು, ಮೊದಲು ಈ ವಿಚಾರಕ್ಕೆ ಉತ್ತರಿಸಿ ನಂತರ ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಿ ಎಂದು ಪಟ್ಟು ಹಿಡಿದರು. ಈ ಸಂದರ್ಭದಲ್ಲಿ ಆಡಳಿತ ಮತ್ತು ಪ್ರತಿಪಕ್ಷ ಸದಸ್ಯರ ನಡುವೆ ಏರಿದ ಧನಿಯಲ್ಲಿ ಮಾತಿನ ಚಕಮಕಿ ನಡೆಯಿತು. ಸಚಿವರುಗಳನ್ನೇ ಹನಿಟ್ರ್ಯಾಪ್ ಮಾಡಲು ಹೊರಟಿರುವ ವಿಷಯ ನಿಮ್ಮ ಗುಪ್ತಚರ ವಿಭಾಗಕ್ಕೆ ತಿಳಿದಿಲ್ಲವೇ, ಅವರು ಏನು ಕೆಲಸ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಮಧ್ಯೆ ಪ್ರವೇಶಿಸಿದ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಜನಪ್ರತಿನಿಧಿ ಗಳಷ್ಟೇ ಅಲ್ಲ, ಜಡ್ಜ್‌ಗಳೂ ಹನಿಟ್ರ್ಯಾಪ್‌ಗೆ ಒಳಗಾಗಿದ್ದಾರಂತೆ. ಇದೊಂದು ಗಂಭೀರ ವಿಚಾರ, ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿ ಇಲ್ಲವೇ ಸಿಬಿಐನಿಂದ ತನಿಖೆ ಆಗಬೇಕು, ಮಂತ್ರಿಗಳಿಗೆ ಅಭದ್ರತೆ ಎದುರಾಗಿದೆ, ಹನಿಟ್ರ್ಯಾಪ್ ಅನ್ನು ದೊಡ್ಡ ದಂಧೆ ಮಾಡಿಕೊಂಡಿದ್ದಾರೆ ಎಂದು ಪತ್ರಿಕಾ ವರದಿ ಉಲ್ಲೇಖಿಸಿದರು.

ಮೈಸೂರು ನಗರ ಸೇರಿದಂತೆ ಜಿಲ್ಲಾದ್ಯಂತ ಭಾರೀ ಬಿಗಿ ಪೊಲೀಸ್ ಬಂದೋಬಸ್ತ್

ಮೈಸೂರು, ಮಾ.21 (ಆರ್‌ಕೆ)– ನಾಳೆ (ಮಾ.22) ಕನ್ನಡಪರ ಸಂಘಟನೆಗಳು ಕರೆ ನೀಡಿರುವ ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ಭಾರೀ ಪೊಲೀಸ್ ಬಂದೋ ಬಸ್ತ್ ಮಾಡಲಾಗಿದೆ.

ಮೈಸೂರು ನಗರದಲ್ಲಿ ಸಿವಿಲ್, ಸಂಚಾರ, ಮಹಿಳಾ ಪೊಲೀಸ್ ಸಿಬ್ಬಂದಿಯಲ್ಲದೆ, ಸಿಎಆರ್ 10, ಕೆಎಸ್‌ಆರ್‌ಪಿ 6 ತುಕಡಿಗಳು, ಗೃಹ ರಕ್ಷಕ ದಳ, ಮೌಂಟೆಡ್ ಪೊಲೀಸ್ ಹಾಗೂ ಚಾಮುಂಡಿ ಪಡೆಯನ್ನು ನಿಯೋಜಿಸಲಾಗಿದ್ದು, ವ್ಯಾಪಕ ಕಟ್ಟೆಚ್ಚರ ವಹಿಸ ಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದ್ದಾರೆ. ಸುಪ್ರೀಂಕೋರ್ಟ್ ಆದೇಶದ ಪ್ರಕಾರ ಬಲವಂತವಾಗಿ ಅಂಗಡಿ–ಮುಂಗಟ್ಟು ಮುಚ್ಚಿಸುವುದಾಗಲೀ, ಸಾರ್ವಜನಿಕ ಸೇವೆಗೆ ಅಡ್ಡಿಪಡಿ ಸುವುದಾಗಲೀ ಅಥವಾ ಬಲವಂತವಾಗಿ ಪ್ರತಿಭಟನೆಗೆ ಪ್ರೇರೇಪಿಸುವುದು ಕಾನೂನುಬಾಹಿರ. ಒಂದು ವೇಳೆ ನಿಯಮ ಮೀರಿ ವರ್ತಿಸಿದರೆ, ಅಂತಹವರ ವಿರುದ್ಧ ಕಾನೂನು ರೀತ್ಯಾ ಕ್ರಮ ಕೈಗೊಳ್ಳಬೇಕಾಗುತ್ತದೆ. ಅದೇ ರೀತಿ ಬಂದ್‌ಗೆ ಕರೆ ನೀಡಿ ಪತ್ರಿಕಾಗೋಷ್ಠಿ ಮಾಡಿರುವವರು, ಪತ್ರಿಕಾ ಹೇಳಿಕೆ ನೀಡಿರುವವರು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿ ಹರಡುವವರಿಗೆ ನೋಟೀಸ್ ನೀಡಲು ಮುಂದಾಗಿದ್ದೇವೆ ಎಂದು ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಮುಂಜಾಗ್ರತಾ ಕ್ರಮವಾಗಿ ಕೆ.ಆರ್. ಸರ್ಕಲ್, ಡಿ.ದೇವರಾಜ ಅರಸು ರಸ್ತೆ, ಮಕ್ಕಾಜಿ ಚೌಕ, ಸಂತೇಪೇಟೆ, ಶಿವರಾಂ ಪೇಟೆ, ದೇವರಾಜ ಮಾರುಕಟ್ಟೆ, ಸಯ್ಯಾಜಿ ರಾವ್ ರಸ್ತೆ, ಅಶೋಕ ರಸ್ತೆ ಮಂಡಿ ಮಾರುಕಟ್ಟೆ ವಾಣಿವಿಲಾಸ ಮಾರುಕಟ್ಟೆ, ಕೆಎಸ್‌ಆರ್‌ಟಿಸಿ ನಗರ ಮತ್ತು ಗ್ರಾಮಾಂತರ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ, ಹಾಗೂ ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ ವರ್ತಕರಿಗೆ ತೊಂದರೆ ಯಾಗದಂತೆ ಕ್ರಮವಹಿಸಲಾಗಿದೆ. ಬಸ್, ಲಾರಿ, ಆಟೋ, ಕಾರು, ಸರಕು ಸಾಗಣೆ ವಾಹನಗಳನ್ನು ತಡೆಯುವುದು, ಕಲ್ಲು ತೂರಾಟ ನಡೆಸುವುದು. ರಸ್ತೆತಡೆ ನಡೆಸುವುದು, ಬಲವಂತವಾಗಿ ಅಂಗಡಿ–ಮುಂಗಟ್ಟುಗಳನ್ನು ಬಂದ್ ಮಾಡಿಸು ವವರ ವಿರುದ್ಧ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು ಎಂದು ಸೀಮಾ ಲಾಟ್ಕರ್ ಎಚ್ಚರಿಕೆ ನೀಡಿದ್ದಾರೆ.

ಅದೇ ರೀತಿ ತಾಲೂಕು ಕೇಂದ್ರ ಹಾಗೂ ಹೋಬಳಿಗಳು ಸೇರಿದಂತೆ ಜಿಲ್ಲೆಯಾದ್ಯಂತ ಕರ್ನಾಟಕ ಬಂದ್ ಹಿನ್ನೆಲೆಯಲ್ಲಿ ಹೆಚ್ಚು ವರಿ ಸಿಬ್ಬಂದಿಗಳನ್ನು ಬಂದೋಬಸ್ತ್ ಕರ್ತವ್ಯಕ್ಕೆ ನಿಯೋಜಿಸಿ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ ಎಂದು ಎಸ್ಪಿ ಎನ್.ವಿಷ್ಣುವರ್ಧನ ತಿಳಿಸಿದ್ದಾರೆ.

ಈ ಬಾರಿಯ ಬಜೆಟ್‌ನಲ್ಲಿ ಕಲ್ಯಾಣ ಕಾರ್ಯಕ್ರಮಕ್ಕೆ ಒತ್ತು

- ಸುಸ್ಥಿರ ಅಭಿವೃದ್ಧಿಯತ್ತ ಕರ್ನಾಟಕ ಮುನ್ನಡೆಸುವುದು ನಮ್ಮ ಗುರಿ
- ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸುವ ವೇಳೆ ಸಿಎಂ ಸಿದ್ದರಾಮಯ್ಯ ಭರವಸೆ

ಬೆಂಗಳೂರು, ಮಾ.21(ಕೆಎಂಶಿ)–ಗ್ಯಾರಂಟಿ ಹೊರತಾ ಗಿಯೂ ಕಲ್ಯಾಣ ಕಾರ್ಯಕ್ರಮಗಳಿಗೆ ಮುಂಗಡಪತ್ರದಲ್ಲಿ ಒತ್ತು ಕೊಟ್ಟಿರುವುದಾಗಿ ಸಿಎಂ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ತಿಳಿಸಿದ್ದಾರೆ.



ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿ, ಒಟ್ಟಾರೆ ನಮ್ಮ ಸರ್ಕಾರ ನಾಡಿನ ಸಮಗ್ರ ಅಭಿವೃದ್ಧಿಗಾಗಿ ದುಡಿಯುತ್ತಿದೆ. ಸುಸ್ಥಿರ ಅಭಿವೃದ್ಧಿಯತ್ತ ಕರ್ನಾಟಕವನ್ನು ಮುನ್ನಡೆಸುವುದು ನಮ್ಮ ಗುರಿ. ಮುಂದಿನ ದಿನಗಳಲ್ಲಿ ರಾಜಸ್ವ ಕೊರತೆ ನೀಗಿಸಿ, ಹೆಚ್ಚುವರಿ ಆದಾಯ ಬಜೆಟ್ ಮಂಡಿಸುವುದಾಗಿ ತಿಳಿಸಿದರು.

ಇದು ಸರ್ವರ ಬಜೆಟ್, ಹಾಗೆಯೇ ಸರ್ವೋದಯದ ಬಜೆಟ್. ನಮ್ಮ ಬಜೆಟ್‌ನಲ್ಲಿ ಈ ಬಾರಿ ಅನೇಕ ಹೊಸ ಕಾರ್ಯಕ್ರಮಗಳನ್ನು ತಂದಿದ್ದೇವೆ, ಪಶುಪಾಲಕರ ಕುರಿ, ಮೇಕೆ, ಎತ್ತು, ಹಸು ಆಕಸ್ಮಿಕವಾಗಿ ಮೃತಪಟ್ಟರೆ ಪರಿಹಾರಧನ ಹೆಚ್ಚು ಮಾಡುವುದರಿಂದ, ಅನೇಕ ಕಲ್ಯಾಣ ಕಾರ್ಯಕ್ರಮಗಳನ್ನು ತಂದಿದ್ದೇವೆ.

ಈ ಬಾರಿ ಸಮಗ್ರ ಕೃಷಿ ಕ್ಷೇತ್ರಕ್ಕೆ 51,339 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ, ಇಷ್ಟೆಲ್ಲದರ ನಡುವೆಯೂ ಪ್ರತಿಪಕ್ಷಗಳಿಗೆ ಬಜೆಟ್ ಬಗ್ಗೆ ಆಕ್ಷೇಪಗಳಿದ್ದರೆ, ಅದು ರಾಜಕೀಯ ಪ್ರೇರಿತವಾದ ಆಕ್ಷೇಪಗಳೇ ಹೊರತು, ಪ್ರಾಮಾಣಿಕ ಅಭಿಪ್ರಾಯಗಳಲ್ಲ.

ರಾಜಕಾರಣವನ್ನು ಪ್ರಾಮಾಣಿಕ ಕಾಳಜಿಯಿಂದ ಮಾಡಬೇಕು, ಅದು ಅರ್ಥಬದ್ಧವಾಗಿರಬೇಕು. ನಮ್ಮ ರಾಜಕಾರಣ ಪ್ರಾಮಾಣಿಕವಾಗಿರುವುದು ಮುಖ್ಯ ಇಲ್ಲದಿದ್ದರೆ ಓಟಿನ ಗಿಮಿಕ್ಕಿಗಾಗಿ ರಾಜಕಾರಣ ಮಾಡಿದರೆ, ಮುಸ್ಲಿಂ ಮೀಸಲಾತಿ ವಿಚಾರದಲ್ಲಿ ರಾಜ್ಯದಲ್ಲಿ ಜನರ ಮುಂದೆ ಒಂದು ತೀರ್ಮಾನ ತೆಗೆದುಕೊಂಡು, ಸುಪ್ರೀಂಕೋರ್ಟ್‌ನಲ್ಲಿ ಒಂದು ನಿಲುವನ್ನು ತೆಗೆದುಕೊಂಡಂತೆ ಎಲ್ಲ ವಿಚಾರಗಳಿಗೂ ಅನ್ವಯವಾಗುತ್ತದೆ ಎಂದು ಪ್ರತಿಪಕ್ಷಗಳ ವಿರುದ್ಧ ಕಿಡಿಕಾರಿದರು. ದೇಶದಲ್ಲಿ ಕರ್ನಾಟಕವನ್ನು ಮಾದರಿ ರಾಜ್ಯವನ್ನಾಗಿಸಲು ಈ ಬಾರಿಯ ಬಜೆಟ್‌ನಲ್ಲಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ, ಆ ಕ್ರಮಗಳಲ್ಲಿ ಗುತ್ತಿಗೆ ಕಾಮಗಾರಿಗಳಲ್ಲಿ ಮೀಸಲಾತಿಯೂ ಸೇರಿದೆ, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗದ ಪ್ರವರ್ಗ–1, 2ಎ ಮತ್ತು 2ಬಿ ಸೇರಿಸಿ ಈ ಕ್ರಮ ತೆಗೆದುಕೊಂಡಿದ್ದೇವೆ, ಈ ವರ್ಗಗಳಲ್ಲಿ ಗುತ್ತಿಗೆದಾರರೇ ಇಲ್ಲವೆ ಎನ್ನುವಷ್ಟು ಕಡಿಮೆ ಇದ್ದಾರೆ.

ರಾಜ್ಯದ ಹಣಕಾಸಿನ ಪರಿಸ್ಥಿತಿ ಕ್ಲಿಷ್ಟಕರವಾಗಿದೆ ಎಂಬುದಾಗಿ ವ್ಯಾಖ್ಯಾನಿಸಲಾಗಿದೆ. ಆದರೆ, ವಾಸ್ತವ ಸಂಗತಿಯೇ ಬೇರೆ, ಕೇಂದ್ರ ಸರ್ಕಾರ ತೆರಿಗೆ ಹಾಗೂ ಸಂಪನ್ಮೂಲ ಹಂಚಿಕೆಯಲ್ಲಿ ಮಾಡಿದ ದ್ರೋಹ ಮೊದಲ ಕಾರಣವಾದರೆ, ಹಿಂದೆ ಆಡಳಿತ ನಡೆಸಿದ ಯಡಿಯೂರಪ್ಪ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರಗಳ ಆರ್ಥಿಕ ಅಶಿಸ್ತು ಹಾಗೂ ಅರಾಜಕ ಆಡಳಿತದಿಂದಾಗಿ ಸಮಸ್ಯೆಗಳು ಉದ್ಭವಿಸಿವೆ ಎಂದರು.

ಕರ್ನಾಟಕ ಬಂದ್ ಬೆಂಬಲಿಸಲು ಕಾವೇರಿ ಕ್ರಿಯಾ ಸಮಿತಿ ಮನವಿ


ಜಯಪ್ರಕಾಶ್

ಮೈಸೂರು, ಮಾ.21(ಜಿಎ)–ಮರಾಠಿ ಪುಂಡರು ಕನ್ನಡಿಗರ ಮೇಲೆ ನಡೆಸುತ್ತಿರುವ ಹಲ್ಲೆಯನ್ನು ಖಂಡಿಸಿ ಹಾಗೂ ಮೇಕೆದಾಟು, ಕಳಸಾ ಬಂಡೂರಿ, ಮಹದಾಯಿ ಯೋಜನೆ ಕೂಡಲೇ ಜಾರಿಗೆ ಆಗ್ರಹಿಸಿ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಕರೆ ನೀಡಿರುವ ನಾಳೆ (ಮಾ.22)ಯ ಕರ್ನಾಟಕ ಬಂದ್‌ಗೆ ನಗರದ ವಿವಿಧ ಕನ್ನಡಪರ ಹಾಗೂ ಇನ್ನಿತರ ಸಂಘಟನೆಗಳು ಬೆಂಬಲ ನೀಡುವಂತೆ ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್(ಜೆಪಿ) ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಬಂದ್‌ಗೆ ನಗರದ ಹೋಟೆಲ್ ಮಾಲೀಕರು, ರೈತರು, ವಿದ್ಯಾರ್ಥಿಗಳು, ಕಾರ್ಮಿಕರು ಹಾಗೂ ಆಟೋ ಚಾಲಕರು ಮೊದಲಾದವರು ಬೆಂಬಲ ನೀಡಿ, ಅಲ್ಲದೆ, ಸಾರಿಗೆ ಸಂಸ್ಥೆ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ ಮರಾಠಿ ಪುಂಡರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಂಡಿದ್ದಿದ್ದಲ್ಲಿ ಈ ಬಂದ್ ಆಚರಿಸ ಬೇಕಾಗಿರಲಿಲ್ಲ. ಆದರೆ ಮೌನ ತಾಳಿದ ಕಾರಣ ಅನಿವಾರ್ಯವಾಗಿದೆ ಎಂದರು.

ಗೋವಾಕ್ಕೆ ರಾಜ್ಯದಿಂದ ನಿತ್ಯ ಸಾವಿರಾರು ಮಂದಿ ಪ್ರವಾಸ ಹೊರಡುತ್ತಾರೆ. ಆದರೆ ಅಲ್ಲಿ ಕನ್ನಡಿಗರನ್ನು ನಿಕೃಷ್ಟವಾಗಿ ಕಾಣಲಾಗುತ್ತಿದೆ. ನಮ್ಮ ನೆಲ, ಜಲ, ಭಾಷೆ, ಕನ್ನಡಿಗರಿಗೆ ರಕ್ಷಣೆ ವಿಷಯ ಬಂದಾಗ ಕನ್ನಡಿಗರು ಎದ್ದು ನಿಲ್ಲಬೇಕು. ಸರ್ಕಾರ ಬೆಂಬಲಕ್ಕೆ ನಿಲ್ಲಬೇಕು ಎಂದು ಆಗ್ರಹಿಸಿದರು.

ಕನ್ನಡಪರ ಹಿರಿಯ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ ಮಾತನಾಡಿ, ನಗರದಲ್ಲಿ ಸಂಪೂರ್ಣ ಬಂದ್‌ಗೆ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ನಗರ ಹಾಗೂ ಗ್ರಾಮಾಂತರ ಸಾರಿಗೆ ಬಸ್ ನಿಲ್ದಾಣ, ಕೆ.ಆರ್.ವೃತ್ತ ಮೊದಲಾದ ಕಡೆ ಪ್ರತಿಭಟಿಸಿ ಅಂಗಡಿ ಮುಂಗಟ್ಟು ಬಂದ್‌ಗೆ ಮನವಿ ಮಾಡಲಾಗುವುದು. ಕನ್ನಡಪರ ಹೋರಾಟಗಾರರು ಹಾಗೂ ಕಾರ್ಯಕರ್ತರು ಇವತ್ತು ನಗರದಿಡೀ ಸಂಚರಿಸಲಿದ್ದಾರೆ. ಬೆಳಗ್ಗೆ 6 ಗಂಟೆಯಿಂದ ಸಂಜೆ 6ರವರೆಗೆ ಬಂದ್ ನಡೆಯಲಿದೆ. ಆಸ್ಪತ್ರೆ ಹಾಗೂ ತುರ್ತು ಸೇವೆಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಲಾಗುತ್ತದೆ ಎಂದು ತಿಳಿಸಿದರು. ಕನ್ನಡ ಪರ ಹೋರಾಟಗಾರರಾದ ಬಾಲಕೃಷ್ಣ, ಎಂ.ಜೆ.ಸುರೇಶ್‌ಗೌಡ, ವರಕೋಡು ಕೃಷ್ಣೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಕೊಲೆ ಯತ್ನ: ಕಾಂಗ್ರೆಸ್ ಮುಖಂಡ ಎಂ.ಕೆ.ಅಶೋಕ್‌ಗೆ ಶಿಕ್ಷೆ

ಮೈಸೂರು, ಮಾ.21(ಆರ್‌ಕೆ)– ಕೊಟ್ಟ ಸಾಲ ವಾಪಸ್ ಕೇಳಿದ ವ್ಯಕ್ತಿ ಮೇಲೆ ಕಾರು ಹರಿಸಿ ಕೊಲೆ ಮಾಡಲೆತ್ನಿಸಿದ್ದ ಮೈಸೂರಿನ ಕಾಂಗ್ರೆಸ್ ಮುಖಂಡ ಎಂ.ಕೆ.ಅಶೋಕ್‌ಗೆ ನ್ಯಾಯಾಲಯ ಶಿಕ್ಷೆ ವಿಧಿಸಿದೆ.

6,50,000 ರೂ. ಸಾಲ ಕೊಟ್ಟಿದ್ದ ಎಸ್.ಸಂದೀಪ್ ಅವರು ಹಣವನ್ನು ವಾಪಸ್ ಕೇಳಿದ್ದರಿಂದ 2016ರ ಮೇ 30ರಂದು ನೆಹರು ಸರ್ಕಲ್‌ಗೆ ಕರೆಸಿಕೊಂಡ ಅಶೋಕ್, ನೀನು ಹಣ ಕೊಟ್ಟಿರುವುದಕ್ಕೆ ಯಾವ ದಾಖಲೆ ಇದೆ ಎಂದು ಉಡಾಫೆಯಿಂದ ಮಾತನಾಡಿ, ಆತನಿಗೆ ಹೊಡೆದು ನಂತರ ತನ್ನ ಮಾರುತಿ ಆಲ್ಟೋ ಕಾರು ಹರಿಸಿದ ರಭಸಕ್ಕೆ ಬ್ಯಾನೆಟ್ ಮೇಲೆ ಜಿಗಿದು, ವೈಫರ್ ಹಿಡಿದು ನೇತಾಡುತ್ತಿದ್ದರೂ, 200 ಮೀಟರ್‌ವರೆಗೆ ಕಾರು ಚಾಲನೆ ಮಾಡಿ ಗ್ರಾಮಾಂತರ ಬಸ್ ನಿಲ್ದಾಣದ ಬಳಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಕೊಲೆ ಮಾಡಲು ಯತ್ನಿಸಿದ್ದ.

ಪ್ರಕರಣ ದಾಖಲಿಸಿಕೊಂಡಿದ್ದ ಲಷ್ಕರ್ ಠಾಣೆ ಅಂದಿನ ಇನ್‌ಸ್ಪೆಕ್ಟರ್ ಹೆಚ್.ಎಂ. ಕಾಂತರಾಜು, ತನಿಖೆ ನಡೆಸಿ ಆರೋಪಿ ಅಶೋಕ್ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಗುರುರಾಜ್ ಸೋಮಕ್ಕಳವರ ಅವರು, ವಾದ–ಪ್ರತಿವಾದ ಆಲಿಸಿದ ಬಳಿಕ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿ ಎಂ.ಕೆ. ಅಶೋಕ್‌ಗೆ ಐಪಿಸಿ ಸೆಕ್ಷನ್ 504ರಡಿ ಒಂದು ತಿಂಗಳ ಸಾದಾ ಸಜೆ, 500 ರೂ. ದಂಡ, ಕಲಂ 323ರಡಿ ಎರಡು ತಿಂಗಳ ಸಜೆ, 1000 ರೂ. ದಂಡ ಹಾಗೂ ಕಲಂ 307ರಡಿ ಮೂರು ವರ್ಷ ಕಠಿಣ ಶಿಕ್ಷೆ, 5000 ರೂ. ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಬಿ.ಈ. ಯೋಗೇಶ್ವರ ವಾದ ಮಂಡಿಸಿದ್ದರು.

ಇಂದಿನಿಂದ ಮೈಸೂರಲ್ಲಿ ಅಪ್ಪು ವೈಭವ



ಮೈಸೂರು, ಮಾ.21 (ಜಿಎ) – ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ನೆನಪಿನಾರ್ಥ ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ವತಿಯಿಂದ ಮಾ.22 ಮತ್ತು 23ರಂದು ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಅಪ್ಪು ವೈಭವ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥಾಪಕ ಅಧ್ಯಕ್ಷ ಜಯರಾಮರಾಜು ಈ ವಿಷಯ ತಿಳಿಸಿ, ಮಾ.22ರ ಸಂಜೆ 5 ಗಂಟೆಯಿಂದ ರಾತ್ರಿ 9.30ರವರೆಗೆ ದೊಡ್ಮನೆ ಗೀತೆಗಳನ್ನು ಗಾಯಕರು ಹಾಡಲಿದ್ದಾರೆ. ಮಾ.23 ರಂದು ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 1.30ರವರೆಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಲಿದೆ. ಅಂದು ಬೆಳಗ್ಗೆ 10ಕ್ಕೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಜಗನ್ಮೋಹನ ಅರಮನೆವರೆಗೆ ಅಪ್ಪು ಉತ್ಸವ ಹೆಸರಿನಲ್ಲಿ ಕಟೌಟ್‌ಗಳ ಸುಮಾರು 20 ಆಟೋಗಳು ಆಗಮಿಸಲಿವೆ ಎಂದರು. ಸುದ್ದಿಗೋಷ್ಠಿಯಲ್ಲಿ ದೊಡ್ಮನೆ ಅಭಿಮಾನಿಗಳಾದ ಸೋಮಶೇಖರ್, ಸಿ.ಶಿವರಾಜ್, ಕೆ.ರವಿ, ವೆಂಕಟೇಶ್ ಹಾಗೂ ಆಟೋ ಶಿವು ಉಪಸ್ಥಿತರಿದ್ದರು.

ಯೂಟ್ಯೂಬ್ ನೋಡಿ ಶಸ್ತ್ರಚಿಕಿತ್ಸೆ ಮಾಡಿಕೊಂಡ!

ಲಖನೌ: ಯೂಟ್ಯೂಬ್ ನೋಡಿ ವ್ಯಕ್ತಿಯೊಬ್ಬ ತನಗೆ ತಾನೇ ಶಸ್ತ್ರಚಿಕಿತ್ಸೆ ಮಾಡಿಕೊಂಡಿರುವ ಘಟನೆ ಉತ್ತರಪ್ರದೇಶದಲ್ಲಿ ನಡೆದಿದೆ. ತೀವ್ರವಾದ ಹೊಟ್ಟೆ ನೋವು (ಅಪೆಂಡಿಕ್ಸ್) ನಿಂದ ಪಾರಾಗಲು ಹೇಗೆ ಶಸ್ತ್ರಚಿಕಿತ್ಸೆ ಮಾಡಬಹುದು ಎಂಬುದನ್ನು ಯೂಟ್ಯೂಬ್ ನೋಡಿ 32 ವರ್ಷದ ವೃಂದಾವನದ ವ್ಯಕ್ತಿಯೊಬ್ಬರು ತನಷ್ಟಕ್ಕೆ ತಾನೇ ಹೊಟ್ಟೆಯನ್ನು ಕತ್ತರಿಸಿಕೊಂಡು ಶಸ್ತ್ರಚಿಕಿತ್ಸೆ ಮಾಡಿಕೊಂಡಿದ್ದಾರೆ. ಹಲವು ವರ್ಷಗಳಿಂದ ಅಪೆಂಡಿಸೈಟಿಸ್‌ನಿಂದ ಬಳಲುತ್ತಿದ್ದ ಸುನ್ರಖ್ ಗ್ರಾಮದ ರಾಜಾ ಬಾಬು ಅವರಿಗೆ ಬುಧವಾರ ತೀವ್ರವಾದ ಹೊಟ್ಟೆನೋವು ಕಾಣಿಸಿಕೊಂಡಿದೆ. ಬಳಿಕ ಅವರ ಸೋದರಳಿಯೊಂದಿಗೆ ಆಸ್ಪತ್ರೆಗೆ ಧಾವಿಸಿದ್ದರು. ಆತ ತನ್ನ ಹೊಟ್ಟೆಯನ್ನು ಕತ್ತರಿಸಿಕೊಳ್ಳಲು ಮಾರುಕಟ್ಟೆಯಿಂದ ಖರೀದಿಸಿದ ಸರ್ಜಿಕಲ್ ಬ್ಲೇಡ್, ಸೂಜಿ ಮತ್ತು ಹೊಲಿಗೆ ದಾರ ಬಳಸಿದ್ದು, ತದನಂತರ ಹೊಟ್ಟೆ ಸುತ್ತ 11 ಹೊಲಿಗೆ ಹಾಕಿದ್ದಾರೆ ಎಂದು ವೃಂದಾವನ ಜಿಲ್ಲಾ ಆಸ್ಪತ್ರೆ ಹಿರಿಯ ಶಸ್ತ್ರಚಿಕಿತ್ಸಕ ಡಾ.ಶಶಿ ರಂಜನ್ ತಿಳಿಸಿದ್ದಾರೆ. ಸದ್ಯ ರಾಜು ಬಾಬು ಆಗ್ರಾದ ಎಸ್‌ಎನ್ ವೈದ್ಯಕೀಯ ಕಾಲೇಜಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರು 14ನೇ ವಯಸ್ಸಿನಲ್ಲಿಯೇ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು ಎನ್ನಲಾಗಿದೆ.



ಕಲೆ, ಸಂಸ್ಕೃತಿ ಪಸರಿಸಲು ಯುವ ವಿನಿಮಯ ಕಾರ್ಯಕ್ರಮ

ನೆಹರು ಯುವ ಕೇಂದ್ರದ ಜಿಲ್ಲಾ ಅಧಿಕಾರಿ ಅಭಿಷೇಕ್ ಚವರೆ ಅಭಿಮತ


ಮೈಸೂರಿನ ಸರಸ್ವತಿಪುರಂನಲ್ಲಿರುವ ಯೂತ್ ಹಾಸ್ಟೆಲ್ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ 5 ದಿನಗಳ ಅಂತರ ಜಿಲ್ಲಾ ಯುವ ವಿನಿಮಯ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಮೈಸೂರು,ಮಾ.21(ಎಂಟಿವೈ)– ಆಯಾ ಪ್ರದೇಶಗಳ ಆಚಾರ-ವಿಚಾರ, ಕಲೆ ಮತ್ತು ಸಂಸ್ಕೃತಿಯನ್ನು ಬೇರೆ ಬೇರೆ ಪ್ರದೇಶಕ್ಕೆ ಪರಿಚಯಿಸಲು ಯುವ ವಿನಿಮಯ ಕಾರ್ಯಕ್ರಮ ಮಹತ್ವದ ಪಾತ್ರವಹಿಸುತ್ತವೆ ಎಂದು ನೆಹರು ಯುವ ಕೇಂದ್ರದ ಜಿಲ್ಲಾ ಅಧಿಕಾರಿ ಅಭಿಷೇಕ್ ಚವರೆ ಅಭಿಪ್ರಾಯಪಟ್ಟರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಯೂತ್ ಹಾಸ್ಟೆಲ್ ಸಭಾಂಗಣದಲ್ಲಿ ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಮೈ ಭಾರತ್–ನೆಹರು ಯುವ ಕೇಂದ್ರ ಹಾಗೂ ಸರ್ಕಾರಿ ಯೂತ್ ಹಾಸ್ಟೆಲ್ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ 5 ದಿನಗಳ ಅಂತರ ಜಿಲ್ಲಾ ಯುವ ವಿನಿಮಯ ಕಾರ್ಯಕ್ರಮದ ಸಮಾರೋಪದಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ ನಡೆದ ಯುವ ವಿನಿಮಯ ಕಾರ್ಯಕ್ರಮದಲ್ಲಿ ಯಶಸ್ವಿಯಾಗಿ ನೆರವೇರಿದ್ದು, ಬೇರೆ ಬೇರೆ ಜಿಲ್ಲೆಗಳಿಂದ ಆಗಮಿಸಿರುವ ಯುವ ಸಮುದಾಯ ತಮ್ಮ ಕಲಾ ಪ್ರಕಾರ ಹಾಗೂ ಸಂಸ್ಕೃತಿಯನ್ನು ಅನಾವರಣಗೊಳಿಸಿ ಇತರರಿಗೂ ಪರಿಚಯಿಸಿದ್ದಾರೆ. ಅಲ್ಲದೆ, ಇಲ್ಲಿನ ಕಲೆ, ಸಂಸ್ಕೃತಿಯ ಬಗ್ಗೆಯೂ ತಿಳಿದುಕೊಂಡಿದ್ದಾರೆ. ಕಾರ್ಯಕ್ರಮದಲ್ಲಿ ಪರಸ್ಪರ ಸೌಹಾರ್ದದಿಂದ ಜೀವನ ನಡೆಸುವ ಸಂದೇಶವನ್ನು ಯುವ ವಿನಿಮಯ ಕಾರ್ಯಕ್ರಮದಲ್ಲಿ ಹೇಳಿಕೊಡಲಾಗಿದೆ ಎಂದರು.

ಯುವ ಜನರಲ್ಲಿ ಸೇವಾ ಮನೋಭಾವ ಬೆಳೆಸಲು ಯುವ ಕೇಂದ್ರವು ಯುವ ವಿನಿಮಯದಂತಹ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಾ ಬಂದಿದೆ. ರಾಜ್ಯವಲ್ಲದೇ ವಿವಿಧ ದೇಶಗಳಿಂದಲೂ ಯುವಕ–ಯುವತಿಯರು ಭೇಟಿ ನೀಡಿ, ಅರಿವನ್ನು ಪಡೆಯುತ್ತಿದ್ದಾರೆ. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಯುವ ಸಮುದಾಯ ಮೈಸೂರಿನ ಅರಮನೆ, ಸೇಂಟ್ ಫಿಲೋಮಿನಾ ಚರ್ಚ್, ಕೆಆರ್‌ಎಸ್, ಚಾಮರಾಜೇಂದ್ರ ಮೃಗಾಲಯ ಸೇರಿದಂತೆ ವಿವಿಧ ಸ್ಥಳಗಳಿಗೆ ಮಾರ್ಗದರ್ಶಕರೊಂದಿಗೆ ಹೋಗಿ ವೀಕ್ಷಿಸಿದೆ. ಇದರಿಂದ ಯುವಕರಲ್ಲಿ ನಾಡಿನ ಇತಿಹಾಸ, ಸಂಸ್ಕೃತಿ ಬಗ್ಗೆ ಹೆಮ್ಮೆ ಮೂಡಿಸುತ್ತದೆ. ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯವು ಹೆಚ್ಚಿದ್ದು, ಹಾಡಿಗಳಿಗೂ ಭೇಟಿ ನೀಡಿ ಅಲ್ಲಿನ ಜನರ ಜೀವನ ಕ್ರಮ, ಸ್ಥಳೀಯ ಸಮಸ್ಯೆಗಳನ್ನು ಗಮನಿಸಿದ್ದಾರೆ ಇದು ವಿದ್ಯಾರ್ಥಿಗಳಿಗೆ ಸಹಾಯವಾಗುತ್ತದೆ ಎಂದರು.

ಕರಾಟೆ ತರಬೇತುದಾರ ಬಿ.ಎಸ್.ಗುರುಪ್ರಸಾದ್ ಮಾತನಾಡಿ, ಯುವಕರು ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಬೇಕು. ಅದಕ್ಕಾಗಿ ನಿತ್ಯ ವ್ಯಾಯಾಮದ ಜೊತೆಗೆ ಧ್ಯಾನ, ಯೋಗ, ಕರಾಟೆ ಸೇರಿದಂತೆ ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಆಹಾರ, ಜೀವನ ಕ್ರಮ ಹೇಗಿದೆ ಎಂಬುದನ್ನು ನೀವೇ ಅರಿತುಕೊಳ್ಳಬೇಕು. ದಿನಕ್ಕೆ ಅರ್ಧ ಗಂಟೆಯಾದರೂ ಫಿಟ್‌ನೆಸ್‌ಗೆ ಮೀಸಲಿಡಬೇಕು. ಜಗಳ, ದ್ವೇಷ, ಕಲಹಗಳಿಂದ ದೂರವಿರಬೇಕು ಎಂದರು. ಕಾರ್ಯಕ್ರಮದಲ್ಲಿ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ ಯುವ ಜನರಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಸರ್ಕಾರಿ ಯೂತ್ ಹಾಸ್ಟೆಲ್ ವ್ಯವಸ್ಥಾಪಕ ಪ್ರೊ.ಪ್ರಸಾದ್ ಪಾಲ್ಗೊಂಡಿದ್ದರು.

ಇಬ್ಬರು ಕೊಲೆ ಆರೋಪಿಗಳಿಗೆ 7 ವರ್ಷ ಕಠಿಣ ಶಿಕ್ಷೆ

ಮೈಸೂರು, ಮಾ. 21 (ಆರ್‌ಕೆ)– ಜಮೀನಿನ ವಿವಾದ ಸಂಬಂಧ ವ್ಯಕ್ತಿಯನ್ನು ಹತ್ಯೆಗೈದಿದ್ದ ಇಬ್ಬರು ಆರೋಪಿಗಳಿಗೆ ಮೈಸೂರು ನ್ಯಾಯಾಲಯ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ತಿ.ನರಸೀಪುರ ತಾಲೂಕು ಚಂದಹಳ್ಳಿ ಗ್ರಾಮದ ಶ್ರೀನಿವಾಸಮೂರ್ತಿ, ರೇವಮ್ಮ ಶಿಕ್ಷೆಗೊಳಗಾದವರು. ಗ್ರಾಮದ ಕುಂಟೇಗೌಡರು ಖರೀದಿಸಿದ್ದ ಜಮೀನಿನಲ್ಲಿ ನಿವೇಶನ ಮಾಡಿಕೊಂಡಿದ್ದರು. ಆ ಜಮೀನು ತಮ್ಮದೆಂದು ಹೇಳಿ ಜಗಳ ಮಾಡುತ್ತಿದ್ದ ಆರೋಪಿಗಳು, 2013ರ ನವೆಂಬರ್ 22 ರಂದು ಕುಂಟೇಗೌಡರನ್ನು ಎಳೆದುಕೊಂಡು ಗಾಯತ್ರಿ ಎಂಬುವರ ಜಮೀನಿನ ಬಳಿ ಉಸಿರು ಕಟ್ಟಿಸಿ ಕೊಲೆ ಮಾಡಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಅಂದಿನ ತಿ.ನರಸೀಪುರ ಸರ್ಕಲ್ ಇನ್‌ಸ್ಪೆಕ್ಟರ್ ಎಂ.ಮಹೇಶಕುಮಾರ್, ಆರೋಪಿಗಳಿಬ್ಬರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಗುರುರಾಜ್ ಸೋಮಕ್ಕಳವರ ಅವರು, ಸಾಕ್ಷ್ಯಾಧಾರಗಳಿಂದ ಆರೋಪ ಸಾಬೀತಾದ ಕಾರಣ ಆರೋಪಿಗಳಿಗೆ 7 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ಬಿ.ಈ.ಯೋಗೇಶ್ವರ ವಾದ ಮಂಡಿಸಿದ್ದರು.

ಶ್ರೀ ನಾಟುಮಿಂದ ಮಾಗಲಮ್ಮ ಜೋಡಿ ಕರಗ ಜಾತ್ರಾ ಮಹೋತ್ಸವ

ಕಬ್ಬಡಿ ಪಂದ್ಯಾವಳಿ ವಿಜೇತರಿಗೆ ಬಹುಮಾನ ವಿತರಣೆ


ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕಬ್ಬಡಿ ಪಂದ್ಯಾವಳಿ ವಿಜೇತರಿಗೆ ಬಹುಮಾನ ವಿತರಣೆ ಮಾಡಿದರು.

ಮೈಸೂರು,ಮಾ.21(ಎಂಕೆ)– ಮೈಸೂರಿನ ಅಶೋಕಪುರಂನ ಅಂಬೇಡ್ಕರ್ ಕಾಲೋನಿಯಲ್ಲಿರುವ ಶ್ರೀ ನಾಟುಮಿಂದ ಮಾಗಲಮ್ಮ ಜೋಡಿ ಕರಗ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಕಬ್ಬಡಿ ಪಂದ್ಯಾವಳಿಯಲ್ಲಿ ಅಶೋಕಪುರಂನ ಎಸಿ ಬುಲ್ಸ್ ಪ್ರಥಮ ಬಹುಮಾನ ಪಡೆದರೆ, ಜೈ ಭೀಮ್ ತಂಡ ರನ್ನರ್ ಅಪ್ ಆಯಿತು.

ವಿಜೇತ ತಂಡಕ್ಕೆ ಬಹುಮಾನ ವಿತರಿಸಿ ಅಭಿನಂದಿಸಿದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮಾತನಾಡಿ, ಪೌರ ಕಾರ್ಮಿಕರ ಮಕ್ಕಳ ಶಿಕ್ಷಣದ ಕಡೆಗೆ ಹೆಚ್ಚಿನ ಗಮನಕೊಡಬೇಕಿದೆ. ಅಪ್ಪ–ಅಮ್ಮ ನಗರಪಾಲಿಕೆಯಲ್ಲಿ ಕಸಗುಡಿಸುವ ಕೆಲಸ ಮಾಡುತ್ತಾರೆ. ನಾವು ಅವರಂತೆ ಕಸ ಗೂಡಿಸುವ ಕೆಲಸ ಮಾಡಲು ಸೀಮಿತ ಅದೇ ಕೆಲಸ ಬೇಕು ಎಂಬ ಭಾವನೆಯಿಂದ ಹೊರಬಂದು, ಉನ್ನತ ಸ್ಥಾನಕ್ಕೆ ಬೆಳೆಯಬೇಕು. ದೊಡ್ಡ ದೊಡ್ಡ ಹುದ್ದೆಗಳನ್ನು ಪಡೆದು ಇತರರಿಗೂ ಮಾದರಿಯಾದರೆ ಮಾತ್ರವೇ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರವರ ಕನಸುಗಳು ಸಾಕಾರಗೊಳ್ಳುತ್ತದೆ ಎಂದರು.

ರಾಜ್ಯ ಸರ್ಕಾರ ಪೌರಕಾರ್ಮಿಕರ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಆರೋಗ್ಯ, ಶಿಕ್ಷಣ, ಉದ್ಯೋಗ, ವೈದ್ಯಕೀಯ ಕ್ಷೇತ್ರಕ್ಕೆ ಹೆಚ್ಚು ಹಣ ವಿನಿಯೋಗ ಮಾಡುತ್ತಿದ್ದು, ಅದರ ಸದುಪಯೋಗ ಪಡೆದುಕೊಳ್ಳಬೇಕು. ಯುವಕರು ಬೆಟ್ಟಿಂಗ್, ಆನ್‌ಲೈನ್ ಗೇಮ್, ಜೂಜು, ಗಾಂಜಾ ಸೇವನೆಯಂತಹ ದುಶ್ಚಟಗಳಿಗೆ ಆಕರ್ಷಿತರಾಗದೆ ಓದು ಹಾಗೂ ಕ್ರೀಡೆಯ ಕಡೆ ಗಮನಹರಿಸಬೇಕು. ಭವಿಷ್ಯ ಭಾರತದ ಉತ್ತಮ ಪ್ರಜೆಗಳಾಗಿ ದೇಶಕ್ಕೆ ಕೀರ್ತಿ ತರುವಂತವರಾಗಬೇಕು ಎಂದರು. ಯಜಮಾನರಾದ ಆರ್ಮುಗಂ, ಮಾದೇವ, ವೆಂಕಟೇಶ್ ನಾಗರಾಜ್, ಗಣೇಶ್,ರವಿ, ನಾರಾಯಣ್, ಕಮಲ್, ಹರೀಶ್ ಇದ್ದರು.

ಹೆಬ್ಬಾಳಲ್ಲಿ ಮನೆ ಬಾಗಿಲು ಮುರಿದು ಕಳವಿಗೆ ಯತ್ನ

ಮೈಸೂರು,ಮಾ.21(ಆರ್‌ಕೆ)– ಮನೆ ಬಾಗಿಲು ಮುರಿದು ಒಳಗೆ ನುಗ್ಗಿದ ಖದೀಮನೋರ್ವ ಕಳವಿಗೆ ವಿಫಲ ಯತ್ನ ನಡೆಸಿರುವ ಘಟನೆ ಮೈಸೂರಿನ ಹೆಬ್ಬಾಳಿನಲ್ಲಿ ಗುರುವಾರ ಸಂಭವಿಸಿದೆ.

ಹೆಬ್ಬಾಳು ಮೊದಲ ಹಂತದ ಸುಬ್ರಹ್ಮಣ್ಯನಗರ ನಿವಾಸಿ ಸುಂದರ್‌ರಾಜ್ ಎಂಬುವರ ಮನೆಗೆ ಮಧ್ಯಾಹ್ನ ಸುಮಾರು 1.35ರ ವೇಳೆಗೆ ನುಗ್ಗಿದ ಯುವಕನೋರ್ವ ಕಳವಿಗೆ ಯತ್ನಿಸಿದಾಗ, ಸುಂದರ್‌ರಾಜ್ ಅವರ ಅತ್ತೆ 84 ವರ್ಷದ ರತ್ನಮ್ಮ, ಜೋರಾಗಿ ಕೂಗಿಕೊಂಡಿದ್ದಾರೆ. ತಕ್ಷಣ ನೆರೆಹೊರೆಯವರು ಓಡಿ ಬಂದಿದ್ದಾರೆ. ಅದನ್ನು ಕಂಡು ಖದೀಮ ಅಲ್ಲಿಂದ ಪರಾರಿಯಾಗಿದ್ದಾನೆ.

ಕಂಪ್ಯೂಟರ್ ಸೆಂಟರ್ ನಡೆಸುತ್ತಿರುವ ಸುಂದರ್‌ರಾಜ್ ಅಂಗಡಿಗೆ ಹೋಗಿದ್ದು, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿರುವ ಪತ್ನಿ ಡಾ.ವಸಂತಲಕ್ಷ್ಮಿ ಕೂಡ ಕರ್ತವ್ಯಕ್ಕೆ ತೆರಳಿದ್ದರು. ಈ ಸಂದರ್ಭ ಕೊರಿಯರ್ ಎಂದು ಯುವಕನೊಬ್ಬ ಮನೆ ಮುಂದೆ ನಿಂತು ಸುಂದರ್ ಹೆಸರೇಳಿ ಕರೆದಿದ್ದಾನೆ. ಅನಾರೋಗ್ಯದಿಂದ ಬಳಲುತ್ತಿರುವ ರತ್ನಮ್ಮ ಅವರು ಎದ್ದು ಬರಲು ಸಾಧ್ಯವಾಗಿಲ್ಲ. ಅದಾದ ಕೇವಲ 10 ನಿಮಿಷದಲ್ಲೇ ಯುವಕನೋರ್ವ ಮನೆಯಲ್ಲಿ ಯಾರೂ ಇಲ್ಲ ಎಂದು ಭಾವಿಸಿ, ಬಾಗಿಲು ಮೀಟಿ ಒಳಗೆ ಬಂದಿದ್ದಾನೆ ಎಂದು ಸುಂದರ್‌ರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಹೆಬ್ಬಾಳು ಠಾಣೆ ಪೊಲೀಸರು ಮಹಜರು ನಡೆಸಿ, ಮನೆಯೊಳಗೆ ಮತ್ತು ಹೊರಗೆ ಅಳವಡಿಸಿದ್ದ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪಡೆದು ಪರಿಶೀಲಿಸಿದಾಗ ಯುವಕನೋರ್ವ ಕಳವಿಗೆ ಯತ್ನಿಸಿರುವುದು ದೃಢಪಟ್ಟಿತು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಸಿಸಿ ಕ್ಯಾಮರಾ ಫುಟೇಜ್ ಸುಳಿವು ಆಧರಿಸಿ ಪರಾರಿಯಾಗಿರುವ ಆರೋಪಿ ಪತ್ತೆಗೆ ಶೋಧ ನಡೆಸುತ್ತಿದ್ದಾರೆ. ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್.ಜಾಹ್ನವಿ ಹಾಗೂ ವಿಜಯನಗರ ಉಪವಿಭಾಗದ ಎಸಿಪಿ ರವಿಪ್ರಸಾದ್ ಸಹ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಮಾಜದ ಅಧ್ಯಕ್ಷರಾಗಿ ಯೋಗೀಶ್ ಉಪ್ಪಾರ ಮರು ಆಯ್ಕೆ


ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಮಾಜದ ಅಧ್ಯಕ್ಷರಾಗಿ ಎಸ್.ಯೋಗೀಶ್ ಉಪ್ಪಾರರನ್ನು ಮರು ಆಯ್ಕೆ ಮಾಡಲಾಯಿತು.

ಮೈಸೂರು,ಮಾ.21(ಎಂಕೆ)– ಮೈಸೂರು ಜಿಲ್ಲಾ ಭಗೀರಥ ಉಪ್ಪಾರ ಸಮಾಜದ ಅಧ್ಯಕ್ಷರಾಗಿ ಎಸ್.ಯೋಗೀಶ್ ಉಪ್ಪಾರ ಅವರನ್ನು ಸರ್ವಾನುಮತದಿಂದ ಮರು ಆಯ್ಕೆ ಮಾಡಲಾಯಿತು.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ನಡೆದ ಸಭೆಯಲ್ಲಿ ಮೈಸೂರು ಜಿಲ್ಲೆಯ ಎಲ್ಲಾ ಉಪ್ಪಾರ ಸಮಾಜದ ತಾಲೂಕು ಸಂಘಗಳ ಪದಾಧಿಕಾರಿಗಳ ಹಾಗೂ ಸಮಾಜದ ಮುಖಂಡರು, ಯುವಕರು ಹಾಗೂ ಮಹಿಳೆಯರ ಮುಖಂಡರ ಅಭಿಪ್ರಾಯದಂತೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಪದಾಧಿಕಾರಿಗಳಾದ ಶಿವಮಲ್ಲು, ಲಿಂಗರಾಜು, ಶಿವಲಿಂಗಪ್ಪ, ನಂಜುಂಡಸ್ವಾಮಿ, ಗೋವಿಂದ ಶೆಟ್ಟಿ, ರಾಜು, ಚಂದ್ರಪ್ಪ, ಮಹೇಶ್, ಕೆಂಡಗಣ್ಣ, ಚಂದ್ರು, ಬಾಬು, ಮಮತಾ ಚಂದ್ರಶೇಖರ್, ನರಸೀಪುರ ತಾಲೂಕು ಸಂಘದ ಅಧ್ಯಕ್ಷ ಸಿದ್ದಪ್ಪ ಸ್ವಾಮಿ, ಗೌರವಾಧ್ಯಕ್ಷ ರಾಮಶೆಟ್ಟಿ, ನಿರ್ದೇಶಕ ಮರಿಸ್ವಾಮಿ, ಪದಾಧಿಕಾರಿಗಳಾದ ಆರ್.ಮಾದೇಶ್, ಡಿ.ಪಿ.ನಾಗರಾಜು, ಸಿದ್ದರಾಜು ತೊಟ್ವಾಡಿ, ಸಿದ್ದರಾಜು, ಸಂತೋಷ್, ಕೆ.ಆರ್.ನಗರ ಹಾಗೂ ಸಾಲಿಗ್ರಾಮ ತಾಲೂಕು ಅಧ್ಯಕ್ಷ ಮಹದೇವ್ ಕಾಟ್ನಾಳು, ಉಪಾಧ್ಯಕ್ಷ ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ಸಂದೀಪ್, ಖಜಾಂಚಿ ರವಿ ಕುಮಾರ್, ರಘು, ರಂಗರಾಜು, ಸೋಮಣ್ಣ, ಪಿರಿಯಾಪಟ್ಟಣ ತಾಲೂಕಿನ ಪದಾಧಿಕಾರಿಗಳಾದ ಕಾಮರಾಜು, ಶಿವರುದ್ರ, ವೀರಭದ್ರ, ಗ್ರಾಪಂ ಸದಸ್ಯರಾದ ನಾರಾಯಣ, ಶಂಕರ್, ನಂಜನಗೂಡು ತಾಲೂಕಿನ ನಾಗರಾಜ್, ಮಂಜುನಾಥ್, ಬಸವರಾಜು, ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕು ಅಧ್ಯಕ್ಷ ಮಲ್ಲೇಶ್, ರವಿಕುಮಾರ್ ತುಂಬಿಸೋಗೆ, ಸೋಮಶೇಖರ್, ಮಣಿ ಕುಮಾರ್, ನಾಗೇಶ್, ಹುಣಸೂರು ತಾಲೂಕು ಅಧ್ಯಕ್ಷ ಸಿದ್ದರಾಜು, ಶ್ರೀನಿವಾಸ್ ಕುಮಾರ್ ಉಪ್ಪಾರ, ಎನ್.ಆರ್.ಮೊಹಲ್ಲಾದ ರಾಚಪ್ಪಾಜಿ ತುಂಬಲ, ವೆಂಕಟೇಶ್ ಬಿಳುಗಲಿ, ಟಿ.ನಾಗರಾಜ್, ರವಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಉದ್ಯಮಕ್ಕೆ ಸಂಬಂಧಿಸಿದಂತೆ ನಾಳೆ ಮೈಸೂರಲ್ಲಿ ಸಂವಾದ

ಮೈಸೂರು,ಮಾ.21(ಜಿಎ)–ಜೈನ್ ಇಂಟರ್‌ನ್ಯಾಷನಲ್ ಸಂಸ್ಥೆ ವತಿಯಿಂದ ಸ್ಟಾರ್ ಏರ್‌ಲೈನ್ಸ್ ಮಾಲೀಕ ಸಂಜಯ್ ಗೋದಾವತ್ ಅವರೊಂದಿಗೆ ಉದ್ಯಮಕ್ಕೆ ಸಂಬಂಧಿಸಿದಂತೆ ಮಾ.23ರಂದು 10.30ಕ್ಕೆ ಗೆಲಾಕ್ಸಿ ಕನ್ವೆನ್ಷನ್ ಹಾಲ್‌ನಲ್ಲಿ ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಸುರೇಶ್ ಕುಮಾರ್ ಜೈನ್ ಈ ವಿಷಯ ತಿಳಿಸಿ, ಸಂವಾದದಲ್ಲಿ ಉದ್ಯಮಿಗಳು, ವೃತ್ತಿಪರರು ಹಾಗೂ ವ್ಯಾಪಾರಿಗಳೊಡನೆ ಚರ್ಚೆ ನಡೆಯಲಿದ್ದು, ಪ್ರಮುಖವಾಗಿ ಸ್ಟಾರ್ ಏರ್‌ಲೈನ್ಸ್ ವತಿಯಿಂದ ಮೈಸೂರಲ್ಲಿ ವಿಮಾನ ಸಂಚಾರ ಆರಂಭಿಸುವಂತೆ ಜೈನ್ ಇಂಟರ್‌ನ್ಯಾಷನಲ್ ಸಂಸ್ಥೆ ಆಗ್ರಹಿಸಲಿದೆ ಎಂದರು.

ಉದ್ಯಮ, ಶಿಕ್ಷಣ, ಸಮಾಜ ಸೇವಾ ಕ್ಷೇತ್ರದವರು ಹಾಗೂ ಎಲ್ಲಾ ಸಮುದಾಯ, ಧರ್ಮದವರೂ ಪಾಲ್ಗೊಂಡು ಉದ್ಯಮಗಳಲ್ಲಿ ಯಶಸ್ಸು ಪಡೆಯುವ ಬಗ್ಗೆ ಅರಿವು ಮೂಡಿಸಿಕೊಳ್ಳಬಹುದು. ಆಸಕ್ತರು ದೂ. 9448069929ಗೆ ಕರೆ ಮಾಡಿ ಪಾಸ್ ಪಡೆಯಬಹುದು ಎಂದರು.

ದೇಶ - ವಿದೇಶ

ಪಾಕ್ ಸೇನಾ ಕ್ಯಾಪ್ಟನ್ ಹತ್ಯೆ: 10 ಭಯೋತ್ಪಾದಕರು ಸಾವು



ಪೇಶಾವರ್: ಪಾಕಿಸ್ತಾನದ ಪ್ರಕ್ಷುಬ್ಧ ಖೈಬರ್ ಪಖ್ತುಂಖ್ವಾದಲ್ಲಿ 10 ಭಯೋತ್ಪಾದಕರನ್ನು ಹತ್ಯೆ ಮಾಡಿರುವುದಾಗಿ ಪಾಕಿಸ್ತಾನ ಸೇನೆ ಹೇಳಿಕೊಂಡಿದೆ. ದೇಶದ ವಾಯುವ್ಯ ಪ್ರಾಂತ್ಯದ ಖೈಬರ್ ಪಖ್ತುನ್ವಾದಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ನಿಷೇಧಿತ ಸಂಘಟನೆಗೆ ಸೇರಿದ ಕನಿಷ್ಠ 10 ಭಯೋತ್ಪಾದಕರು ಮತ್ತು ಪಾಕಿಸ್ತಾನಿ ಸೇನಾ ಕ್ಯಾಪ್ಟನ್ ಹತ್ಯೆಯಾಗಿದ್ದಾರೆ. ಪಾಕಿಸ್ತಾನ ಸಶಸ್ತ್ರ ಪಡೆಗಳ ಮಾಧ್ಯಮ ಮತ್ತು ಸಾರ್ವಜನಿಕ ಸಂಪರ್ಕ ವಿಭಾಗವಾದ ಇಂಟರ್–ಸರ್ವೀಸಸ್ ಪಬ್ಲಿಕ್ ರಿಲೇಶನ್ಸ್ ಈ ಮಾಹಿತಿ ನೀಡಿದೆ. ಈ ಪ್ರದೇಶದಲ್ಲಿ ಉಗ್ರರು ಇರುವ ಬಗ್ಗೆ ಮಾಹಿತಿ ಬಂದ ನಂತರ ಗುರುವಾರ ಗುಪ್ತಚರ ಆಧಾರಿತ ಕಾರ್ಯಾಚರಣೆ ಪ್ರಾರಂಭಿಸಲಾಯಿತು ಎಂದು ಸೇನೆಯ ಮಾಧ್ಯಮ ವಿಭಾಗ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದೆ.

ಭೀಕರ ಎನ್‌ಕೌಂಟರ್‌ನಲ್ಲಿ ಪಾಕಿಸ್ತಾನದ ಸೇನಾ ಕ್ಯಾಪ್ಟನ್ ಹಸ್ನೈನ್ ಅಖ್ತರ್ ಸಾವನ್ನಪ್ಪಿದರು. ಹತ್ಯೆಗೀಡಾದ ಭಯೋತ್ಪಾದಕರಿಂದ ಶಸ್ತ್ರಾಸ್ತ್ರಗಳು ಮತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಐಎಸ್‌ಪಿಆರ್ ತಿಳಿಸಿದೆ. ಈ ಭಯೋತ್ಪಾದಕರು ವಿವಿಧ ಕಾನೂನು ಜಾರಿ ಸಂಸ್ಥೆಗಳ ವಿರುದ್ಧ ಹಲವಾರು ದಾಳಿಗಳನ್ನು ನಡೆಸುವುದರ ಜೊತೆಗೆ ಅಮಾಯಕ ನಾಗರಿಕರ ಹತ್ಯೆಯಲ್ಲಿ ಭಾಗಿಯಾಗಿದ್ದಾರೆ ಎಂದು ಹೇಳಿದರು.

ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ: ಪ್ರಾಧ್ಯಾಪಕನ ಬಂಧನ

ಹತ್ರಾಸ್: ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಉತ್ತರ ಪ್ರದೇಶದ ಹತ್ರಾಸ್ ಕಾಲೇಜಿನ ಪ್ರಾಧ್ಯಾಪಕರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಬಾಗ್ಲಾ ಪದವಿ ಕಾಲೇಜಿನ ಮುಖ್ಯ ಪ್ರಾಕ್ಟರ್ ರಜನೀಶ್ ಕುಮಾರ್‌ನನ್ನು ಪ್ರಯಾಗ್‌ರಾಜ್‌ನಲ್ಲಿ ಬಂಧಿಸಲಾಗಿದೆ.

ಬಾಗ್ಲಾ ಪದವಿ ಕಾಲೇಜಿನ ಭೌಗೋಳಿಕ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಮತ್ತು ಮುಖ್ಯ ಪ್ರಾಕ್ಟರ್ ಆಗಿದ್ದ ಕುಮಾರ್ ಅವರ ಮೊಬೈಲ್ ಫೋನ್ ಮತ್ತು ಲ್ಯಾಪ್‌ಟಾಪ್ ಸಹ ವಶಪಡಿಸಿಕೊಂಡಿದ್ದೇವೆ ಎಂದು ಪೊಲೀಸರು ತಿಳಿಸಿದ್ದಾರೆ.

ಕುಮಾರ್ ತನ್ನ ಫೋನ್ ಮತ್ತು ಲ್ಯಾಪ್‌ಟಾಪ್‌ನಲ್ಲಿ ವಿಶೇಷ ಸಾಫ್ಟ್‌ವೇರ್ ಹೊಂದಿದ್ದು, ಲೈಂಗಿಕ ದೌರ್ಜನ್ಯದ ವಿಡಿಯೋಗಳನ್ನು ಮಾಡಿ, ವಿದ್ಯಾರ್ಥಿನಿಯರಿಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದನು ಎಂದು ಆರೋಪಿಸಲಾಗಿದೆ. ರಜನೀಶ್ ತನ್ನ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಅದನ್ನು ಚಿತ್ರೀಕರಿಸಲು ವೆಬ್ ಕ್ಯಾಮ್ ಬಳಸುವ ಐಡಿಯಾ ಮಾಡಿದರು ಎಂದು ಪೊಲೀಸರು ತಿಳಿಸಿದ್ದಾರೆ.


ಮಸೀದಿ ನಿರ್ಮಾಣಕ್ಕಾಗಿ 130 ವರ್ಷದ ಹಿಂದೂ ದೇವಾಲಯ ನೆಲಸಮ

ಕೌಲಾಲಂಪುರ: ಮಲೇಷ್ಯಾದ ಕೌಲಾಲಂಪುರದಲ್ಲಿ ಮಸೀದಿ ನಿರ್ಮಾಣಕ್ಕಾಗಿ 130 ವರ್ಷ ಪುರಾತನ ದೇವಾಲಯವನ್ನು ನೆಲಸಮ ಮಾಡಲಾಗುತ್ತಿದೆ. ಜಲನ್ ಇಂಡಿಯಾ ಬೀದಿಯಲ್ಲಿ ಜಕೇಲ್ ಮಾಲ್ ಎದುರಿರುವ ಪತ್ರಕಾಳಿಯಮ್ಮ ದೇವಸ್ಥಾನವನ್ನು ಕೆಡವಲು ನಿರ್ದೇಶಿಸಲಾಗಿದೆ. ಆ ಸ್ಥಳದಲ್ಲಿ ಮಸೀದಿ ನಿರ್ಮಿಸಲು ತೀರ್ಮಾನಿಸಲಾಗಿದೆ. ಈ ಮೊದಲು ಈ ಪುರಾತನ ದೇವಾಲಯವನ್ನು ಕೆಡಹುವ ಕುರಿತಷ್ಟೇ ಆಲೋಚಿಸಲಾಗಿತ್ತು. ಆದರೆ ಆಕ್ಷೇಪಗಳು, ಹಿಂದೂಗಳು ನಡೆಸಿದ ಪ್ರತಿಭಟನೆ ಹಿನ್ನೆಲೆಯಲ್ಲಿ ದೇವಾಲಯದ ನಿರ್ಮಾಣಕ್ಕೆ ಹೊಸ ಸ್ಥಳವನ್ನು ಕಂಡುಕೊಳ್ಳಲಾಗಿದೆ. ಈ ದೇವಾಲಯವನ್ನು ಮಲೇಷ್ಯಾದ ಸ್ವಾತಂತ್ರ್ಯಕ್ಕೂ ಮುನ್ನ ನಿರ್ಮಿಸಲಾಗಿತ್ತು. ಅದನ್ನು ಬದಲಾಯಿಸಲು ಸಜ್ಜಾಗಿರುವವರು ಮಸೀದಿ ಶಿಲಾನ್ಯಾಸ ಸಮಾರಂಭ ನಡೆಸಿದ್ದಾರೆ. ಮಾಧ್ಯಮ ವರದಿಗಳ ಪ್ರಕಾರ ಮಸೀದಿಯನ್ನು ಮಸೀದ್ ಮದನಿ ಎಂದು ಹೆಸರಿಸಲಾಗುವುದು. ದೇವಾಲಯದ ಭೂಮಿ ಮಸೀದಿಗಾಗಿ ಏಕೆ ಆಯ್ಕೆ ಮಾಡಲಾಯಿತು. ಅದರ ಸ್ಥಾನಮಾನ ಇತ್ಯರ್ಥಪಡಿಸುವ ಮೊದಲು ಭೂಮಿಯನ್ನು ಜಕೆಲ್ ಟ್ರೇಡಿಂಗ್‌ಗೆ ಏಕೆ ಮಾರಾಟ ಮಾಡಲಾಯಿತು ಎಂದು ಜನರು ಪ್ರಶ್ನಿಸಿದ್ದಾರೆ.



ಪ್ರಧಾನಿ ಮೋದಿ ವಿದೇಶ ಪ್ರವಾಸಕ್ಕೆ 2 ವರ್ಷದಲ್ಲಿ 258 ಕೋಟಿ ಖರ್ಚು!

ನವದೆಹಲಿ: ಪ್ರಧಾನಮಂತ್ರಿ ನರೇಂದ್ರ ಮೋದಿ 2022ರ ಮೇ ತಿಂಗಳಿನಿಂದ 2024ರ ಡಿಸೆಂಬರ್‌ವರೆಗೆ 38 ವಿದೇಶಿ ಪ್ರವಾಸಗಳನ್ನು ಕೈಗೊಂಡಿದ್ದು, ಈ ಪ್ರವಾಸಗಳಿಗೆ ಸುಮಾರು 258 ಕೋಟಿ ರೂ. ಖರ್ಚಾಗಿವೆ ಎಂದು ಕೇಂದ್ರ ಸರ್ಕಾರವು ಸಂಸತ್ತಿನಲ್ಲಿ ತಿಳಿಸಿದೆ.



ವಿದೇಶಾಂಗ ಸಚಿವಾಲಯದ ರಾಜ್ಯ ಸಚಿವೆ ಪಬಿತ್ರಾ ಮಾರ್ಗರಿಟಾ ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಈ ಉತ್ತರ ನೀಡಿದ್ದಾರೆ. ಕೇಂದ್ರ ಸರ್ಕಾರವು ಒದಗಿಸಿದ ಮಾಹಿತಿಯಲ್ಲಿ ಪ್ರಧಾನಿ ಮೋದಿ ಅವರ ವಿದೇಶಿ ಪ್ರವಾಸಗಳ ಖರ್ಚು ವೆಚ್ಚವನ್ನು ದೇಶವಾರು ವಿಂಗಡಿಸಿದೆ. ಈ ಪ್ರವಾಸಗಳಲ್ಲಿ ಅಧಿಕೃತ ಪ್ರತಿನಿಧಿಗಳು, ಭದ್ರತಾ ಸಿಬ್ಬಂದಿ, ಮಾಧ್ಯಮ ಪ್ರತಿನಿಧಿಗಳು ಮತ್ತು ಇತರರ ಖರ್ಚು ಸೇರಿದೆ. ಜೂನ್ 2023ರಲ್ಲಿ ಪ್ರಧಾನಿಯವರ ಅಮೆರಿಕ ಪ್ರವಾಸದ ಸಮಯದಲ್ಲಿ ಒಂದೇ ಭೇಟಿಗೆ ಅತಿ ಹೆಚ್ಚು ಎನ್ನುವಂತೆ 22 ಕೋಟಿ ಖರ್ಚು ಮಾಡಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಪಬಿತ್ರಾ ಮಾರ್ಗರಿಟಾ ಉತ್ತರ ನೀಡಿದ್ದಾರೆ. ಈ ವರ್ಷಗಳಲ್ಲಿ ಪ್ರಧಾನಿ ಮೋದಿ ಜರ್ಮನಿ, ಕುವೈತ್, ಡೆನ್ಮಾರ್ಕ್, ಫ್ರಾನ್ಸ್, ಯುಎಇ, ಉಜ್ಬೇಕಿಸ್ತಾನ್, ಇಂಡೋನೇಷ್ಯಾ, ಆಸ್ಟ್ರೇಲಿಯಾ, ಈಜಿಪ್ಟ್, ದಕ್ಷಿಣ ಆಫ್ರಿಕಾ, ಗ್ರೀಸ್, ಪೋಲೆಂಡ್, ಉಕ್ರೇನ್, ರಷ್ಯಾ, ಇಟಲಿ, ಬ್ರೆಜಿಲ್ ಹಾಗೂ ಗಯಾನಾ ದೇಶಗಳಿಗೆ ಭೇಟಿ ನೀಡಿದ್ದಾರೆ.

ವಿಮಾನದ ಟಾಯ್ಲೆಟ್ ನೀರಿನಲ್ಲಿ ನಾಯಿಯ ಕೊಂದ ಮಹಿಳೆ

ವಾಷಿಂಗ್ಟನ್: ಸಾಕು ಪ್ರಾಣಿಗಳಿಗೋಸ್ಕರ ಜೀವವನ್ನೇ ಕೊಡುವ ಜನರ ನಡುವೆ, ಇಲ್ಲೊಬ್ಬ ಸ್ವಾರ್ಥಿ ತನಗೋಸ್ಕರ ನಾಯಿಯನ್ನು ಕೊಲೆ ಮಾಡಿರುವ ಘಟನೆ ನಡೆದಿದೆ. ಅಮೆರಿಕದ ವಿಮಾನ ನಿಲ್ದಾಣದಲ್ಲಿ ವಿಮಾನದಲ್ಲಿ ನಾಯಿಯನ್ನು ಕರೆದೊಯ್ಯುವಂತಿಲ್ಲ ಎಂದು ಸಿಬ್ಬಂದಿ ಹೇಳಿದ್ದಕ್ಕೆ ಮಹಿಳೆ ಟಾಯ್ಲೆಟ್ ನೀರಿನಲ್ಲಿ ನಾಯಿಯನ್ನು ಮುಳುಗಿಸಿ ಕೊಂದಿದ್ದಾರೆ. ಈ ಸಂಬಂದ 57 ವರ್ಷದ ಮಹಿಳೆಯನ್ನು ಬಂಧಿಸಲಾಗಿದೆ.

ಕಳೆದ ವರ್ಷ ಡಿಸೆಂಬರ್‌ನಲ್ಲಿ ಆರ್ಲ್ಯಾಂಡೊ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈ ಘಟನೆ ನಡೆದಿದೆ. ಭದ್ರತಾ ಚೆಕ್‌ಪೋಸ್ಟ್ ಬಳಿ ಇರುವ ಶೌಚಾಲಯದಲ್ಲಿ ನಾಯಿ ಮೃತಪಟ್ಟಿರುವುದು ಆತಂಕಕ್ಕೆ ಕಾರಣವಾಗಿತ್ತು. ಮಹಿಳೆ ತನ್ನ ಶ್ವಾನದೊಂದಿಗೆ ವಿಮಾನ ಹತ್ತಲು ಪ್ರಯತ್ನಿಸಿದ್ದಳು ಆದರೆ ಅಗತ್ಯವಾದ ದಾಖಲೆಗಳ ಕೊರತೆ ಇತ್ತು. ನಂತರ ಮಹಿಳೆ ತನ್ನ ನಾಯಿಯನ್ನು ವಿಮಾನ ನಿಲ್ದಾಣದ ಶೌಚಾಲಯದಲ್ಲಿ ಮುಳುಗಿಸಿ ಭದ್ರತಾ ಚೆಕ್‌ಪೋಸ್ಟ್‌ಗಳ ಮೂಲಕ ಹೋಗುವ ಮೊದಲು ಅದರ ಅವಶೇಷಗಳನ್ನು ಕಸದ ಪುಟ್ಟಿಗೆ ಎಸೆದಿದ್ದಳು. ವಿಮಾನ ನಿಲ್ದಾಣ ಶುಚಿಗೊಳಿಸುವ ಸಿಬ್ಬಂದಿಗೆ ನಾಯಿಯ ಶವ ಕಂಡಿತ್ತು. ಸುಮಾರು 3 ತಿಂಗಳ ನಂತರ ಮಹಿಳೆಯನ್ನು ಬಂಧಿಸಲಾಯಿತು.

ಕಾವೇರಿ ಮಾಲಿನ್ಯ ತಡೆಗೆ ತಂಡ ರಚನೆ: ಡಿಕೆಶಿ



ಉಪ ಮುಖ್ಯಮಂತ್ರಿ ಶಿವಕುಮಾರ್ ಭಾಗಮಂಡಲದಲ್ಲಿ ಕಾವೇರಿ ತೀರ್ಥ ಸಂಗ್ರಹಿಸಿದರು.

ಮಡಿಕೇರಿ,ಮಾ.21– ಕಾವೇರಿ ನದಿ ಮಾಲಿನ್ಯ ಹಾಗೂ ನದಿ ಪಾತ್ರಗಳ ಒತ್ತುವರಿ ತಡೆಯಲು ತಂಡ ರಚನೆಗೆ ಕ್ರಮ ವಹಿಸಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಈ ನಾಡಿನ ನೆಲ, ಜಲ, ಇತಿಹಾಸ, ಪರಂಪರೆ ಉಳಿಸಲು ಏನು ಬೇಕೋ ಅದೆಲ್ಲವನ್ನು ನಾವು ಮಾಡುತ್ತೇವೆ. ನಿಮ್ಮ ಪತ್ರಕರ್ತರ ಸಲಹೆಗಳಿದ್ದರೂ ಸ್ವೀಕರಿಸುತ್ತೇವೆ ಎಂದು ಸುದ್ದಿಗಾರರಿಗೆ ತಿಳಿಸಿದರು.

'ವಿಶ್ವ ಜಲ ದಿನ' ಅಂಗವಾಗಿ ಬೆಂಗಳೂರಲ್ಲಿ ವಾರಗಳ ಕಾಲ ಜಲ ಸಂರಕ್ಷಣೆ ಅಭಿಯಾನ ನಡೆಯಲಿದೆ. ನೀರಿನ ದುರ್ಬಳಕೆ ತಡೆಗಟ್ಟಿ, ಸದ್ಬಳಕೆ ಮಾಡುವಂತೆ ಜಾಗೃತಿ ಮೂಡಿಸುವುದೇ ಕಾವೇರಿ ಆರತಿ ಉದ್ದೇಶ ಎಂದು ಅವರು ತಿಳಿಸಿದರು. ನೀರನ್ನು ದುರ್ಬಳಕೆ ಮಾಡುವುದಿಲ್ಲ, ಅನಾವಶ್ಯಕವಾಗಿ ನೀರು ಪೋಲು ಮಾಡುವುದಿಲ್ಲ ಎಂದು ಜನರಿಗೆ ಅರಿವು ಮೂಡಿಸಲಾಗುವುದು ಹಾಗೂ ಪ್ರತಿಜ್ಞಾ ವಿಧಿ ಭೋದಿಸಲಾಗುವುದು ಎಂದರು.

ಕಾವೇರಿ ಆರತಿಗೆ ಹಣ ಮೀಸಲು: ನದಿ ತೀರದಲ್ಲಿ ಕಾವೇರಿ ಆರತಿ ಆಯೋಜಿಸಲು ಈಗಾಗಲೇ ಹಣ ಮೀಸಲಿಡಲಾಗಿದೆ. ಎಷ್ಟು ದಿನಗಳಿಗೆ ಒಮ್ಮೆ ಆರತಿ ಮಾಡಬೇಕು ಎನ್ನುವ ತೀರ್ಮಾನವನ್ನು ಮುಂದೆ ತಿಳಿಸಲಾಗುವುದು. ಆರತಿ ವೇಳೆ ಕೊಡಗಿನ ಕಲಾವಿದರೂ ಭಾಗವಹಿಸುವಂತೆ ನೋಡಿಕೊಳ್ಳಬೇಕು ಎಂದು ಮುಜರಾಯಿ, ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳಿಗೆ ಸೂಚನೆ ನೀಡಲಾಗಿದೆ ಎಂದು ಮಾಹಿತಿ ನೀಡಿದರು. ಈ ಹಿಂದೆ ತಲಕಾವೇರಿಗೆ ಬಂದು ಪೂಜೆ ಸಲ್ಲಿಸಿ ಮುಖ್ಯಮಂತ್ರಿ ಅವರು, ನಾನು ಹಾಗೂ ಪಕ್ಷದ ಅನೇಕ ನಾಯಕರ ನೇತೃತ್ವದಲ್ಲಿ ಮೇಕೆದಾಟು ಪಾದಯಾತ್ರೆ ಮಾಡಲಾಯಿತು. ಬೆಂಗಳೂರಿಗೆ ಕಾವೇರಿ ಕುಡಿಯುವ ನೀರಿನ 5ನೇ ಹಂತವೂ ಈಗ ಕಾರ್ಯರೂಪಕ್ಕೆ ಬಂದಿದೆ ಇದೆಲ್ಲವೂ ಕಾವೇರಿ ನದಿಯಿಂದ ಸಾಧ್ಯವಾಗಿದೆ ಎಂದರು.

ವಿವಿ ಮುಚ್ಚುವುದಿಲ್ಲ: ಕೊಡಗು ವಿಶ್ವವಿದ್ಯಾನಿಲಯ ಕುರಿತು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿಗಳು, ಯಾವ ವಿವಿಯನ್ನೂ ನಾವು ಮುಚ್ಚಲು ಸಾಧ್ಯವಿಲ್ಲ. ಕೇವಲ ಮರ್ಜ್ ಮಾಡಬಹುದಷ್ಟೇ. ಇದರಲ್ಲಿ ಪ್ರತಿಷ್ಠೆ ಪ್ರಶ್ನೆ ಏನೂ ಇಲ್ಲ ಎಂದು ಸ್ಪಷ್ಟಪಡಿಸಿದರು.

ಭವ್ಯ ಸ್ವಾಗತ: ಹೆಲಿಕಾಪ್ಟರ್‌ನಲ್ಲಿ ಭಾಗಮಂಡಲದ ಕಾವೇರಿ ಪದವಿ ಪೂರ್ವ ಕಾಲೇಜಿನ ಹೆಲಿಪ್ಯಾಡ್‌ಗೆ ಆಗಮಿಸಿದ ಸಂದರ್ಭ ಜಿಲ್ಲಾಧಿಕಾರಿ ವೆಂಕಟ್ ರಾಜಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಅಪರ ಜಿಲ್ಲಾಧಿಕಾರಿ ಐಶ್ವರ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ ಮತ್ತು ಪಕ್ಷ ಪ್ರಮುಖರು ಉಪಸ್ಥಿತರಿದ್ದರು.

ಕಾವೇರಿ ತೀರ್ಥ ಸಂಗ್ರಹ : ತಲಕಾವೇರಿ ಕ್ಷೇತ್ರಕ್ಕೆ ಆಗಮಿಸಿದ ಡಿ.ಕೆ.ಶಿವಕುಮಾರ್ ಅವರು ಪವಿತ್ರ ಕಾವೇರಿ ತೀರ್ಥ ಕುಂಡಿಕೆಯಿಂದ ತೀರ್ಥ ಸ್ವೀಕರಿಸಿದರು.

ಮೊದಲಿಗೆ ಭಾಗಮಂಡಲದ ತ್ರಿವೇಣಿ ಸಂಗಮಕ್ಕೆ ಆಗಮಿಸಿದ ಶಿವಕುಮಾರ್, ಸಂಗಮದಲ್ಲಿ ಪ್ರಾರ್ಥನೆ ಸಲ್ಲಿಸಿದರು. ನಂತರ ಶ್ರೀ ಭಗಂಡೇಶ್ವರ ದೇವಾಲಯಕ್ಕೆ ತೆರಳಿ ವಿಶೇಷ ಪೂಜೆ ಸಲ್ಲಿಸಿ, ಕಾವೇರಿ ತೀರ್ಥ ಕುಂಡಿಕೆ ಮುಂದಿರುವ ಪುಷ್ಕರಣಿಯಲ್ಲಿ ಪವಿತ್ರ ತೀರ್ಥವನ್ನು ಸ್ವೀಕರಿಸಿದರು.

ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ. ಮಂತರ್ ಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ, ಶ್ರೀ ಭಗಂಡೇಶ್ವರ ದೇವಾಲಯ ತಕ್ಕ ಮುಖ್ಯಸ್ಥರಾದ ಬಳ್ಳಡ್ಕ ಅಪ್ಪಾಜಿ, ತಲಕಾವೇರಿ ದೇವಾಲಯ ತಕ್ಕ ಮುಖ್ಯಸ್ಥರಾದ ಕೋಡಿ ಮೋಟಯ್ಯ, ಡಿಸಿ ವೆಂಕಟ್ ರಾಜಾ, ಉಪ ವಿಭಾಗಾಧಿಕಾರಿ ವಿನಾಯಕ ನರ್ವಾಡೆ, ಉಪ ಮುಖ್ಯಮಂತ್ರಿಗಳ ತಾಂತ್ರಿಕ ಸಲಹೆಗಾರ ಜಯಪ್ರಕಾಶ್, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್, ಬೃಹತ್ ನೀರಾವರಿ ಇಲಾಖೆಯ ಮುಖ್ಯ ಎಂಜಿನಿಯರ್ ಆರ್.ಎಲ್.ವೆಂಕಟೇಶ್, ಅಧೀಕ್ಷಕ ಎಂಜಿನಿಯರ್ ರಘುಪತಿ, ಹಾರಂಗಿ ಜಲಾಶಯ ಕಾರ್ಯಪಾಲಕ ಎಂಜಿನಿಯರ್ ಪುಟ್ಟಸ್ವಾಮಿ ಸೇರಿದಂತೆ ಮತ್ತಿತ್ತರ ಪ್ರಮುಖರು ಉಪಸ್ಥಿತರಿದ್ದರು.

ಹನಿಟ್ರ್ಯಾಪ್ ಪ್ರಕರಣದ ಬಗ್ಗೆ ಶೀಘ್ರ ತನಿಖೆಯಾಗಲಿ

ಮಡಿಕೇರಿ: ಹನಿಟ್ರ್ಯಾಪ್ ಪ್ರಕರಣದ ಬಗ್ಗೆ ಶೀಘ್ರ ತನಿಖೆಯಾಗಬೇಕು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಒತ್ತಾಯಿಸಿದಾರೆ ಭಾಗಮಂಡಲದ ಹೆಲಿಪ್ಯಾಡ್ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಡಿ.ಕೆ.ಶಿವಕುಮಾರ್, ಹಿಟ್ ಅಂಡ್ ರನ್ ರೀತಿ ಹನಿಟ್ರ್ಯಾಪ್ ಪ್ರಕರಣವೂ ಆಗಿದೆ. ನಾನು ಈ ಬಗ್ಗೆ ಗುರುವಾರವೇ ಪೊಲೀಸರಿಗೆ ದೂರು ನೀಡಲಿ ಎಂದು ಸಲಹೆ ನೀಡಿದ್ದೆ ಎಂದು ಡಿಸಿಎಂ ಅವರು ಹೇಳಿದರು.

ಸರ್ಕಾರದ ಸಚಿವರಿಗೆ ರಕ್ಷಣೆ ಇಲ್ಲವೇ ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ಸಚಿವರಿಗೆ ರಕ್ಷಣೆ ಇಲ್ಲ ಎಂದು ಹೇಳಿದವರ್‍ಯಾರು? ಸುಮ್ಮನೆ ಹನಿಟ್ರ್ಯಾಪ್ ಮಾಡುವವರು ನಿಮ್ಮ ಬಳಿ ಬರುತ್ತಾರೆಯೇ? ನೀವು ಹಲೋ ಎಂದರೆ ಅವರು ಹಲೋ ಎನ್ನುತ್ತಾರೆ. ನೀವು ಪ್ರತಿಕ್ರಿಯೆ ನೀಡಲಿಲ್ಲ ಎಂದರೆ ಯಾರಾದರೂ ಮಾತನಾಡಿಸುತ್ತಾರಾ? ಮಾಧ್ಯಮದವರು ಮಾತನಾಡಿಸಿದರೆ ನಾನು ಮಾತನಾಡಿಸುತ್ತೇನೆ ಎಂದು ಕಾಲೆಳೆದರು.

ಹನಿಟ್ರ್ಯಾಪ್ ಹಿಂದೆ ಡಿ.ಕೆ.ಶಿವಕುಮಾರ್ ತಂಡವಿದೆ ಎನ್ನುವ ಶಾಸಕ ಮುನಿರತ್ನ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಡಿ.ಕೆ.ಶಿವಕುಮಾರ್, ವಿಧಾನಸೌಧದಲ್ಲಿ ಅವರು ಏನೆಲ್ಲಾ ಮಾಡಿದ್ದರು ಎನ್ನುವುದು ಪೊಲೀಸ್ ದೂರಿನಲ್ಲಿ ಇದೆಯಲ್ಲವೇ? ಆರ್.ಅಶೋಕ್‌ಗೆ, ಯಡಿಯೂರಪ್ಪ ಅವರಿಗೆ ಏನೋ ಆಯಿತು ಎಂದು ಬಿಜೆಪಿಯವರೇ ಮಾತನಾಡುತ್ತಿದ್ದರಲ್ಲವೇ? ಅವರ ನೋವನ್ನು ಅವರು ಹೇಳಿಕೊಂಡಿದ್ದಾರೆ. ಮಾಡಿದ್ದುಣ್ಣೋ ಮಾರಾಯ. ಅವರಿಗೆ ಒಂದಷ್ಟು ತೊಂದರೆಗಳಿವೆ ಎಂದು ವ್ಯಂಗ್ಯವಾಡಿದರು.

ಜೈನೀರ ಉತ್ತಪ್ಪ ನಿಧನ



ನಾಪೋಕ್ಲು: ಸಮೀಪದ ಚೆಯ್ಯಂಡಾಣೆ ಗ್ರಾಮ ಪಂಚಾಯಿತಿ ಚೇಲಾವರ ಗ್ರಾಮದ ಜೈನೀರ ಉತ್ತಪ್ಪ(80) ಇಂದು ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಬಂಧು ವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶನಿವಾರ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾದಕ ವಸ್ತು ಮಾರಾಟ: ಮೂವರ ಬಂಧನ

ಮಡಿಕೇರಿ,ಮಾ21– ನಿಷೇಧಿತ ಮಾದಕ ವಸ್ತು ಎಂಡಿಎಂಎ ಅನ್ನು ಮಾರಾಟ ಮತ್ತು ಸರಬರಾಜು ಮಾಡುತ್ತಿದ್ದ 3 ಮಂದಿ ಆರೋಪಿಗಳನ್ನು ನಾಪೋಕ್ಲು ಪೊಲೀಸರು ಬಂಧಿಸಿದ್ದಾರೆ. ಎಮ್ಮೆಮಾಡು ಗ್ರಾಮ ನಿವಾಸಿಗಳಾದ ಎಂ.ಹೆಚ್.ಸಾದಿಕ್(30), ಕೆ.ಎಂ. ಅಶ್ರಫ್(44) ಮತ್ತು ಸರ್ಫುದ್ದೀನ್(24) ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ಬಂಧಿತರಿಂದ 10.37 ಗ್ರಾಂ ಎಂಡಿಎಂಎ, ಕೃತ್ಯಕ್ಕೆ ಬಳಸಿದ್ದ ಕಾರನ್ನು ವಶಕ್ಕೆ ಪಡೆಯಲಾಗಿದೆ. ಎಮ್ಮೆಮಾಡು ಗ್ರಾಮದ ಕುರುಳಿ ರಸ್ತೆಯಲ್ಲಿ ಎಂಡಿಎಂಎ ಮಾರಾಟ ಮತ್ತು ಸರಬರಾಜು ಕುರಿತು ಮಾಹಿತಿ ಆಧರಿಸಿ ದಾಳಿ ನಡೆಸಿದ ಪೊಲೀಸರು ಮಾಲು ಸಹಿತ ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ಒಪ್ಪಿಸಿದ್ದಾರೆ.

ಮಡಿಕೇರಿ ಡಿವೈಎಸ್‌ಪಿ ಪಿ.ಎ.ಸೂರಜ್, ಮಡಿಕೇರಿ ಗ್ರಾಮಾಂತರ ಠಾಣಾ ಪ್ರಭಾರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ನಾಪೋಕ್ಲು ಠಾಣಾಧಿಕಾರಿ ಈ.ಮಂಜುನಾಥ್ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಭೂ ರಾಜಕೀಯ ಸ್ವಾಯತ್ತತೆಗೆ ಆಗ್ರಹಿಸಿ ಸಿಎನ್‌ಸಿ ಸತ್ಯಾಗ್ರಹ



ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಡಿಸಿ ಕಚೇರಿ ಎದುರು ಸತ್ಯಾಗ್ರಹ ನಡೆಸಿದರು.

ಮಡಿಕೇರಿ,ಮಾ.21– ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಜನಾಂಗೀಯ ತಾರತಮ್ಯ ನಿರ್ಮೂಲನಾ ದಿನವಾದ ಇಂದು ಜಿಲ್ಲಾಧಿಕಾರಿಗಳ ಕಚೇರಿ ಎದುರು ಶಾಂತಿಯುತ ಸತ್ಯಾಗ್ರಹ ನಡೆಸಿದ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಕೊಡವ ಲ್ಯಾಂಡ್ ಭೂ ರಾಜಕೀಯ ಸ್ವಾಯತ್ತತೆ ಸೇರಿದಂತೆ ವಿವಿಧ ಬೇಡಿಕೆಗಳ ಹಕ್ಕೊತ್ತಾಯವನ್ನು ಮಂಡಿಸಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ನೇತೃತ್ವದಲ್ಲಿ ಸತ್ಯಾಗ್ರಹ ನಡೆಸಿದ ಸಂಘಟನೆಯ ಸದಸ್ಯರು ಕೊಡವರ ಪರವಾದ ಬೇಡಿಕೆಗಳಿಗೆ ಸರ್ಕಾರ ತಕ್ಷಣ ಸ್ಪಂದಿಸಬೇಕು ಎಂದು ಒತ್ತಾಯಿಸಿದರು. ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿ ಮಾತನಾಡಿದ ಎನ್.ಯು. ನಾಚಪ್ಪ, ಸಿಎನ್‌ಸಿ ಸಂಘಟನೆ ಕಳೆದ 35 ವರ್ಷಗಳಿಂದ ಸಂವಿಧಾನ ಬದ್ಧವಾದ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಶಾಂತಿಯುತವಾಗಿ ಹೋರಾಟ ನಡೆಸುತ್ತಿದೆ. ಖ್ಯಾತ ಅರ್ಥಶಾಸ್ತ್ರಜ್ಞ ಡಾ.ಸುಬ್ರಮಣಿಯನ್ ಸ್ವಾಮಿ ಹಾಗೂ ಸಿಎನ್‌ಸಿ ಜಂಟಿಯಾಗಿ ಹೈಕೋರ್ಟ್‌ನಲ್ಲಿ ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆಯನ್ನು ಕೋರಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಸಲ್ಲಿಸಿದ್ದು ಕಾನೂನುಬದ್ಧ ಬೇಡಿಕೆ ಈಡೇರುವ ವಿಶ್ವಾಸವಿದೆ ಎಂದರು.

ಕೊಡವ ಜನಾಂಗವನ್ನು ಪರಿಶಿಷ್ಟ ಪಂಗಡ ಎಂದು ಗುರುತಿಸಬೇಕು. ಸಿಕ್ಕಿಂನಲ್ಲಿ ಬೌದ್ಧ ಸನ್ಯಾಸಿಗಳಿಗೆ ಮೀಸಲಾದ 'ಸಂಘ' ಕ್ಷೇತ್ರದಂತೆಯೇ ಸಂಸತ್ತು ಮತ್ತು ವಿಧಾನ ಸಭೆಯಲ್ಲಿ ಕೊಡವರಿಗೆ ಪ್ರಾತಿನಿಧ್ಯ ನೀಡಬೇಕು. ಅಂತರರಾಷ್ಟ್ರೀಯ ಕಾನೂನಿನಡಿಯಲ್ಲಿ ಕೊಡವರ ಹಕ್ಕುಗಳನ್ನು ಪರಿಗಣಿಸಬೇಕು. ಬ್ರಿಟಿಷರು, ಹೊರಗಿನ ರಾಜರು ಮತ್ತು ಆಡಳಿತ ವ್ಯವಸ್ಥೆ ವಶಪಡಿಸಿಕೊಂಡ ಅಥವಾ ಹೊರಗಿನವರಿಗೆ ಮಾರಾಟ ಮಾಡಿದ ಪೂರ್ವಜರ ಕೊಡವ ಭೂಮಿಯನ್ನು ಮರಳಿಸಬೇಕು. ಭಾರತೀಯ ಸಂವಿಧಾನದ 8ನೇ ಶೆಡ್ಯೂಲ್‌ನಲ್ಲಿ ಕೊಡವ ಭಾಷೆಯನ್ನು ಸೇರಿಸಬೇಕು. 4,500 ವರ್ಷಗಳ ಶ್ರೀಮಂತ ಇತಿಹಾಸವನ್ನು ಹೊಂದಿರುವ ಕೊಡವ ಜನಾಂಗದ ಕೊಡವ ಮಾತೃಭಾಷೆಗೆ ಅಧಿಕೃತ ಸ್ಥಾನಮಾನ ಮತ್ತು ರಕ್ಷಣೆಯನ್ನು ನೀಡಬೇಕು ಎಂದು ಆಗ್ರಹಿಸಿದರು.

ರೇಖಾ ನಾಚಪ್ಪ, ಕಲಿಯಂಡ ಪ್ರಕಾಶ್, ಅಳ್ಮಂಡ ಜೈ ಗಣಪತಿ, ಪಟ್ಟಮಾಡ ಕುಶ, ಅಜ್ಜಿಕುಟ್ಟಿರ ಲೋಕೇಶ್, ಬೊಟ್ಟಂಗಡ ಗಿರೀಶ್ ಇತರರು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಸಮಗ್ರ ತನಿಖೆಗೆ ಭಾರತ ಕಮ್ಯುನಿಸ್ಟ್ ಆಗ್ರಹ



ಜಿಲ್ಲಾ ಕಾರ್ಯದರ್ಶಿ ಟಿ.ಎಲ್.ಕೃಷ್ಣೇಗೌಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಂಡ್ಯ,ಮಾ.21– ಮಳವಳ್ಳಿ ತಾಲೂಕಿನ ಕಾಗೇಪುರ ಗ್ರಾಮದ ವಸತಿ ಶಾಲೆಯಲ್ಲಿ ಹೋಳಿ ಹಬ್ಬದ ಊಟ ಸೇವಿಸಿ ಮೇಘಾಲಯ ಮೂಲದ ಇಬ್ಬರು ವಿದ್ಯಾರ್ಥಿಗಳ ಸಾವಿನ ಪ್ರಕರಣದ ಸಮಗ್ರ ತನಿಖೆ ನಡೆಸಿ ತಪ್ಪಿಸ್ಥರಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಜಿಲ್ಲಾ ಕಾರ್ಯದರ್ಶಿ ಟಿ.ಎಲ್.ಕೃಷ್ಣೇಗೌಡ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸದರಿ ಮಕ್ಕಳ ಸಾವು ಸೈದ್ಧಾಂತಿಕ ಸಂಚಿನ ಫಲವಾಗಿದ್ದು, ರಾಜ್ಯದಲ್ಲಿ ಈ ರೀತಿ ಈಶಾನ್ಯ ರಾಜ್ಯಗಳಿಂದ 923ಕ್ಕೂ ಹೆಚ್ಚು ಮಕ್ಕಳಿದ್ದು, ವಿವಿಧ ವಸತಿ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಾಹಿತಿ ಇದೆ ಎಂದರು.

ಈಶಾನ್ಯ ರಾಜ್ಯಗಳಿಂದ ಕರೆತರುವ ಮಕ್ಕಳನ್ನು ದಾಸೋಸಕ್ಕೆ ಹೆಸರಾದ ಮಠ, ವಸತಿ ಶಾಲೆಗಳಲ್ಲದೇ, ವಸತಿ ವ್ಯವಸ್ಥೆಯೇ ಇಲ್ಲದ ಶಾಲೆಗಳಲ್ಲಿ ಕಲಿಯುತ್ತಿದ್ದು, ಈ ಮಕ್ಕಳಿಗೆ ಸೈದ್ಧಾಂತಿಕ ಮತ್ತು ದೊಣ್ಣೆ ಹಾಗೂ ಕತ್ತಿ ವರಸೆಯಂತಹ ಶಸ್ತ್ರಾಭ್ಯಾಸ ತರಬೇತಿ ನೀಡಲಾಗುತ್ತಿದೆ ಎಂದು ಆರೋಪಿಸಿದರು.

ಇದೀಗ ಸಾವಿಗೀಡಾದ ಮಕ್ಕಳು ಕಿರುಗಾವಲು ಶಾಲೆಯಲ್ಲಿ ದಾಖಲಾತಿ ಹೊಂದಿ ಕಾಗೇಪುರದ ಗೋಕುಲದಲ್ಲಿ ತರಬೇತಿ ಪಡೆಯುತ್ತಿದ್ದರು. ಗ್ರಾಮಗಳಲ್ಲಿ ನಡೆದ ಕಾರ್ಯಕ್ರಮಗಳ ಉಳಿದ ಊಟ ಇವರಿಗೆ ನೀಡಲಾಗುತ್ತಿತ್ತು. ಇವರನ್ನು ತೋರಿಸಿ ದಾನಿಗಳು ಮತ್ತು ಕಾರ್ಪೊರೇಟ್ ಸಂಸ್ಥೆಗಳಿಂದ ಹಣ ಸಂಗ್ರಹಿಸುವ ಹುನ್ನಾರು ಇರುವ ಸಾಧ್ಯತೆ ಇದೆ ಎಂದು ಅನುಮಾನ ವ್ಯಕ್ತಪಡಿಸಿದರು.

ಇಂತಹ ಮಕ್ಕಳನ್ನು ಕರೆತರುವ ಜಾಲದ ಹಿಂದೆ ಆರ್‌ಎಸ್‌ಎಸ್ ಸಂಘಟನೆಯ ಕೈವಾಡವಿರುವ ಸಾಧ್ಯತೆಗಳಿದ್ದು, ಮಕ್ಕಳ ಸಾಗಾಣೆ ಮಾಡುವ ಅಂತರಾಜ್ಯ ಜಾಲವೂ ಇದರಲ್ಲಿ ಕೂಡಿಕೊಂಡಿರುವುದಾಗಿ ಕಾಣುತ್ತಿದ್ದು, ಮಕ್ಕಳ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಗೋಕುಲ ಸಂಸ್ಥೆಯ ಮುಖ್ಯಸ್ಥ ಲಂಕೇಶ್ ಅವರನ್ನು ಮೊದಲ ಆರೋಪಿಯಾಗಿ ಮಾಡಿ, ಮಕ್ಕಳ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಸಮಿತಿಯ ಅಧ್ಯಕ್ಷರು ಎನ್‌ಸಿಪಿಸಿಆರ್ ಪ್ರಕಾರ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಬೇಕು. ಹಾಗೂ ಮೃತ ಮಕ್ಕಳ ಕುಟುಂಬಕ್ಕೆ ಸರ್ಕಾರ ತಲಾ 25 ಲಕ್ಷ ರೂ. ಪರಿಹಾರ ನೀಡಬೇಕು. ಸದರಿ ಪರಿಹಾರವನ್ನು ಲಂಕೇಶ್ ನಿಂದಲೇ ವಸೂಲಿ ಮಾಡಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ಭರತ್‌ರಾಜ್ .ಎನ್.ಎಲ್, ಸಿ.ಕುಮಾರಿ, ಸುಶೀಲ, ಹನುಮೇಶ್ ಇದ್ದರು.

ಕರ್ನಾಟಕ ಬಂದ್ ಬೆಂಬಲಿಸಲು ಮನವಿ

ಮಂಡ್ಯ,ಮಾ.21– ಅಖಂಡ ಕರ್ನಾಟಕ ಬಂದ್‌ಗೆ ಮಾ.22 ರಂದು ವಾಟಾಳ್ ನಾಗರಾಜ್ ಅವರ ನೇತೃತ್ವದಲ್ಲಿ 2000 ಕ್ಕೂ ಹೆಚ್ಚು ಕನ್ನಡಪರ ಸಂಘಟನೆಗಳು ಹಲವು ವಿಷಯಗಳನ್ನೊಳಗೊಂಡಂತೆ ಕರೆ ನೀಡಿದ್ದು, ಜಿಲ್ಲೆಯ ಜನರು, ವರ್ತಕರು ಬೆಂಬಲ ನೀಡಬೇಕೆಂದು ಕನ್ನಡ ಸೇನೆ ಕರ್ನಾಟಕದ ಜಿಲ್ಲಾಧ್ಯಕ್ಷ ಹೆಚ್.ಸಿ.ಮಂಜುನಾಥ್ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಬಂದ್ ಮೂಲಕ ರಾಜ್ಯದ ಪರವಾಗಿ ಆಗಬೇಕಾದ ವಿಷಯಗಳ ಕುರಿತು 17ಕ್ಕೂ ಹೆಚ್ಚು ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ಹೇಳಿದರು.

ಬೆಳಗಾವಿಯಲ್ಲಿ ಎಂಇಎಸ್ ಸಂಘಟನೆಯ ಪುಂಡರು ಪದೇ ಪದೇ ಕನ್ನಡಿಗರ ಮೇಲೆ ಹಲ್ಲೆ ಮಾಡುತ್ತಿದ್ದು, ರಾಜ್ಯದಲ್ಲಿ ಎಂಇಎಸ್ ಸಂಘಟನೆ ನಿಷೇಧ ಮಾಡಬೇಕು. ಬೆಂಗಳೂರಿಗೆ ಕುಡಿಯುವ ನೀರಿನ ಹೆಸರಲ್ಲಿ 6ನೇ ಹಂತದ ಯೋಜನೆ ಮೂಲಕ ರೈತರ ಒಂದು ಬೆಳೆಯ ನೀರನ್ನು ನೀಡಿ ರೈತರನ್ನು ಬೀದಿಗೆ ತಳ್ಳುವ ಯೋಜನೆ ಕೈ ಬಿಡಬೇಕು, ಡಾ.ಸರೋಜಿನಿ ಮಹಿಷಿ ವರದಿ ಜಾರಿ, ಮೇಕೆದಾಟು ಯೋಜನೆ ಪ್ರಾರಂಭ, ಮಹಾದಾಯಿ ಕಳಸ ಬಂಡೂರಿ ಕಾರ್ಯಗತಗೊಳಿಸುವುದು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಲಾಗುವುದು ಎಂದರು.

ಬಂದ್‌ಗೆ ಜಿಲ್ಲೆಯ ಎಲ್ಲಾ ನಾಗರೀಕರು, ವರ್ತಕರು, ಬೇಕರಿ ಮಾಲೀಕರು, ಆಟೋ ಚಾಲಕರು, ಬೀದಿ ಬದಿ ವ್ಯಾಪಾರಿಗಳು, ಲಾರಿ ಮಾಲೀಕರು, ಚಿನ್ನ ಮತ್ತು ಬೆಳ್ಳಿ ವರ್ತಕರು, ಎಲ್ಲಾ ಪಕ್ಷದ, ಸಂಘಟನೆಗಳ ನಾಯಕರು ಸಹಕಾರ ನೀಡಲಿದ್ದಾರೆ ಎಂದು ತಿಳಿಸಿದರು.

ಬಂದ್‌ಗೆ ಕರವೇ ನಾರಾಯಣಗೌಡರು ಬಂದ್‌ನಲ್ಲಿ ಪಾಲ್ಗೊಳ್ಳುವುದಿಲ್ಲ ಆದರೆ ನೈತಿಕ ಬೆಂಬಲ ನೀಡುವುದಾಗಿ ತಿಳಿಸಿದ್ದಾರೆ. ನಾಯಕರ ಬಿನ್ನಾಭಿಪ್ರಾಯವನ್ನು ನಾಯಕರುಗಳೇ ಸರಿ ಮಾಡಬೇಕಾಗಿದೆ. ಶಿವಾಜಿ ಜಯಂತಿ ಆಚರಣೆಗೆ ವಿರೋಧವಿಲ್ಲ, ಭಾಷೆ ಹೇರಿಕೆಯನ್ನು ಖಂಡಿಸುತ್ತೇವೆ. ಇಮ್ಮಡಿ ಪುಲಿಕೇಶಿ ಜಯಂತಿ ಆಚರಣೆಯಿಂದ ಕನ್ನಡಿಗರ ಹೆಮ್ಮೆ ಹೆಚ್ಚಲಿದ್ದು, ರಾಜ್ಯ ಸರ್ಕಾರ ಯಾವುದೇ ಭಾವನೆಗಳಿಗೆ ನೋವಾಗದಂತೆ ನಡೆದುಕೊಳ್ಳಬೇಕು ಎಂದು ಪ್ರಶ್ನೆಗೆ ಉತ್ತರ ನೀಡಿದರು.

ಗೋಷ್ಠಿಯಲ್ಲಿ ಕಾರ್ಯಾಧ್ಯಕ್ಷ ಎಂ.ಎಸ್. ಮಂಜುನಾಥ್, ರಾಜ್ಯ ಸಂಚಾಲಕ ಜಿ. ಮಹಂತಪ್ಪ ಶಿವಕುಮಾರ್, ಶಿವಾಜಿ, ಪವಿತ್ರ ನಾಗರಾಜ್, ಕಮ್ಮನಾಯಕನಹಳ್ಳಿ ಮಂಜುನಾಥ್, ಪ್ರಸನ್ನ, ವೇಣುಗೋಪಾಲ್ ಇದ್ದರು.

ಅಪಘಾತದಲ್ಲಿ ಗಾಯಗೊಂಡಿದ್ದ ವ್ಯಕ್ತಿ ಚಿಕಿತ್ಸೆ ಫಲಿಸದೆ ಸಾವು



ಪಾಂಡವಪುರ, ಮಾ.21– ಅಪಘಾತಕ್ಕೆ ಒಳಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತಾಲೂಕಿನ ಸೀತಾಪುರ ಗ್ರಾಮದ ಮೊಗ್ಗಣ್ಣೇಗೌಡ ಅಲಿಯಾಸ್ ಅಂಕೇಗೌಡ (80) ಶುಕ್ರವಾರ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಕಳೆದ ಬುಧವಾರ ಅಪಘಾತವಾಗಿ ಮೊಗ್ಗಣ್ಣೇಗೌಡ ತೀವ್ರವಾಗಿ ಗಾಯಗೊಂಡ ಪ್ರಜ್ಞಾಹೀನ ಸ್ಥಿತಿಗೆ ತಲುಪಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಚಿಕಿತ್ಸೆ ಫಲಕಾರಿಯಾಗದೆ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆಯು ಶುಕ್ರವಾರ ಸೀತಾಪುರ ಗ್ರಾಮದ ಹೊರವಲಯದ ಸ್ವಂತ ಜಮೀನಿನಲ್ಲಿ ಶುಕ್ರವಾರ ಸಂಜೆ ನಡೆಯಿತು. ಅಂತ್ಯಕ್ರಿಯೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿ ಅಂತಿಮ ದರ್ಶನಪಡೆದರು. ಮೃತರಿಗೆ ಪತ್ನಿ ಸಾವಿತ್ರಮ್ಮ, ನಾಲ್ವರು ಪುತ್ರರು, ಓರ್ವ ಪುತ್ರಿ, ಬಂಧುವರ್ಗ ಇದ್ದಾರೆ.


ಚೌಡಯ್ಯ ನಿಧನ



ಭಾರತೀನಗರ: ಇಲ್ಲಿಗೆ ಸಮೀಪದ ದೊಡ್ಡರಸಿನಕೆರೆ ಗ್ರಾಮದ ಚೌಡಯ್ಯ(ಗುಳ್ಳಪುಟ್ಟಯ್ಯ–77) ಅವರು ಅನಾರೋಗ್ಯದಿಂದ ನಿಧನಹೊಂದಿದ್ದಾರೆ. ಮೃತರಿಗೆ ಪತ್ನಿ ಪದ್ಮಮ್ಮ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರ ಸ್ವಗ್ರಾಮದ ರುದ್ರಭೂಮಿಯಲ್ಲಿ ಜರುಗಿತು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಆರಂಭ

ಮೊದಲ ದಿನ 1981 ಮಂದಿ ಹಾಜರು



ಶ್ರೀರಂಗಪಟ್ಟಣ, ಮಾ,21– ಶೈಕ್ಷಣಿಕ ಜೀವನದ ಪ್ರಮುಖ ಘಟ್ಟಗಳಲ್ಲಿ ಒಂದಾದ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆ ಶುಕ್ರವಾರದಿಂದ ಆರಂಭವಾಗಿದ್ದು, ಶ್ರೀರಂಗಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಒಟ್ಟು 1981 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ತಾಲೂಕಿನಾದ್ಯಂತ ಒಟ್ಟು 2032 ವಿದ್ಯಾರ್ಥಿಗಳು ಎಸ್‌ಎಸ್‌ಎಲ್ ಪರೀಕ್ಷೆ ಬರೆಯಲು ನೋಂದಣಿಯಾಗಿದ್ದು, ಇದರಲ್ಲಿ 1997 ವಿದ್ಯಾರ್ಥಿಗಳು ಮಾತ್ರ ಅರ್ಹತೆ ಹೊಂದಿದ್ದಾರೆ. ಈ ಪೈಕಿ 16 ವಿದ್ಯಾರ್ಥಿಗಳು ಗೈರಾಗಿದ್ದರಿಂದ ಒಟ್ಟಾರೆ 1981 ಮಕ್ಕಳು ಪರೀಕ್ಷೆ ಹಾಜರಾಗಿದ್ದರು.

ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜು, ರಿವರ್‌ವ್ಯಾಲಿ ಶಿಕ್ಷಣ ಸಂಸ್ಥೆ, ಓಂ ಶ್ರೀನಿಕೇತನ ಶಾಲೆ, ತಾಲೂಕಿನ ಕಿರಂಗೂರು ಗ್ರಾಮದ ಕೇಂಬ್ರಿಡ್ಜ್ ಪಬ್ಲಿಕ್ ಶಾಲೆ, ಮಹದೇವಪುರದ ಎಂ.ಕೆ. ಆನಂದಾಳ್ವಾರ್ ಶಾಲೆ, ಅರಕೆರೆ ಕರ್ನಾಟಕ ಪಬ್ಲಿಕ್ ಶಾಲೆ, ಕೆಆರ್‌ಎಸ್ ಸರ್ಕಾರಿ ಜೂನಿಯರ್ ಕಾಲೇಜು ಮತ್ತು ಬೆಳಗೊಳ ಸರ್ಕಾರಿ ಜೂನಿಯರ್ ಕಾಲೇಜುಗಳಲ್ಲಿ ಪರೀಕ್ಷೆ ನಡೆದಿದ್ದು, ಮೊದಲ ದಿನವೇ ಪ್ರಥಮ ಭಾಷಾ ವಿಷಯ ಪರೀಕ್ಷೆ ಸುಸೂತ್ರವಾಗಿ ನಡೆಯಿತು. ಎಲ್ಲಾ ಕೇಂದ್ರಗಳಲ್ಲಿ ಅಕ್ರಮ ತಡೆಯುವ ಉದ್ದೇಶದಿಂದ ಪ್ರತಿ ಕೊಠಡಿಗೆ ಸಿಸಿ ಟಿವಿ ಕ್ಯಾಮೆರಾ ಅಳವಡಿಸಲಾಗಿತ್ತು. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಒಬ್ಬರು ಮುಖ್ಯ ಅಧೀಕ್ಷಕರು ಮತ್ತು ಸಿಟ್ಟಿಂಗ್ ಸ್ಕ್ವಾಡ್‌ಗಳನ್ನು ನಿಯೋಜಿಸಿದ್ದಾಗಿ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಪಿ. ಮಹೇಶ್ ಮಾಹಿತಿ ನೀಡಿದರು.

ಬ್ರೇಕ್ ವಿಫಲಗೊಂಡು ಟ್ರಾಕ್ಟರ್‌ಗೆ ಲಾರಿ ಡಿಕ್ಕಿ

ಲಾರಿ ಟ್ರಾಕ್ಟರ್ ಜಖಂ

ಭಾರತೀನಗರ, ಮಾ.21– ಲಾರಿಯ ಬ್ರೇಕ್ ವಿಫಲಗೊಂಡು ಟ್ರ್ಯಾಕ್ಟರ್‌ನ ಟ್ರೈಲರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಟ್ರ್ಯಾಕ್ಟರ್ ಮತ್ತು ಲಾರಿ ಎರಡು ಜಖಂಗೊಂಡಿರುವ ಘಟನೆ ಸಮೀಪದ ಮಣಿಗೆರೆ ಗ್ರಾಮದಲ್ಲಿ ಜರುಗಿದೆ.

ಮಣಿಗೆರೆ ಗ್ರಾಮದ ರಮೇಶ್ ಮದ್ದೂರು –ಮಳವಳ್ಳಿ ಹೆದ್ದಾರಿಯ ರಸ್ತೆ ಬದಿಯಲ್ಲಿ ಜಲ್ಲಿ ತುಂಬಲು ಟ್ರ್ಯಾಕ್ಟರ್‌ನ್ನು ನಿಲ್ಲಿಸಿದ್ದರು. ಮಳವಳ್ಳಿ ಮಾರ್ಗವಾಗಿ ಬರುತ್ತಿದ್ದ ಲಾರಿಯೊಂದು ಬ್ರೇಕ್ ವಿಫಲಗೊಂಡು ಟ್ರ್ಯಾಕ್ಟರ್‌ಗೆ ಡಿಕ್ಕಿ ಹೊಡೆದು ಕೆ.ಪಿ.ದೊಡ್ಡಿ ಗ್ರಾಮದಲ್ಲಿ ಹೋಗಿ ಲಾರಿ ನಿಂತಿದೆ.

ಬಿಸಿಲಿನ ತಾಪಮಾನಕ್ಕೆ ಜನರ ಸಂಚಾರ ಕಡಿಮೆ ಇದ್ದ ಕಾರಣ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಕೆ.ಎಂ.ದೊಡ್ಡಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಶುಕ್ರವಾರ ಸಂಜೆ 4 ಗಂಟೆಯಲ್ಲಿ ಪರಿಶೀಲನೆ ನಡೆಸಿದರು.

ರೈತರ ಅಭ್ಯುದಯಕ್ಕೆ 505 ಕೋಟಿಯ ಪೈಲಟ್ ಪ್ರಾಜೆಕ್ಟ್‌ಗೆ ಶಾಸಕ ಎಆರ್‌ಕೆ ಆಗ್ರಹ



ಎ.ಆರ್. ಕೃಷ್ಣಮೂರ್ತಿ

ಕೊಳ್ಳೇಗಾಲ, ಮಾ.21 ರೈತರ ಅಭ್ಯುದಯಕ್ಕಾಗಿ ಸರ್ಕಾರ 505 ಕೋಟಿ ರೂ. ಪೈಲಟ್ ಪ್ರಾಜೆಕ್ಟ್ ಯೋಜನೆಗೆ ಆದ್ಯತೆ ನೀಡುವ ಮೂಲಕ ಜಿಲ್ಲೆಯ ರೈತರ ಹಿತ ಕಾಯಬೇಕು ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ಸದನದಲ್ಲಿ ಆಗ್ರಹಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಉಪ ಮುಖ್ಯಮಂತ್ರಿಗಳ ಭರವಸೆಯಂತೆ ಎಚ್.ಡಿ ಕೋಟೆಯಿಂದ 8 ಕ್ಷೇತ್ರಗಳ ಮೂಲಕ ಹಾದು ಬರುವ ಈ ಯೋಜನೆಗೆ ಎಂಟು ನೂರು ಕೋಟಿ ಒದಗಿಸಲು ಸರ್ಕಾರ ಮುಂದಾಗಬೇಕು, ಕೊಳ್ಳೇಗಾಲದ ಪ್ರಮುಖ ರಸ್ತೆಗಳಾದ ರಾಜ್‌ಕುಮಾರ ರಸ್ತೆ ಮತ್ತು ಅಂಬೇಡ್ಕರ್ ರಸ್ತೆ ಅಗಲಿಕರಣಕ್ಕೆ ಸರ್ಕಾರ ಅನುಧಾನ ನಿಗದಿ ಮಾಡಬೇಕು, ಅತೀ ಜರೂರಾಗಿ ಮುಡಿಗುಂಡ ಸೇತುವೆ ಮರು ನಿರ್ಮಾಣವಾಗಬೇಕು ಕೊಳ್ಳೇಗಾಲ ಕ್ಷೇತ್ರ ಮಾತ್ರವಲ್ಲ, ಜಿಲ್ಲೆಯ ಸಮಗ್ರ ಅಭಿವೃದ್ಧಿ ಕುರಿತ ಯೋಜನೆ ಜಾರಿಗೆ ಸರ್ಕಾರವನ್ನು ಆಗ್ರಹಿಸಿದರು. ಇತ್ತೀಚೆಗೆ ಮುಖ್ಯಮಂತ್ರಿಗಳು ಮಂಡಿಸಿದ ಬಜೆಟ್‌ನಲ್ಲಿ ಚಾ.ನಗರ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿಲ್ಲ, ಹಾಗಾಗಿ ಜಿಲ್ಲಾಭಿವೃದ್ಧಿಗೆ ಯೋಜನೆ ಜಾರಿಗೆ ಆದ್ಯತೆ ನೀಡುವಂತೆ ಸದನದಲ್ಲಿ ಶಾಸಕರು ಮನವಿ ಮಾಡಿದರು

ರೇಷ್ಮೆ ನಗರ ವೈಭವ ಮರುಕಳಿಸಲಿ: ಚಾ.ನಗರ ಗಡಿ ಜಿಲ್ಲೆಯಾಗಿದ್ದು ನಂಜುಂಡಪ್ಪ ಅವರ ವರದಿ ಗಮನಿದರೆ ಇದೊಂದು ಹಿಂದುಳಿದ ಜಿಲ್ಲೆಯಾಗಿದ್ದು ಈ ಭಾಗದ ಜಿಲ್ಲೆಯ ರೈತಾಪಿ ವರ್ಗಕ್ಕೆ ನ್ಯಾಯ ಸಲ್ಲಿಸುವ ನಿಟ್ಟಿನಲ್ಲಿ ನೀರಾವರಿ ಯೋಜನೆಗೆ ಆದ್ಯತೆ ನೀಡಿ ರೈತಾಪಿ ವರ್ಗಗಳ ಹಿತ ಕಾಯಬೇಕು. ಆ ಮೂಲಕ ಎಂಟು ನೂರು ಕೋಟಿ ಈಯೋಜನೆಗೆ ಒದಗಿಸಬೇಕು, ಕೊಳ್ಳೇಗಾಲ ಕ್ಷೇತ್ರ ವ್ಯಾಪ್ತಿಯಲ್ಲಿ ಹಿಂದಿದ್ದ ರೇಷ್ಮೆ ನಗರಿ. ವೈಭವ ಮತ್ತೆ ಮರುಕಳಿಸಬೇಕು, ರೇಷ್ಮೆ ಕಾರ್ಖಾನೆಗಳ ಪುನಶ್ಚೇತನಕ್ಕೆ ಆಗ್ರಹಿಸಿದರು. ಚಾ.ನಗರ ವಿಶ್ವವಿದ್ಯಾನಿಲಯವನ್ನು ಉಳಿಸುವ ಮೂಲಕ ಅದಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೆಸರನ್ನು ಮರು ನಾಮಕರಣಗೊಳಿಸಬೇಕು, ಕೊಳ್ಳೇಗಾಲದ ಕುಪ್ಪಮ್ಮ ಕಾಲುವೆ ಸಮಗ್ರ ಅಭಿವೃದ್ದಿಯಾಗಬೇಕು, ಅಲ್ಲಿನ ಹೂಳು ತೆಗೆಸಿ ಅಭಿದ್ಧಿಗೆ ಮುಂದಾಗುವಂತೆ ಚರ್ಚಿಸಿದರು.

ಕೆರೆಗಳ ಅಭಿವೃದ್ಧಿ: ಕ್ಷೇತ್ರದ ಕುರುಬನಕ್ಕೆ, ಬಿಳಿಗಿರಿರಂಗನಬೆಟ್ಟ ಪ್ರವಾಸಿ ತಾಣ ಉತ್ತಮ ರೀತಿ ಅಬಿವೃದ್ಧಿಗೆ ಸರ್ಕಾರ ಗಮನಹರಿಸಬೇಕು, ಆಮೂಲಕ ಧಾರ್ಮಿಕ ಕ್ಷೇತ್ರಗಳ ಅಭಿವೃದ್ಧಿಗೆ ಹೆಚ್ಚಿನ ಅನುಧಾನ ಒದಗಿಸಬೇಕು, ಹೊಂಗನೂರು ಮತ್ತು ನವಿಲೂರಿನಲ್ಲಿ ಕಾಲೇಜು ಪ್ರಾರಂಭ ಆಗಬೇಕು ಎಂದು ಸದನದ ಗಮನ ಸೆಳೆದರು

ಉಪ ವಿಭಾಗಕ್ಕೊಂದು ಜಿಲ್ಲಾಸ್ಪತ್ರೆ ವಿಚಾರದಲ್ಲಿ ಆಸ್ಪತ್ರೆಯನ್ನು ಕೊಳ್ಳೇಗಾಲಕ್ಕೆ ಕಲ್ಪಿಸಿಕೊಡುವಂತೆ ಸರ್ಕಾರಕ್ಕೆ ಮನವಿ ಮಾಡಿ ಸಮಾಜ ಕಲ್ಯಾಣ ಇಲಾಖೆಗೆ ಹೆಚ್ಚಿನ ಅನುಧಾನ ನೀಡುವ ಮೂಲಕ ಗರಿಜನ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಸ್ಪಂದಿಸುವಂತೆ, ವಿಕಲಚೇತನರಿಗೆ ಸೂಕ್ತ ಸೌಲಭ್ಯ ಒದಗಿಸಬೇಕು ಎಂದು ಶಾಸಕ ಎಆರ್‌ಕೆ ಒತ್ತಾಯಿಸಿದರು.

ಹಿಟ್ ಅಂಡ್ ರನ್ ಕೇಸ್ ಸಂತ್ರಸ್ತರಿಗೆ ಪರಿಹಾರ ಉಂಟು!



ಶಿಲ್ಪಾ ನಾಗ್

ಚಾಮರಾಜನಗರ, ಮಾ.21– ಹಿಟ್ ಮತ್ತು ರನ್ ಅಪಘಾತದಲ್ಲಿ ಮರಣ ಹೊಂದಿದ ಸಂಬಂಧಿಕರು ಮತ್ತು ಗಾಯಗೊಂಡವರು ಪರಿಹಾರ ಮೊತ್ತವನ್ನು ಪಡೆಯಲು ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಅರ್ಜಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ತಿಳಿಸಿದ್ದಾರೆ.

2022ರ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಸದರಿ ಯೋಜನೆಯನ್ನು ವರ್ಧಿಸಲು ಹಾಗೂ ರಸ್ತೆ ಅಪಘಾತಗಳ ಹಿಟ್ ಮತ್ತು ರನ್ ಪ್ರಕರಣಗಳಲ್ಲಿ ಗಾಯಗೊಂಡವರಿಗೆ ಐವತ್ತು ಸಾವಿರ ರೂ.ಗಳನ್ನು ಮತ್ತು ಮೃತಪಟ್ಟವರ ಅವಲಂಭಿತ ಕುಟುಂಬ ಸದಸ್ಯರಿಗೆ ಎರಡು ಲಕ್ಷ ರೂ.ಗಳ ಪರಿಹಾರ ಮೊತ್ತವನ್ನು ಈ ಯೋಜನೆಯಡಿಯಲ್ಲಿ ಪಡೆದುಕೊಳ್ಳಬಹುದು.

ಸಾರ್ವಜನಿಕರು ಪರಿಹಾರದ ಅನುಕೂಲವನ್ನು ಪಡೆದುಕೊಳ್ಳಲು ಸಮಿತಿಯನ್ನು ರಚಿಸಲಾಗಿರುತ್ತದೆ. ಅದರಂತೆ ಕ್ಲೈಮ್ಸ್ ಸೆಟ್ಲ್‌ಮೆಂಟ್ ಕಮಿಷನರ್ ಆಗಿ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು/ಪೊಲೀಸ್ ಉಪಾಧೀಕ್ಷಕರು, ಕ್ಲೈಮ್ಸ್ ಸೆಟ್ಲ್‌ಮೆಂಟ್ ಎನ್‌ಕ್ವೈರಿ ಆಫೀಸರ್ ಆಗಿ ಉಪವಿಭಾಗಾಧಿಕಾರಿಗಳು, ಜಿಲ್ಲಾ ಶಸ್ತ್ರ ಚಿಕಿತ್ಸಕರು ಹಾಗೂ ಅಧೀಕ್ಷಕರು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ರಸ್ತೆ ಸುರಕ್ಷತೆಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಯ ಸದಸ್ಯರಾದ ನಗರದ ರೋಟರಿ ಸಿಲ್ಕ್, ಸಿಟಿಯ ಮಾಜಿ ಅಧ್ಯಕ್ಷರಾದ ಡಿ.ಎಸ್ ಗಿರೀಶ್, ಸಮಿತಿಯ ಸದಸ್ಯರಾಗಿದ್ದಾರೆ. ಸದಸ್ಯ ಕಾರ್ಯದರ್ಶಿಗಳಾಗಿ ಮೈಸೂರಿನ ಯುನೈಟೆಡ್ ಇಂಡಿಯಾ ಇನ್ಸುರೆನ್ಸ್ ಕಂಪನಿ ಲಿಮಿಟೆಡ್ ಅಧಿಕಾರಿ ಶಿವಪ್ರಸಾದ್ ನೇಮಕವಾಗಿದ್ದಾರೆ.

ಹಿಟ್ ಮತ್ತು ರನ್ ಅಪಘಾತದಲ್ಲಿ ಮರಣ ಹೊಂದಿದ ವಾರಸುದಾರರು ಹಾಗೂ ಗಾಯಗೊಂಡವರು ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಚೇರಿ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ: 08226–223160, ಮೊ.ಸಂ: 9740942901 ಹಾಗೂ ಪೊಲೀಸ್ ಇಲಾಖೆಯ ಕಂಟ್ರೋಲ್ ರೂಂ ದೂ.ಸಂ: 08226–222383, ಮೊ.ಸಂ.: 9480804600 ಅನ್ನು ಸಂಪರ್ಕಿಸುವಂತೆ ಜಿಲ್ಲಾಧಿಕಾರಿಗಳಾದ ಶಿಲ್ಪಾ ನಾಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಸ್ತೂರು ಗ್ರಾಮದಲ್ಲಿ ಗ್ರಾಮ ನೀರು ಸರಬರಾಜು ತರಬೇತಿ ಕಾರ್ಯಕ್ರಮ



ಜಲ ಜೀವನ್ ಮಿಷನ್ ವತಿಯಿಂದ ಗ್ರಾಮೀಣ ಕುಡಿಯುವ ನೀರಿನ ಬಗ್ಗೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಯಳಂದೂರು, ಮಾ.21– ತಾಲೂಕಿನ ಕೆಸ್ತೂರು ಗ್ರಾಮದ ಪಂಚಾಯತಿ ಸಭಾಂಗಣದಲ್ಲಿ ಜಿಲ್ಲಾ ಪಂಚಾಯತ್ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಸ್ವಚ್ಛ ಭಾರತ್ ಮಿಷನ್, ಜಲ ಜೀವನ್ ಮಿಷನ್ ವತಿಯಿಂದ ಶುಕ್ರವಾರ ಗ್ರಾಮ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯ ಪದಾಧಿಕಾರಿಗಳಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಗ್ರಾಮ ಅಭಿವೃದ್ಧಿ ಅಧಿಕಾರಿ ಮಹದೇವಸ್ವಾಮಿ ಮಾತನಾಡಿ, ಪ್ರತಿಯೊಂದು ಗ್ರಾಮವೂ ನೈರ್ಮಲ್ಯದಿಂದ ಕೂಡಿರಬೇಕು. ಗ್ರಾಮಗಳು ಅಭಿವೃದ್ಧಿ ಹೊಂದಿದರೆ ದೇಶ ಅಭಿವೃದ್ಧಿ ಹೊಂದುತ್ತದೆ ನಾವು ಗ್ರಾಮದಲ್ಲಿ ಅಭಿವೃದ್ಧಿ ಕಾರ್ಯಗಳ ಜೊತೆಗೆ ಸ್ವಚ್ಛತೆ ಮತ್ತು ಉತ್ತಮ ಆರೋಗ್ಯ ನಿರ್ಮಾಣ ಮಾಡುವುದಕ್ಕೆ ನಾವೆಲ್ಲರೂ ಕಾರ್ಯಪ್ರವೃತ್ತರಾಗಬೇಕಾಗಿದೆ ಎಂದರು.

ಜಲಜೀವನ್ ಮಿಷನ್ ಯೋಜನೆಯಿಂದ ಗ್ರಾಮದಲ್ಲಿ ನೀರಿನ ಸಮಸ್ಯೆ ಕಡಿಮೆಯಾಗಿದೆ ಹಾಗೂ ನೀರು ಬಳಕೆಯಲ್ಲಿ ಜಾಗೃತಿ ಮುಖ್ಯವಾಗಿದೆ. ನಮ್ಮ ಕೆಸ್ತೂರು ಗ್ರಾಮ ಪಂಚಾಯತಿ ಬಯಲು ಮುಕ್ತವಾಗಿದೆ ಹಾಗೂ ಸ್ವಚ್ಚತೆಯಲ್ಲಿಯೂ ಕೂಡ ಬದಲಾವಣೆಯಾಗಿದೆ ಎಂದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅನುಷ್ಠಾನ ಅಧಿಕಾರಿಯಾಗಿರುವ ರಂಗಸ್ವಾಮಿ ನಾಯಕ್‌ರವರು ತರಬೇತಿ ನೀಡಿದರು. ಅಧ್ಯಕ್ಷರು, ಉಪಾಧ್ಯಕ್ಷರು ಕಾರ್ಯದರ್ಶಿಗಳು, ಮಹಿಳೆಯರು, ಅಂಗನವಾಡಿ ಕಾರ್ಯಕರ್ತೆಯರು ಸಮಿತಿಯಲ್ಲಿ ಪದಾಧಿಕಾರಿಗಳಾಗಿದ್ದಾರೆ.

ಗ್ರಾಪಂ ಅಧ್ಯಕ್ಷೆ ದೊಡ್ಡತಾಯಮ್ಮ, ಸಮಾಲೋಚಾನ ಅಧಿಕಾರಿ ಮಹೇಶ್, ಸದಸ್ಯ ರಾಜು, ಸದಸ್ಯರು, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಹಾಜರಿದ್ದರು.

ನೀರಿನ ಪೈಪ್‌ಲೈನ್ ಮಾರ್ಗದಲ್ಲಿ ಸೋರಿಕೆ ಕಂಡು ಬಂದರೆ ಮಾಹಿತಿ ನೀಡಿ

ಚಾಮರಾಜನಗರ, ಮಾ.21– ಗುಂಡ್ಲುಪೇಟೆ ಪಟ್ಟಣ ವ್ಯಾಪ್ತಿಯ ಹಲವು ಬಡಾವಣೆಗಳಿಗೆ ಕಬಿನಿ ನದಿಯಿಂದ ಹೊಸ ಪೈಪ್‌ಲೈನ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದ್ದು, ಸದರಿ ಪೈಪ್ ಲೈನ್ ಮಾರ್ಗದಲ್ಲಿ ಸೋರಿಕೆ ಕಂಡುಬಂದಲ್ಲಿ ಪುರಸಭೆ ಕಚೇರಿಗೆ ತುರ್ತಾಗಿ ಮಾಹಿತಿ ನೀಡುವಂತೆ ಮನವಿ ಮಾಡಲಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ

Degree ಕ್ಷೇತ್ರ ಕೆಲಸಗಾರರು (Field Worker) ರಾಜ್ಯಾದ್ಯಂತ ವಲಯವಾರು ಕರ್ತವ್ಯ ನಿರ್ವಹಿಸಲು ಬೇಕಾಗಿದ್ದಾರೆ. ಮಾಹಿಕ ರೂ.25,000 ರಿಂದ 30,000ವರೆಗೆ ದುಡಿಯುವ ಅವಕಾಶವಿರುತ್ತದೆ ಸಂಪರ್ಕಿಸಿ

9851999432 9886936905

4 ದಿನ ಶಿರಡಿ ಸ್ಪೆಷಲ್ ರೈಲಿನಲ್ಲಿ ಸ್ಲೀಪರ್ ಕ್ಲಾಸ್

ಹೊರಡುವ ದಿನ: 8ನೇ ಜೂನ್ ಶಿರಡಿ, ಶನಿಸಿಂಗನಾಪುರ, ತ್ರಯಂಬಕೇಶ್ವರ್, ಸಪ್ತಶೃಂಗಿ ಮಾತಾ, ಗೃಷ್ಣೇಶ್ವರ, ಎಲ್ಲೋರಾ, ಭದ್ರ ಮಾರುತಿ, ಮಿನಿ ತಾಜ್ ಮಹಲ್. ಊಟ, ವಸತಿ ಸೇರಿ ಒಬ್ಬರಿಗೆ 4800/– ಸಂಪರ್ಕಿಸಿ: ಗ್ಲೋಬಲ್ ಟೂರ್ಸ್

Mob: 9902026007

MUDA SITE FOR SALE

ಇನ್ಫೋಸಿಸ್ ಪಕ್ಕ "KBL ಸಿಲಿಕಾನ್ ಸಿಟಿ" 30'x40', 32x60' ಸೈಟ್

Mob: 9886048471

ಬೇಕಾಗಿದ್ದಾರೆ

ರಿಯಲ್ ಎಸ್ಟೇಟ್ ಸಂಸ್ಥೆಗೆ ಮಾರ್ಕೆಟಿಂಗ್‌ಗಾಗಿ ಆಫೀಸ್ ಬಾಯ್ ದ್ವಿಚಕ್ರ ವಾಹನ ಕಡ್ಡಾಯ. ಕಛೇರಿ: ಆನಂದನಗರ, ನ್ಯೂ ಕಾಂತರಾಜ್ ಅರಸ್ ರಸ್ತೆ, ಮೈಸೂರು

Mob: 9620461052

ಬೋಳು ತಲೆಯ ಸಮಸ್ಯೆಯೇ?



SMART HAIR FIXING

574, 9th Cross, Anikethana Road, kuvempunagar, Mysuru

MYSURU 9611028523 BANGALORE 9343142258

Sri Murugan Pharma @ Vijayanagar 3rd Stage

REQUIRED STAFFS

Freshers and Experienced

Attractive Salary

Call: 99802 53762

Email: srimuruganpharmacy mysuru@gmail.com

MUDA SITE FOR SALE

ದಟ್ಟಗಳ್ಳಿ ರಿಂಗ್ ರೋಡ್ ಪಕ್ಕ 'ಅಶ್ವತ್ಥಾಮ ಲೇಔಟ್' 40'x60' ಈಸ್ಟ್ ಫೇಸಿಂಗ್ ಸೈಟ್. ಬೆಲೆ: 5000/- per sq.ft.

Mob: 9886048471

ತಕ್ಷಣ ಬೇಕಾಗಿದ್ದಾರೆ

ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಮಹಿಳೆಯರು ಬೇಕಾಗಿದ್ದಾರೆ. ಸ್ಥಳ: ನಜರ್‌ಬಾದ್ ಮತ್ತು ಅಗ್ರಹಾರ, ಮೈಸೂರು ಸಮಯ: ಬೆಳಿಗ್ಗೆ 9:30 ರಿಂದ ರಾತ್ರಿ 8:30/09:00 ವರೆಗೆ, ಸ್ಥಳೀಯರಿಗೆ ಆದ್ಯತೆ ಸಂಬಳ: 10,000 ದಿಂದ ಪ್ರಾರಂಭ

9986311444,9986322444

ವಧು–ವರಾನ್ವೇಷಣೆ

ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)

9343175000

ಫಂಕ್ಷನ್ ಹಾಲ್ ತಿಂಗಳಗೆ ಬಾಡಿಗೆಗೆ / ಭೋಗ್ಯಕ್ಕೆ



ಸರ್ಕಾರಿ ಆಸ್ಪತ್ರೆ ಮುಖ್ಯ ರಸ್ತೆ, ತಿ.ನರಸೀಪುರ

9448390643

ನಮ್ಮಲ್ಲಿ ಬಾದಾಮಿ, ಗೋಡಂಬಿ, ಪಿಸ್ತಾ, ಅಂಜೂರ, ಒಣದ್ರಾಕ್ಷಿ, ಖರ್ಜೂರ, ಮುಂತಾದ ಡ್ರೈಫ್ರೂಟ್ಸ್ ದೊರೆಯುತ್ತದೆ. (5 ಕಿ.ಮೀ ವರೆಗೂ ಉಚಿತ ಡೆಲಿವರಿ) ಸಂಪರ್ಕಿಸಿ: ರಾಜ್ ಗುರು ಡ್ರೈಫ್ರೂಟ್ಸ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು

7022293342 9845460211



Solar Water Heater SALES & SERVICE

SUNZONE SOLAR SYSTEM

VM Double Road, Kuvempunagar, Mysuru

9845175443

ಸಿಪಾಯಿ ಕನ್‌ಸ್ಟ್ರಕ್ಷನ್ಸ್

2 ಅಂತಸ್ತಿನ ಹೊಸ ಮನೆ ಮಾರಾಟಕ್ಕಿದೆ ಇಲವಾಲ ಸೆಂಟ್ ಜೋಸೆಫ್ ಸ್ಕೂಲ್, ಆಚಾರ್ಯ ವಿದ್ಯಾಕುಲ ಸ್ಕೂಲ್ ಹಿಂಭಾಗ, ನಿತ್ಯಾನಂದ ಸಾಗರ್ ಮುಡಾ ಬಡಾವಣೆಯಲ್ಲಿ 30x40 ಅಳತೆಯ ಈಸ್ಟ್ ಫೇಸ್, ಬೋರ್‌ವೆಲ್, 3 ಬೆಡ್ ರೂಂ ಅಟ್ಯಾಚ್ಡ್ ಬಾತ್ ರೂಂ, ಫುಲ್ ಫರ್ನಿಷಡ್‌ನ ಹೊಸ ಮನೆ ಮಾರಾಟಕ್ಕಿದೆ. ಬೆಲೆ 90 ಲಕ್ಷ, ನೆಗೋಷಿಯಬಲ್.

ನಂಜುಂಡಸ್ವಾಮಿ (ಮಾಜಿ ಸೈನಿಕರು)

9483862050, 7829779070

ಸಿಪಾಯಿ ಪ್ರಾಪರ್ಟೀಸ್

ಇಲವಾಲದಿಂದ ಶ್ರೀರಂಗಪಟ್ಟಣಕ್ಕೆ ಹೋಗುವ ಬೈಪಾಸ್ ರಸ್ತೆ ಮತ್ತು ಪೆರಿಫೆರಲ್ ರಿಂಗ್ ರಸ್ತೆಯಲ್ಲಿರುವಂತಹ BSR ಲೇಔಟ್‌ನಲ್ಲಿ 30x40 ಅಳತೆಯ ನಾರ್ತ್ ಫೇಸ್ ಸೈಟು ಮಾರಾಟಕ್ಕಿದೆ. ಬೆಲೆ 40 ಲಕ್ಷ, ನೆಗೋಷಿಯಬಲ್.

ನಂಜುಂಡಸ್ವಾಮಿ (ಮಾಜಿ ಸೈನಿಕರು)

9483862050, 7829779070

ಮನೆ ಬಾಡಿಗೆಗೆ ಇದೆ

1BHK, 2nd Floor ಕುವೆಂಪುನಗರ, ಮೈಸೂರು

9591198274

HOUSE FOR SALE

B-Khata
20x30 West Face North Door
Ground Floor 1 BHK
First Floor 4 BHK Duplex House
Near Sai baba Temple
Ramakrishna Nagar E&F Block, Mysore

9590033909,9731545495

ಮನೆಯನ್ನು ಕಟ್ಟಿಕೊಡಲಾಗುತ್ತದೆ

ಹೊಸ ಮನೆ ಕಟ್ಟಬೇಕೇ? ಚಿಂತೇ ಬೇಡ? ಒಂದು ಚದರಕ್ಕೆ 1,75,000/– ರೂ. ನಂತೆ ಮಂಡ್ಯ, ಮೈಸೂರಿನ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕುಗಳ ಸಿಟಿ ಹಾಗೂ ಹಳ್ಳಿಗಳಲ್ಲಿ ಕಟ್ಟಿಕೊಡಲಾಗುವುದು.

9620377533

PAY 25 LAKHS & OWN YOUR DREAM HOME

Rest with Easy EMI
Vastu & Architectural Built
20X30 North Facing
2/3/4 BHK Duplex Houses
Starts from Rs. 60/90/95 Lakhs
Fully Furnished, Ready to Move in
50 Mtrs from Ring Road, Next to Police Layout

98800 65122 / 76193 99919

FOR RENT

COMMERCIAL SPACE
2nd & 3rd FLOOR
2500 Sq.ft
LIFT & PARKING FACILITY

MOB : 9448177117

ಉಚಿತ ಮದ್ಯ ವರ್ಜನ ಶಿಬಿರ

ಮೈಸೂರು: ನಗರದ ಶ್ರೀರಾಂಪುರದಲ್ಲಿನ ಚೈತನ್ಯ ಫೌಂಡೇಷನ್‌ನ ಎರಡನೇ ವಾರ್ಷಿಕೋತ್ಸವದ ಪ್ರಯುಕ್ತ ಮಾ. 24 ರಿಂದ 21 ದಿನಗಳ ಕಾ ಸಂಪೂರ್ಣ ಉಚಿತ ಕುಡಿತ ಮತ್ತು ಮಾದಕ ವಸ್ತು ಬಿಡಿಸುವ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಊಟ, ವಸತಿಯೊಂದಿಗೆ ವೈದ್ಯರಿಂದ ಚಿಕಿತ್ಸಾ ಸೌಲಭ್ಯ,ಯೋಗ, ಧ್ಯಾನದೊಂದಿಗೆ ಆಪ್ತ ಸಮಾಲೋಚನೆ ಸಿಗಲಿದೆ. ಹೆಚ್ಚಿನ ಮಾಹಿತಿಗೆ

6361744190,9164469570

WANTED

We are Hiring Professional CAR Driver & BUS Driver

Call : 8105305827 / 8748991416

ಮನೆ ಮಾರಾಟಕ್ಕಿದೆ

30x40
20x30
30x50 ಸೈಟು
30x40 ಸೈಟು

9008711654

MUDA Khatha SITE Sale

East facing corner Site
Near Dadada Halli, E-Khata Done, Jnanbharathi Layout,
Highway road behind Airport,
Direct Owner, 8.7 Mtrs x12 Mtrs
Totaly 1124 Sqft Rs.44 Lacs
Slightly Negotiable

9342123373

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 7204494854

SBIT TRAVELS

Group Tours
SINGAPORE 4N5D
APRIL 16, 27, 30 | May 13, 18, 24
SRILANKA 6N7D
APRIL 13, 18, 25 | May 9, 16, 25
EUROPE 14N15D
MAY 1, 6, 13, 15, 22, 31
(Saraswathipuram, Mysuru)

9342524127

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 8861401315

WANTED BILL CLERK

for Cement Company in Mysore.
Candidates must be SSLC pass, below 30 years.

Contact 94483 57475

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 8618373596

HOUSE FOR RENT

3BHK Duplex 1st Flore House with car Parking Dattagalli KEB Genction Mysore

9945758599

SITE FOR SALE

30x40 South face Muda Approved Arpana Layout Very Near to Ring Road
Price - 42 Lakh
KSRTC Layout 3rd Stage Kotehundi,
40x50 North face
Price - 85 Lakh

9741817450

ARAS CONSTRUCTIONS Trusted Mark

• CIVIL ENGINEERS • BUILDERS

PREMIUM HOME CONSTRUCTIONS

1950 Rs. /sqft Including below items

• 9538003006 • 0821-4525966

COMMERCIAL CONSTRUCTIONS FROM 1700/SQFT

arasinfo27@gmail.com • www.arasconstructions.net

156, 1ST FLOOR, 80 FT ROAD, R.R. NAGAR, MYSURU.

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ

ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:

6361056646, 7676844160

ಮನೆಯಿಂದಲೇ ಕೆಲಸ

ಗೃಹಿಣಿಯರು, ವಿದ್ಯಾರ್ಥಿಗಳಿಗೆ ನಿವೃತ್ತಿ ಹೊಂದಿದವರಿಗೆ ಬುಕ್ ರೈಟಿಂಗ್, ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ, ಮೊಬೈಲ್ ಬಳಸಿ ಸ್ಟೋರಿ ಟೈಪಿಂಗ್, ಜ್ಯುವೆಲರಿ ಪ್ಯಾಕಿಂಗ್, ಪ್ಲಾಸ್ಟಿಕ್ ಕವರ್ ಪ್ಯಾಕಿಂಗ್, ಪೆನ್ಸಿಲ್ ಪ್ಯಾಕಿಂಗ್, ಗುಡ್‌ಲೈಫ್ ಕವರ್ ಪ್ಯಾಕಿಂಗ್ ಹಾಗೂ ಮನೆಯಿಂದಲೇ ಕರಕುಶಲ ಪ್ಯಾಕಿಂಗ್ ಹುದ್ದೆಗಳು ಎಲ್ಲರಿಗೂ ಮುಕ್ತ ಅವಕಾಶ. ಗಳಿಸಿ ಸಂಬಳ 25,000 ರಿಂದ 30,000 ದವರೆಗೆ. ಟಾರ್ಗೆಟ್ ಇರುವುದಿಲ್ಲ.

ದಿವ್ಯ – 7618712380

Change of Name

I, Manoranjan Mondal, residing at #128, RMP Layout, Vijayanagar 4th Stage, Mysore-570 032, have changed my name from Manoranjon Mondal to Manoranjan Mondal on my own free will sworn in before Notary L.N. Rajendran, Mysuru vide affidavit dated 20-3-2025.

Sd/- Manoranjan Mondal

SITES FOR SALE

Semi commercial sites for sale in Old Kesare Main Road. Easy instalment.

Mob: 9449018933

ಬೇಕಾಗಿದ್ದಾರೆ

1) Ex. Service Man ಸೆಕ್ಯೂರಿಟಿ ಗಾರ್ಡ್ (CRPF/BSF/Army)
2) ಮಹಿಳಾ ಸೆಕ್ಯೂರಿಟಿ
ಸ್ಥಳ: ವರುಣಾ ಗ್ರಾಮ
3) ಪುರುಷ ಸೆಕ್ಯೂರಿಟಿ
ಸ್ಥಳ: ಹುಣಸೂರು ಹಾಗೂ ಮೈಸೂರು ಸಿಟಿ

9686422400 9242406261

New House for sale

Fully Furnished 20x40 Duplex Vani Vilas Layout (MUDA) Bannur Road, Opp.Vidya Vikas College Direct Owner Contact Vijay:

9309833881

HOUSE FOR LEASE

2 BHK house 1st floor, near Abhishek Circle, Hebbal, Mysore.

Mob: 9880044298

(BROKERS EXCUSE)

ಬೇಕಾಗಿದ್ದಾರೆ

ಹೌಸ್‌ಕೀಪಿಂಗ್ ಹುಡುಗರು * ಹೌಸ್‌ಕೀಪಿಂಗ್ ಮಹಿಳೆಯರು * ಸೆಕ್ಯೂರಿಟಿ ಗಾರ್ಡ್

ಮೈಸೂರಿನ ಸಂತ ಫಿಲೋಮಿನಾ ಚರ್ಚ್ ಹತ್ತಿರ, ಅಶೋಕ ರಸ್ತೆ ಹತ್ತಿರವಿರುವ ಪ್ರತಿಷ್ಠಿತ 30 ರೂಂ ಗಳುಳ್ಳ (ಲಾಡ್ಜ್)ಗೆ ಅನುಭವ ಇರುವವರು ಬೇಕಾಗಿದ್ದಾರೆ.

9731249338, 9845704333

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಸೋಲಾರ್ ಸರ್ವೀಸ್

8197383645, 9008711654

For an Injection Moulding Unit in Mysuru requires :

Line Quality, Final Qulity, Assembly work and Planning and Dispatch. For an above industry in a similar position. Exp : 2-3 years. Qulification: ITI Fitter, Diploma mechanical,BE mechanical, SSLC, PUC and any Degree.

Contact Details : aerospacemys@gmail.com 8748991416

JOBNET

ಮೊಬೈಲ್‌ನಲ್ಲಿ ಕೆಲಸ

ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ದಿಂದ 20,000 ಸಂಪಾದಿಸಿ.

Mob: 9731891409

ಸೆಕ್ಯೂರಿಟಿ ಗಾರ್ಡ್ಸ್ ಬೇಕಾಗಿದ್ದಾರೆ

Night Shift & Day Shift
ಬೋಗಾದಿ, ದಟ್ಟಗಳ್ಳಿ ಹತ್ತಿರ 16,500/- ಸಂಬಳ ESI+PF ಇರುತ್ತದೆ. ಮತ್ತು ಹೆಬ್ಬಾಳಿನಲ್ಲಿ ಇರುವ ಕಾಲೇಜುಗೆ ಕೆಲಸಕ್ಕೆ ಬೇಕಾಗಿದ್ದಾರೆ. 10th Pass or Fail (ಗಂಡಸರು)

9986501873 9590268610

ತಕ್ಷಣ ಬೇಕಾಗಿದ್ದಾರೆ

ಸಂಜೆ 5ರಿಂದ ರಾತ್ರಿ 10ರವರೆಗೆ ಸ್ಯಾಂಡ್ ವಿಚ್ ಮಾಡಲು ಜ್ಯೂಸ್ ಮಾಡಲು 30 ರಿಂದ 40 ವರ್ಷದವರು ಮಾತ್ರ ಕುವೆಂಪುನಗರ, ಸುತ್ತಮುತ್ತ ಇರುವವರು ಸಂಪರ್ಕಿಸಿ

9448054151 7795996681

WANTED BRIDE

Boy: B.S. Sourab
Gothra: Vishwamithra
D.O.B.: 11-09-1994
Qlfn.: B.S.M.S.
Job: Sweden

Mob: 7259168592

FATHER: B.S. SRIDHAR
HEIGHT: 6.1 MAKHA STAR

WANTED SITE

30x40 site East or North facing @ Nivedithanagar, CFTRI Layout, SBM Bogadi, Vijayanagar 1st Stage, 2nd Stage, 3rd Stage.
BROKERS EXCUSE

Mob: 9448056865

NEED HOUSE FOR RENT / PURCHASE

3 bedroom duplex for vegetarian family, independent house.
BROKERS EXCUSE

Mob: 9448056865

ನಂಜನಗೂಡಿನಲ್ಲಿ

30x40 ಡಿ.ಟಿ.ಸಿ.ಪಿ. ಸೈಟುಗಳು

ರೂ. 8.40 ಲಕ್ಷ

8792306996

ಬ್ಯಾಂಕ್ ಲೋನ್ ದೊರೆಯುತ್ತದೆ

MUDA Site for Sale

North facing 50x80
Vijayanagar 4th Stage, 2nd Phase, Mysore.
Clear title, near NPS School.
BROKERS EXCUSE

Mob: 9481089339

SITE FOR SALE

30x40 East Face VRL ಲೇಔಟ್, H.D ಕೋಟೆ ರಸ್ತೆ ಚಿತ್ರವನ ರೆಸಾರ್ಟ್ ಹಿಂಭಾಗ
MUDA APPROVED
RATE : Rs.22.50 Lakh

8217786985

SITE FOR SALE

30x45 North Facing Attacthed to Vijayanagar 4th Stage 2nd Phase
E-Khatha Ready
Bank Loan Available

7899214181

ಎಲ್ಲಾ ಸೌಕರ್ಯವುಳ್ಳ ಖಾಲಿ ಜಾಗ ಹಾಗೂ ಪಿಜಿ ಬಾಡಿಗೆಗಿದೆ

ಬೋಗಾದಿ ಗ್ರಾಮದಿಂದ 3 ಕಿ.ಮೀ ದೂರದ ಮಹಾಲಿಂಗೇಶ್ವರ ದೇವಸ್ಥಾನದ ಪಕ್ಕದಲ್ಲಿ ಅಲಿನೇಷನ್ ಆಗಿರುವ 99,999 ಚದರಡಿ ಜಾಗ ವಿವಿಧ ಉದ್ದೇಶಗಳಿಗೆ ವಿದ್ಯುತ್ ಹಾಗೂ ನೀರಿನ ಸೌಕರ್ಯ ಹಾಗೂ ಕುವೆಂಪು ನಗರದ ಅಪೋಲೋ ಆಸ್ಪತ್ರೆ ರಸ್ತೆಯಲ್ಲಿ 8 ರೂಮುಗಳ ಪಿಜಿ ಪೀಠೋಪಕರಣದೊಂದಿಗೆ ಬಾಡಿಗೆಗಿದೆ.

Mob: 8197609290

ಇಂಡಸ್ಟ್ರಿಯಲ್ ಶೆಡ್ ಬಾಡಿಗೆಗೆ ಇದೆ

4500 Sq.ft.
ಕಡಕೊಳ, ಮೈಸೂರು

9019476173, 7813942556

MUDA Approved

30x40 In Bhairava enclave 3km from bogadi ring road. Attached to vijayanagara 4th stage. Just 100 mtrs from bogadi Gaddige main road. Price 4200 per sqft.

7975269652 8884616461

ಬೇಕಾಗಿದ್ದಾರೆ

ಬೋಗಾದಿ ಸುತ್ತಮುತ್ತಲಿನ ಅಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ ಇಎಸ್‌ಐ & ಪಿಎಫ್ ಸೌಲಭ್ಯವಿದೆ.

9916739611 8892010331

CHANGE OF NAME

I Kumar. C Residing at No.175, 7th Cross, M.G.Koppal, Hebbal Main Road, Vijayanagar post, Mysuru-570017 have changed my name from Kumara to Kumar C on my own free will in front of Notary C Mangala on 01-03-2025 at Mysuru

Sd/- Kumar C

SITE FOR SALE

40X60 NO.12365 South Facing Opp. Park, Near to Ring Road Vijayanagar 4th Stage 2nd Phase
Price: 1.60 Crore

8884133677

ಬಾಡಿಗೆಗೆ ಇದೆ

#446 Saraswathi Nilaya
K N Agrahara Mysore
Behind laxman Mess
Celler 1500 Sqft.
First Floor 2500 Sqft
Office Space or Godown

7892313469 9844949640

SITE FOR SALE

40X60 ROOPA NAGAR (CALL)

9740088990

CHANGE OF NAME

I Guna, W/o H.Ramesh residing at Haravu Grama Pandavapura Taluk, Karnataka-571606, I have changed my name from Guna to Lakshmamma vide affidavit sworn in before Notary H.N.Varija Mysore District Dtd: 20-03-2025

Sd/- Lakshmamma

ಬೇಕಾಗಿದ್ದಾರೆ

ಬೀಕೆರೆ ಸಮೀಪದ ಬಾರ್ ಮತ್ತು ರೆಸ್ಟೋರೆಂಟ್‌ನಲ್ಲಿ ಕೆಳಕಂಡ ಹುದ್ದೆಗಳಿಗೆ ತಕ್ಷಣ ನೇಮಕಾತಿ ಕ್ಯಾಷಿಯರ್ ಸುರಕ್ಷತಾ ರಕ್ಷಕರು (Security Guards) ಅಡುಗೆಯರು ಆಕರ್ಷಕ ಸಂಬಳ ಉಚಿತ ಊಟ ಮತ್ತು ವಸತಿ ಸೌಲಭ್ಯ ಆಸಕ್ತ ಅಭ್ಯರ್ಥಿಗಳು ತಕ್ಷಣ ಸಂಪರ್ಕಿಸಿ:

9945765007

ಬೇಕಾಗಿದ್ದಾರೆ

ಹೂಟಗಳ್ಳಿ ಕೈಗಾರಿಕಾ ಪ್ರದೇಶದ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸಲು, 35 ವರ್ಷದೊಳಗಿನ ITI/PUC/SSLC ತೇರ್ಗಡೆಯಾದ ಹುಡುಗರು ಬೇಕಾಗಿದ್ದಾರೆ. 8 ಗಂಟೆಯ ಹಗಲು ಪಾಳಿ/ವಾರದ ರಜೆ/ESI/EPF/Bonus ತಿಂಗಳ ವೇತನ 15273ರಿಂದ 16500 ಸಂಪರ್ಕಿಸಿ:

9900481819,9972945905

ಛತ್ರ ಖಾಲಿ ಇದೆ

ವಿನಾಯಕ ಕನ್ವೆನ್ಷನ್ ಹಾಲ್ ವಿನಾಯಕ ನಗರ, ಮೈಸೂರು ದಿನಾಂಕ: 23–04–2025 24–04–2025ರಂದು ಖಾಲಿ ಇರುತ್ತದೆ.

9880398171 9844575060

ಸುವರ್ಣಾವಕಾಶ

ಪ್ರಸಿದ್ಧ ಶೋರೂಮ್ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ, ಯುವಕರು ಮತ್ತು ಯುವತಿಯರು, 22000/– Salary. 100% ಗ್ಯಾರಂಟಿ ಕೆಲಸ

9482369816 9482360136

ನೀವು ನಿಮ್ಮ ಪ್ರಾಪರ್ಟಿಯನ್ನು ಕಮೀಷನ್ ಕೊಡದೆ ಮಾರಬೇಕೆ? ಮಧ್ಯವರ್ತಿಗಳಿಂದ ಬೇಸತ್ತಿದ್ದೀರಾ? Do you want to sell your Property without given Commission?

8884616461 7975269652

ಮಾರಾಟಕ್ಕಿದೆ

40x60 ವಿಜಯನಗರ 3ನೇ ಹಂತ, 30x40 ವಿಜಯನಗರ 4ನೇ ಹಂತ, East 40 ಅಡಿ ರಸ್ತೆ

9945622196

ಉದ್ಯೋಗವಕಾಶ

ವಿಡಿಯೋ ಎಡಿಟಿಂಗ್ ಮಾಡಲು ಅನುಭವ ವಿರುವವರು ಮನೆಯಿಂದಲೇ ಕೆಲಸ ನಿರ್ವಹಿಸುವ ಅವಕಾಶ, ಉತ್ತಮ ವೇತನ. ವಾಟ್ಸಪ್ ಮೆಸೇಜಿನ ಮೂಲಕ ಸಂಪರ್ಕಿಸಿ:

9448954400

ಮನೆ ಮಾರಾಟಕ್ಕಿದೆ

40x40 ಉತ್ತರಕ್ಕೆ ರಸ್ತೆ ಪೂರ್ವಕ್ಕೆ ಬಾಗಿಲು 3 ಅಂತಸ್ತು 35 ಚದರ ವಿವೇಕಾನಂದನಗರ ಮೈಸೂರು

9900284079

WANTED

A candidate of EEE (Electrical and Electronics Engineering) who should have good knowledge of electrical work with experience of 2 years.

9629503549

ಬಾಡಿಗೆಗೆ ಇದೆ

ವಲ್ಲಭಾಯ್ ಪಟೇಲ್‌ನಗರ ರಸ್ತೆ JSS 2nd Layout Mysore Seller 2900 Sqft, Ist Floor, 3000 Sqft Commercial Purpose

8197596689

WANTED

Required Office Accountant (Female) Qualification M.Com or B.Com Experience 2 or 4 years Tally Must / Office Boy Qualification PUC
NIMISH SECURITY SERVICES Pvt.Ltd
Contact with BIO Data: #14/A, 2nd Floor, Krishna Vilasa Road, Mysore-01

9606023463

ಬೇಕಾಗಿದ್ದಾರೆ

ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ

6364748485

SK CONSTRUCTION

ನಿಮ್ಮ ಕೈಗೆಟಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ನಿಮ್ಮ ಕನಸಿನ ಮನೆ 3D Plan Engineer Supervision ನಲ್ಲಿ ಹೊಸ ಮನೆ ಮತ್ತು Altration Work ಮಾಡಿಕೊಡುತ್ತೇವೆ.

9620528490

WANTED

Front Office
Office Time 9:30am to 6:pm
Salary : 9000/- Plus perks
mail: bilvashree24@gmail.com

WA: 9606062178

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಚಾಮನಹಳ್ಳಿ ಕೃಷಿ ಸಂಘ ಜೆಡಿಎಸ್ ತೆಕ್ಕೆಗೆ



ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಸಂಘದ ನಿರ್ದೇಶಕರುಗಳು ಅಭಿನಂದಿಸಿದರು.

ಬನ್ನೂರು/ತಿ.ನರಸೀಪುರ, ಮಾ.21– ತಾಲೂಕಿನ ಚಾಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನ ಜೆಡಿಎಸ್ ಪಕ್ಷದ ಪಾಲಾಗಿದ್ದು, ಜೆಡಿಎಸ್ ಬೆಂಬಲಿತ ನೂತನ ಅಧ್ಯಕ್ಷರಾಗಿ ಎಚ್.ಎಂ.ಮಾದೇಗೌಡ, ಉಪಾಧ್ಯಕ್ಷ ರಾಗಿ ಎಂ.ಎಲ್.ಜಯರಾಮೇಗೌಡ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಕಚೇರಿಯಲ್ಲಿ ಶುಕ್ರವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ ಬಯಸಿ ಎಚ್.ಎಂ.ಮಾದೇಗೌಡ, ಎಂ.ಎಲ್.ಜಯರಾಮೇಗೌಡ ಇಬ್ಬರೇ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಯಾದರು.

ಚುನಾವಣಾಧಿಕಾರಿಯಾಗಿ ಕೆ.ಸಿ.ರಘು ಕಾರ್ಯನಿರ್ವಹಿಸಿದರು. ಚುನಾವಣಾ ಪ್ರಕ್ರಿಯೆಯಲ್ಲಿ ನಿರ್ದೇಶಕರಾದ ಬಿ.ಉಮೇಶ್, ಶಂಕರೇಗೌಡ, ಚನ್ನಮಲ್ಲು ಬಿ.ದೇವರಾಜು, ಲಕ್ಷ್ಮಮ್ಮ, ಗೋಪಾಲ, ಎಂ.ಸತೀಶ್, ಸಿ.ಪಿ.ವಿದ್ಯಾ, ಸಿ.ಎಂ.ಮಂಜುನಾಥ್ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರೆ, ನಿರ್ದೇಶಕಿ ಹಾಗೂ ಮಾಜಿ ಶಾಸಕಿ ಸುನೀತಾ ವೀರಪ್ಪ ಗೌಡ ಗೈರಾಗಿದ್ದರು.

ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ ಪ್ರಕಟಗೊಳ್ಳುತ್ತಿದ್ದಂತೆ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು. ಈ ವೇಳೆ ನೂತನ ಅಧ್ಯಕ್ಷ ಮಾದೇಗೌಡ ಮಾತನಾಡಿ, ತಮ್ಮನ್ನು ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಿದ ನಿರ್ದೇಶಕರಿಗೆ ಅಭಿನಂದನೆ ಸಲ್ಲಿಸಿದರು. ಸಂಘದಲ್ಲಿ ರೈತರಿಗೆ ದೊರೆಯುವ ಸೌಲಭ್ಯಗಳು ಸಮರ್ಪಕವಾಗಿ ಸಿಗುವ ನಿಟ್ಟಿನಲ್ಲಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸುವುದಾಗಿ ಭರವಸೆ ನೀಡಿದರು. ಗೊಬ್ಬರ, ಬಿತ್ತನೆ ಬೀಜ ಸೇರಿದಂತೆ ಇನ್ನಿತರೆ ಪರಿಕರಗಳು ಹಾಗೂ ಸಬ್ಸಿಡಿ ರೂಪದಲ್ಲಿ ದೊರಕುವ ಸಾಲ ಸೌಲಭ್ಯಗಳನ್ನು ದೊರಕಿಸಿಕೊಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಜೆಡಿಎಸ್ ಮುಖಂಡ ಹೋಟೆಲ್ ರಾಮಸ್ವಾಮಿ, ಗುತ್ತಿಗೆದಾರ ಸತೀಶ್, ಮುಖಂಡರಾದ ರಂಗಸ್ವಾಮಿ, ಶಿವು, ಸಿದ್ದೇಗೌಡ, ಜಯರಾಮು, ಹೇಮಂತ್, ಶ್ರೀನಿವಾಸ್, ಸುರೇಶ್, ನವೀನ್, ಶಂಕರ್ ಇತರರು ಹಾಜರಿದ್ದರು.

ಹೆಡತಲೆಯಲ್ಲಿ ವಿಜೃಂಭಣೆಯ ಭಂಗಿ ಮಾರಮ್ಮ ಜಾತ್ರೆ



ಸಾವಿರಾರು ಭಕ್ತರ ಸಮ್ಮುಖದಲ್ಲಿ ರಥೋತ್ಸವವು ವಿಜೃಂಭಣೆಯಿಂದ ಜರುಗಿತು.

ನಂಜನಗೂಡು: ತಾಲೂಕಿನ ಹೆಡತಲೆ ಗ್ರಾಮದ ಶ್ರೀ ಭಂಗಿ ಮಾರಮ್ಮ ಜಾತ್ರಾ ಮಹೋತ್ಸವದ ಅಂಗವಾಗಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ರಥೋತ್ಸವವು ವಿಜೃಂಭಣೆಯಿಂದ ಜರುಗಿತು.

ಜಾತ್ರಾ ಮಹೋತ್ಸವದ ಅಂಗವಾಗಿ ಬೆಳಿಗ್ಗೆಯಿಂದಲೇ ದೇವಾಲಯದಲ್ಲಿ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ನಡೆಸಿದ ಬಳಿಕ ವಿವಿಧ ಧಾರ್ಮಿಕ ವಿಧಿ ವಿಧಾನಗಳನ್ನು ಪೂರೈಸಿ, ಭಂಗಿ ಮಾರಮ್ಮನವರ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಲಾಯಿತು. ಮಧ್ಯಾಹ್ನ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ್ದ ಭಕ್ತಾದಿಗಳು ಶ್ರದ್ಧಾ ಭಕ್ತಿಯಿಂದ ರಥದ ಹಗ್ಗವನ್ನು ಹಿಡಿದು ಎಳೆಯುವ ಮೂಲಕ ತಮ್ಮ ಭಕ್ತಿ ಮೆರೆದರು.

ರಥವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸುವಾಗ ತೇರಿಗೆ ಹಣ್ಣು ಧವನ ಸಮರ್ಪಿಸಿ ಭಕ್ತಿ ಮೆರೆದರು. ರಥೋತ್ಸವಕ್ಕೆ ವಿಶೇಷವಾಗಿ ವಿವಿಧ ಬಣ್ಣದ ಬಟ್ಟೆಯ ಬಾವುಟಗಳಿಂದ ಹಾಗೂ ವಿವಿಧ ಬಣ್ಣದ ಹೂಗಳಿಂದ ರಥವನ್ನು ಸಿಂಗರಿಸಲಾಗಿತ್ತು. ಗ್ರಾಮದ ಸುತ್ತಮುತ್ತ ಹಾಗೂ ದೇವಾಲಯದ ಹೊರಾಂಗಣದಲ್ಲಿ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು. ರಥೋತ್ಸವವು 5 ಗಂಟೆಯ ವೇಳೆಗೆ ಸ್ವಸ್ಥಾನ ಸೇರಿತು.

ನಾಳೆ ಕಾಳಿಕಾಂಬೆ ಜಾತ್ರೆ



ಸಿದ್ದರಾಮನಹುಂಡಿ: ವರುಣ ಕ್ಷೇತ್ರ ದೇವೇಗೌಡನಹುಂಡಿ ಗ್ರಾಮದಲ್ಲಿ ಭಾನುವಾರ(ಮಾ.23) ಕಾಳಿಕಾಂಬ ಮಹೋತ್ಸವ ಜಾತ್ರೆ ನಡೆಯಲಿದೆ. ಸಂಜೆ 6 ಗಂಟೆ ಮೆರವಣಿಗೆ ಆರಂಭವಾಗಲಿದ್ದು ಹರಕೆ ಹೊತ್ತವರು ಬಾಯಿ ಬೀಗ ಹಾಕಿಕೊಂಡು ಮೆರವಣಿಗೆಯಲ್ಲಿ ಭಾಗವಹಿಸುವಂತೆ ಗ್ರಾಮಸ್ಥರು ಕೋರಿದ್ದಾರೆ.

ಹೆಚ್.ಡಿ.ಕೋಟೆಯಲ್ಲಿ 75 ವಿದ್ಯಾರ್ಥಿಗಳಿಂದ ರಕ್ತದಾನ

ರಕ್ತದಾನ ಮಾಡುವುದರಿಂದ ಹಲವರ ಜೀವ ಉಳಿಸಬಹುದು

ಹೆಚ್.ಡಿ.ಕೋಟೆ, ಮಾ.21– ಒಬ್ಬ ವ್ಯಕ್ತಿ ರಕ್ತದಾನ ಮಾಡುವುದರಿಂದ ಪ್ರಾಣಾಪಾಯದ ಅಂಚಿನಲ್ಲಿರುವ ಹಲವರ ಜೀವವನ್ನು ಉಳಿಸಬಹುದಾಗಿದೆ ಎಂದು ತಾಲೂಕು ವೈದ್ಯಾಧಿಕಾರಿ ಡಾ: ಟಿ.ರವಿಕುಮಾರ್ ತಿಳಿಸಿದರು.

ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಮೈಸೂರಿನ ಕೆ.ಆರ್.ಆಸ್ಪತ್ರೆಯ ರಕ್ತ ನಿಧಿ ಕೇಂದ್ರ, ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ, ಎಚ್.ಡಿ.ಕೋಟೆಯ ರೋಟರಿ ಕ್ಲಬ್ ಮತ್ತು ಲಯನ್ಸ್ ಕ್ಲಬ್, ಮೈಸೂರಿನ ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ರಕ್ತದಾನ ಶಿಬಿರವನ್ನು ಉದ್ದೇಶಿಸಿ ಮಾತನಾಡಿದರು. ಇದೇ ವೇಳೆ ಕಾಲೇಜಿನ 75 ವಿದ್ಯಾರ್ಥಿಗಳು ಸೇರಿದಂತೆ 90 ಮಂದಿ ರಕ್ತದಾನ ಮಾಡಿದರು.

ಆರೋಗ್ಯವಂತ ವ್ಯಕ್ತಿಯೋರ್ವ ಎಂಟು ವಾರಗಳಿಗೊಮ್ಮೆ ರಕ್ತದಾನ ಮಾಡಬಹುದು,



ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ಇಂದಿನ ದಿನಗಳಲ್ಲಿ ರಕ್ತದಾನದ ಜೊತೆ ಜೊತೆಗೆ ಅಂಗಾಂಗ ದಾನ ಮಾಡುವವರ ಸಂಖ್ಯೆಗಳು ಸಹ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದೆ, ಇದರಿಂದ ಅಂಗ ವೈಫಲ್ಯ ಅನುಭವಿಸುತ್ತಿರುವವರ ಆಶಾಕಿರಣಗಳಾಗಿ ದಾನಿಗಳು ಹೊರಹೊಮ್ಮುತ್ತಿದ್ದಾರೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಮೈಸೂರಿನ ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ವತಿಯಿಂದ ಏಡ್ಸ್ ಕುರಿತು ಅರಿವು ಮೂಡಿಸಲಾಯಿತು. ಕಾಲೇಜು ಮತ್ತು ಆರೋಗ್ಯ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಶನೀಲಾ, ದ್ವಿತೀಯ ಬಹುಮಾನವನ್ನು ಉಷಾ ಮತ್ತು ತೃತೀಯ ಬಹುಮಾನವನ್ನು ಎಚ್.ಎನ್.ಮಹೇಶ್ ಪಡೆದರು.

ಸುಮಾರು 90ಕ್ಕೂ ಹೆಚ್ಚು ಮಂದಿ ರಕ್ತದಾನ ಮಾಡಿದರು. ಅದರಲ್ಲೂ ಸುಮಾರು ಕಾಲೇಜಿನ 75 ವಿದ್ಯಾರ್ಥಿಗಳು ರಕ್ತದಾನ ಮಾಡಿದರು,

ಹೆಚ್.ಡಿ.ಕೋಟೆ ಲಯನ್ಸ್ ಕ್ಲಬ್ ಅಧ್ಯಕ್ಷ ಬೀಚನಹಳ್ಳಿ ಭಾಸ್ಕರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಮಹಾರಾಜ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಚಂದ್ರೇಗೌಡ, ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್, ಸಾರ್ವಜನಿಕ ಆಸ್ಪತ್ರೆಯ ಡಾ.ಸೋಮಣ್ಣ, ರಕ್ತ ನಿಧಿ ಕೇಂದ್ರದ ಪಲ್ಲವಿ ರೋಟರಿಯ ಸಿ.ಎನ್.ನಾಗಣ್ಣ, ರೋಟರಿ ಕ್ಲಬ್‌ನ ಅಧ್ಯಕ್ಷ ಎಸ್.ಎನ್.ನಿರಂಜನ್, ಕಾರ್ಯದರ್ಶಿ ಶಿವಣ್ಣ, ಆರ್ಮುಗಂ, ರಾಮು, ರಘು, ಉಪನ್ಯಾಸಕ ರಾದ ಎಂ.ಆರ್.ರಾಮಚಂದ್ರ ಸಿದ್ದೇಗೌಡ, ದೈಹಿಕ ಶಿಕ್ಷಣ ನಿರ್ದೇಶಕ ಕಲ್ಲೇಶ್ ಗೌಡ, ಚನ್ನಕೇಶವ, ಕ್ರೀಡಾ ಕಾರ್ಯದರ್ಶಿ ಬಿ.ಸಿ.ಮಹೇಂದ್ರ, ಅವೀನಾ, ಡಿ.ಚಂದನ, ಸಿ.ಚಿತ್ರ ಬಿ.ಚಿಕ್ಕದೇವಿ, ಸಂಗೀತಾಗೌಡ, ಶಾಂಭವಿ, ಅಂಕಪ್ಪ ಮಂಜು, ಮಹದೇವು, ಸಿದ್ದರಾಜು, ರವಿ, ಪ್ರಕಾಶ್, ದಿಲೀಪ್, ರವೀಶ್ ಇದ್ದರು.

ಕಾಡಂಚಿನ ಗ್ರಾಮಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ತಪ್ಪಿಸಿ: ಶಾಸಕ ದರ್ಶನ್

ಮಲ್ಕುಂಡಿ: ಕಾಡಂಚಿನ ಗ್ರಾಮಗಳಲ್ಲಿ



ಕಾಡು ಪ್ರಾಣಿಗಳ ಹಾವಳಿಯನ್ನು ತಪ್ಪಿಸಲು ಕ್ರಮ ಕೈಗೊಳ್ಳಲು ಮುಂದಾಗಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ವಿಧಾನ ಸಭೆಯಲ್ಲಿ ಮನವಿ ಮಾಡಿದರು.

ಹೆಡಿಯಾಲ ವನ್ಯಜೀವಿ ಹಾಗೂ ಓಂಕಾರ ವಲಯಗಳ ವ್ಯಾಪ್ತಿಗೆ ಬರುವ ಕಾಡಂಚಿನ ಗ್ರಾಮಗಳಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು ರೈತರು ಬೆಳೆದ ಫಸಲನ್ನು ಕಾಡು ಪ್ರಾಣಿಗಳು ಹಾನಿ ಮಾಡುತ್ತಿದ್ದ ಹುಲಿ, ಚಿರತೆ ಹಾವಳಿ ಹೆಚ್ಚಾಗಿದ್ದು, ಅವುಗಳನ್ನು ಸೆರೆ ಹಿಡಿಯಲು ಹೆಚ್ಚಿನ ಬೋನ್‌ಗಳ ವ್ಯವಸ್ಥೆ ಮಾಡಬೇಕಾಗಿದೆ. ಈಗಾಗಲೇ ಪ್ರಾಯೋಗಿಕ ಹಂತದಲ್ಲಿ ರೈಲ್ವೆ ಬ್ಯಾರಿಕೇಡ್ ಮತ್ತು ಚೈನ್ ಲಿಂಕ್ ಅಳವಡಿಸಿರುವುದರಿಂದ ಉತ್ತಮ ಫಲಿತಾಂಶ ಬಂದಿದೆ. ಉಳಿದಿರುವ ಪ್ರದೇಶಕ್ಕೆ ರೈಲ್ವೆ ಬ್ಯಾರಿಕೇಡ್ ಅಳವಡಿಸಿದರೆ ಕಾಡು ಪ್ರಾಣಿಗಳ ಹಾವಳಿಯನ್ನು ತಪ್ಪಿಸಬಹುದು ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರನ್ನು ಮನವಿ ಮಾಡಿದರು

ತಿ.ನರಸೀಪುರ ಪುರಸಭೆಯ ಬಜೆಟ್ ಪೂರ್ವಭಾವಿ ಸಭೆ

ತಿ.ನರಸೀಪುರ, ಮಾ.21–ಪುರಸಭೆಯ 2025–26ನೇ ಸಾಲಿನ ಆಯ–ವ್ಯಯದ ಪೂರ್ವಭಾವಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಿದ್ದು, ಮಾ.24ರಂದು ಏರ್ಪಡಿಸಲಾಗಿದೆ.

ತಿ.ನರಸೀಪುರ ಪುರಸಭೆ ವ್ಯಾಪ್ತಿಯ ಅಭಿವೃದ್ಧಿಗಾಗಿ ಚರ್ಚಿಸಲು ಸಲಹೆ ಸೂಚನೆಗಳನ್ನು ನೀಡಲು ಮಾ.24ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ತಿ.ನರಸೀಪುರ ಪುರಸಭೆಯ ಅಧ್ಯಕ್ಷೆ ಶ್ರೀಮತಿ ಬಿ.ವಸಂತ ಶ್ರೀಕಂಠ ಅವರ ಅಧ್ಯಕ್ಷತೆಯಲ್ಲಿ ತಿ.ನರಸೀಪುರ ಪುರಸಭಾ ಕಛೇರಿ ಪಕ್ಕದಲ್ಲಿರುವ ಸ್ತ್ರೀಶಕ್ತಿ ಭವನದಲ್ಲಿ ಸಭೆಯನ್ನು ಆಯೋಜಿಸಲಾಗಿದೆ.

ಸಭೆಗೆ ಪುರಸಭೆ ವ್ಯಾಪ್ತಿಯಲ್ಲಿರುವ ಸಾರ್ವಜನಿಕರು, ಸಂಘಸಂಸ್ಥೆಗಳ ಮುಖ್ಯಸ್ಥರು, ನಿವಾಸಿಗಳು ಸಭೆಯಲ್ಲಿ ಭಾಗವಹಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು ಮುಖ್ಯ ಅಧಿಕಾರಿ ಬಿಕೆ ವಸಂತಕುಮಾರಿ ಮನವಿ ಮಾಡಿದ್ದಾರೆ

ಮೇಲ್ಕಂಡ ವಿಷಯವನ್ನು ತಮ್ಮ ಸುದ್ದಿವಾಹಿನಿಯಲ್ಲಿ ಪ್ರಕಟಿಸಬೇಕೆಂದು ಕೋರಿದೆ.

ಅಸ್ಪೃಶ್ಯತೆ ನಿರ್ಮೂಲನೆಗೆ ಕಾನೂನಿನೊಂದಿಗೆ ಇತರ ಸಮುದಾಯಗಳ ಸಹಕಾರ ಅಗತ್ಯ

ಹುಣಸೂರು,ಮಾ.21– ಹನ್ನೆರಡನೆ ಶತಮಾನದ ಜಗಜ್ಯೋತಿ ಬಸವಣ್ಣನವರ ಅಯ್ಯಾ ಎಂದರೆ ಸ್ವರ್ಗ ಎಲ್ಲವೋ ಎಂದರೆ ನರಕ ಎಂಬ ಮಾತಿನಂತೆ ಪ್ರಸ್ತುತ ಸಮಾಜದಲ್ಲಿ ಕಾನೂನಿನ ಜೊತೆಗೆ ಬೇರೆ ಸಮಾಜದವರ ಸಹಕಾರದೊಂದಿಗೆ ನಾವೇಲ್ಲರೂ ಸಾಗಿ ಸಮಸಮಾಜವನ್ನು ರೂಪಿಸಿದರೆ ಮಾತ್ರ ಅಸ್ಪೃಶ್ಯತೆಯಂತಹ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸಾಧ್ಯ ಎಂದು ದಸಂಸ (ಡಿ.ಜಿ.ಸಾಗರ್ ಬಣ) ಜಿಲ್ಲಾ ಸಂಘಟನಾ ಸಂಚಾಲಕ ಕೊಳಗಟ್ಟ ಕೃಷ್ಣ ಹೇಳಿದರು.

ತಾಲೂಕಿನ ಬಿಳಿಕೆರೆ ಹೋಬಳಿ ಮಟ್ಟದಲ್ಲಿ ತಾಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ಆಯೋಜನೆ ಮಾಡಿದ್ದ ಬಿಳಿಕೆರೆ ಹೋಬಳಿ ಮಟ್ಟದ ಅಸ್ಪೃಶ್ಯತೆಯಂತಹ ಅನಿಷ್ಟ ಪದ್ಧತಿಯನ್ನು ನಿರ್ಮೂಲನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಾವಿರಾರು ವರ್ಷಗಳಿಂದ ನೆಲೆಯಾಗಿ ನಿಂತಿರುವ ಅಸ್ಪೃಶ್ಯತೆ ಎಂಬ ಪಿಡುಗನ್ನು ನಿರ್ಮೂಲನೆ ಮಾಡಲು ಕಾನೂನು ಇದ್ದರೆ ಸಾಲದು. ಜೊತೆಗೆ ಇತರೆ ಸಮುದಾಯಗಳು ದಲಿತರನ್ನು ನೋಡುವ ಮನಸ್ಥಿತಿ ಬದಲಾಗಬೇಕು. ಸಾವಿರಾರು ವರ್ಷಗ



ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಕೊಳಗಟ್ಟ ಕೃಷ್ಣ ಮತ್ತಿತರರು.

ಳಿಂದ ಪೋಷಣೆ ಮತ್ತು ರಕ್ಷಣೆ ಮಾಡಿಕೊಂಡು ಬಂದ ಇತರೆ ಸಮುದಾಯಗಳೇ ಈ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆ ಮಾಡಲು ಮುಂದಾದಾಗ ಮಾತ್ರ ಸಾವಿರಾರು ವರ್ಷಗಳಿಂದ ಅಸ್ಪೃಶ್ಯತೆ ನೋವನ್ನು ಅನುಭವಿಸಿದ ದಲಿತ ಸಮಾಜಗಳಲ್ಲಿ ಭರವಸೆ ಮೂಡುತ್ತದೆ ಎಂದರು.

ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷರಾದ ಹೊಸೂರು ಕುಮಾರ್ ಮಾತನಾಡಿ ಡಾ.ಬಿ.ಆರ್. ಅಂಬೇಡ್ಕರ್ ನಮ್ಮ ದೇಶಕ್ಕೆ ಸಂವಿಧಾನ ನೀಡಿದ್ದಾರೆ ಎಂದರು.

ದಸಂಸ ಸಂಚಾಲಕ ಹಾಗೂ ಎಸ್‌ಸಿ ಎಸ್‌ಟಿ ಜಾಗೃತಿ ಸಮಿತಿಯ ಸದಸ್ಯ ನಿಂಗರಾಜ್ ಮಲ್ಲಾಡಿ, ವಕೀಲರಾದ ಶ್ರೀಮತಿ ಪವಿತ್ರಾ ಶ್ರೀಧರ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಮಕ್ಕಳ ಸಂರಕ್ಷಣಾ ಇಲಾಖೆಯ ರಘು ಸಮಾಜ ಕಲ್ಯಾಣಾಧಿಕಾರಿ ಅಶೋಕ್ ಕುಮಾರ್, ಸಿಡಿಪಿಓ ಸೂಪರ್ ವೈಸರ್ ಬಸಮ್ಮ, ಬಿಳಿಕೆರೆ ಗ್ರಾಪಂ ಅಧ್ಯಕ್ಷರಾದ ತಾಯಮ್ಮ, ಚಲ್ಲಹಳ್ಳಿ ಗ್ರಾಮದ ಅಧ್ಯಕ್ಷ ಚನ್ನಮ್ಮ, ಹಳೇಬೀಡುಡ ಗಾಪಂ ಅಧ್ಯಕ್ಷ ಮಲ್ಲೇಶ್, ಬಿಳಿಕೆರೆ ಗ್ರಾಪಂ ಮಾಜಿ ಅಧ್ಯಕ್ಷ ಶಿವಶಂಕರ್, ಹಳೇಬೀಡು ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಬಿಳಿಕೆರೆ ಪಿಡಿಓ ಮಹದೇವಸ್ವಾಮಿ.ಹೆಚ್.ಜಿ, ಹಳೇಬೀಡು ಪಿಡಿಓ ರಾಮಣ್ಣ ಭಾಗವಹಿಸಿದ್ದರು.

ಕಾಡಾನೆಗಳ ದಾಳಿಯಿಂದ ಫಸಲು ನಾಶ

ಹನಗೋಡು: ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ವೀರನ ಹೊಸಳ್ಳಿ ಅರಣ್ಯ ವಲಯದ ಮುದಗನೂರು ಗ್ರಾಮದ ಭಾಗದ ಕಾಡಿನಿಂದ ಕೆಲ ದಿನಗಳಿಂದ ಬೀಡು ಬಿಟ್ಟು ರಾತ್ರಿ ಹೊತ್ತು ನಾಗೇಶ್ ಅವರಿಗೆ ಸೇರಿದ ತೆಂಗು ಬಾಳೆ ಹಾಗೂ ಅಡಿಕೆ ಬೆಳೆಗಳನ್ನು ತಿಂದು ತುಳಿದು ನಾಶಪಡಿಸಿದೆ.

ಕಾಡಾನೆ ಹಿಂಡು ನಾಗೇಶ್ ಅವರ ಜಮೀನಿಗೆ ನುಗ್ಗಿ ಇಡೀ ರಾತ್ರಿ ಬೆಳೆಗಳನ್ನು ತಿಂದು ತುಳಿದು ನಾಶಪಡಿಸಿವೆ. ಪ್ರತಿ ದಿನವೂ ಈ ರೀತಿ ಬೆಳೆ ಹಾನಿ ಮಾಡುತ್ತಿದ್ದು ಅರಣ್ಯ ಇಲಾಖೆಯವರು ಕಂಡು ಕಾಣದಂತೆ ವರ್ತಿಸುತ್ತಿದ್ದಾರೆ ಎಂದು ರೈತ ನಾಗೇಶ್ ಅಳಲು ತೋಡಿಕೊಂಡಿದ್ದಾನೆ.

ಸುಮಾರು ಎರಡು ಎಕರೆ ಬಾಳೆ ಅಲ್ಲದೆ



ತೆಂಗಿನ ಮರಗಳನ್ನು ಉರುಳಿಸಿದ್ದಲ್ಲದೆ, ನೀರಾವರಿ ಪೈಪ್‌ನ್ನೇ ಪುಡಿ ಮಾಡಿವೆ. ಕಾಡಿನ ಬದಿಯಲ್ಲಿ ತೋಟಕ್ಕೆ ಹಾಕಿದ್ದ ಬೇಲಿಯನ್ನು ಪುಡಿಗಟ್ಟಿ ಪ್ರವೇಶಿಸಿದ ಆನೆಗಳು ತೋಟದ ಅಡ್ಡಾಡಿ ಬೆಳಿಗ್ಗೆ ಎಷ್ಟರಲ್ಲಿ ಕಾಡು ಸೇರಿವೆ.

ಈ ಬಾರಿ ನಾವೆಲ್ಲ ತೊಂದರೆಗೆ ಸಿಲುಕಿದ್ದೇವೆ ಈ ಬಗ್ಗೆ ಸರ್ಕಾರ ಸೂಕ್ತ ಕೈಗೊಳ್ಳ ಬೇಕು. ಇನ್ನಾದರೂ ರಕ್ಷಣೆ ನೀಡಬೇಕು ಎಂದು ಈ ಭಾಗದ ರೈತರು ಒತ್ತಾಯಿಸಿದರು.

ಯಶೋಧ ನಿಧನ

ಬೈಲಕುಪ್ಪೆ: ಬೈಲಕುಪ್ಪೆ ಗ್ರಾಮ ಪಂಚಾಯಿತಿಯ ಮಾಜಿ ಸದಸ್ಯ ಬಿ.ಎಸ್ ಮಂಜುನಾಥ್ ಅವರ ಪತ್ನಿ ಶ್ರೀಮತಿ ಯಶೋಧ (48) ಗುರುವಾರ ರಾತ್ರಿ ನಿಧನರಾದರು.



ಅನಾರೋಗ್ಯ ಪೀಡಿತರಾಗಿದ್ದ ಅವರು, ಕೆಲದಿನಗಳಿಂದ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು, ಚಿಕಿತ್ಸೆ ಫಲಕಾರಿಯಾಗದೆ ಗುರುವಾರ ರಾತ್ರಿ ಮೃತಪಟ್ಟಿದ್ದಾರೆ.

ದಿವಂಗತರು ಪತಿ ಮತ್ತು ಮಕ್ಕಳಾದ ಮೋನಿಕ, ದರ್ಶನ್ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬೈಲಕುಪ್ಪೆ ಲಾಸಾ ಬಾರ್ ಮಾಲೀಕ ದವಾಸಿರಿಂಗ್, ಭರತ್ ಅರಸ್, ಮಂಜುನಾಥ್ ಸ್ನೇಹಿತರು ಸೇರಿದಂತೆ ಹಲವಾರು ಮಂದಿ ಸಂತಾಪ ಸೂಚಿಸಿದರು. ಅಳೆಯೂರಿನ ರುದ್ರಭೂಮಿಯಲ್ಲಿ ಅಂತ್ಯ ಸಂಸ್ಕಾರ ನೆರವೇರಿತು.

ಗುತ್ತಿಗೆದಾರನ ನಿರ್ಲಕ್ಷ್ಯದಿಂದ ಹಳ್ಳಕ್ಕೆ ಬಿದ್ದು, ವ್ಯಕ್ತಿಗೆ ಗಾಯ

ನಂಜನಗೂಡು: ತಂಗಿಯ ನಿಶ್ಚಿತಾರ್ಥ ಕಾರ್ಯಕ್ರಮಕ್ಕೆ ಸಾಮಗ್ರಿಗಳನ್ನು ತರಲು ಬೈಕಿನಲ್ಲಿ ತೆರಳಿದ್ದ ಯುವಕ ರಸ್ತೆ ಕಾಮಗಾರಿ ನಡೆಯುತ್ತಿದ್ದ ಭಾರೀ ಹಳ್ಳಕ್ಕೆ ಬಿದ್ದು ಕೋಮಾ ಸ್ಥಿತಿಗೆ ತೆರಳಿದ ಘಟನೆ ಸಂಭವಿಸಿದೆ.

ಹೆಡಿಯಾಲ ಗ್ರಾಮದ ವೀರಭದ್ರಸ್ವಾಮಿ ಘಟನೆಯಲ್ಲಿ ಗಾಯಗೊಂಡ ಯುವಕನಾಗಿದ್ದು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ತಂಗಿಯ ನಿಶ್ಚಿತಾರ್ಥ ಹಿನ್ನೆಲೆ ಸಾಮಗ್ರಿಗಳನ್ನು ಖರೀದಿಸಲು ವೀರಭದ್ರಸ್ವಾಮಿ ಮಾ.16ರಂದು ಹೆಡಿಯಾಲ ಗ್ರಾಮದಿಂದ ಹುಲ್ಲಹಳ್ಳಿಗೆ ತನ್ನ ಪಲ್ಸರ್ ಬೈಕ್‌ನಲ್ಲಿ ತೆರಳಿದ್ದ ವೇಳೆ ತಾಲೂಕಿನ ಹುರ ಹುಲ್ಲಹಳ್ಳಿ ಮುಖ್ಯ ರಸ್ತೆಯ ಮಾದಾಪುರ ಹಾಗೂ ಕಾರ್ಯ ಗ್ರಾಮದ ಮಧ್ಯದಲ್ಲಿ ರಾಜ್ಯ ಹೆದ್ದಾರಿಯ ರಸ್ತೆ ಅಭಿವೃದ್ಧಿಗಾಗಿ ಡೆಕ್ ಕಾಮಗಾರಿ ನಡೆಸುವ ಸಲುವಾಗಿ ತೆಗೆಯಲಾಗಿದ್ದ ಭಾರಿ ಹಳ್ಳಕ್ಕೆ ಉರುಳಿ ಬಿದ್ದಿದ್ದಾನೆ. ಪರಿಣಾಮ ಕಾಮಗಾರಿಗಾಗಿ ಅಳವಡಿಸಲಾಗಿದ್ದ ಕಬ್ಬಿಣದ ರಾಡ್‌ಗಳು ಕಣ್ಣು ಹಾಗೂ ತಲೆ ಭಾಗವನ್ನು ಚುಚ್ಚಿ ಗಾಯಗೊಳಿಸಿದೆ. ಇದರಿಂದ ಕೋಮಾ ಸ್ಥಿತಿಗೆ ತಲುಪಿದ ವೀರಭದ್ರಸ್ವಾಮಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆ



ಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಸ್ತೆ ಅಭಿವೃದ್ಧಿಯ ಗುತ್ತಿಗೆ ಪಡೆದಿದ್ದ ಗುತ್ತಿಗೆದಾರ ಹಳ್ಳ ತೆಗೆಯುವ ವೇಳೆ ಯಾವುದೇ ಮುನ್ನೆಚ್ಚರಿಕೆ ಕ್ರಮಗಳನ್ನು ಹಾಗೂ ಎಚ್ಚರಿಕೆ ಫಲಕ ಅಳವಡಿಸದ ಕಾರಣ ಈ ದುರ್ಘಟನೆ ಸಂಭವಿಸಿದೆ, ಜೊತೆಗೆ ಶುಭ ಕಾರ್ಯಕ್ರಮವು ಕೂಡ ಸ್ಥಗಿತಗೊಂಡಿದೆ ಆದ್ದರಿಂದ ಗುತ್ತಿಗೆದಾರನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಯುವಕನ ತಂದೆ ಬಸವಲಿಂಗಪ್ಪ ಹುಲ್ಲಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ

ಮೈಸೂರು ಮಿತ್ರ ಶನಿವಾರ 22 ಮಾರ್ಚ್ 2025

ಎನ್‌ಸಿಸಿ, ಎನ್‌ಎಸ್‌ಎಸ್ ವಿದ್ಯಾರ್ಥಿಗಳಲ್ಲಿ ಜೀವನಕಲೆ ಕಲಿಸುತ್ತವೆ

● ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಅಭಿಮತ ● ಯುವಜನೋತ್ಸವ ಸಮಾರೋಪ

ಮೈಸೂರು,ಮಾ.21(ಎಂಟಿವೈ)– ಎನ್‌ಸಿಸಿ ಹಾಗೂ ಎನ್‌ಎಸ್‌ಎಸ್ ಸೇರಿದಂತೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ವಿದ್ಯಾರ್ಥಿಗಳು ಜೀವನದಲ್ಲಿ ಎದುರಾಗುವ ಕ್ಲಿಷ್ಟಕರ ಸನ್ನಿವೇಶವನ್ನು ಸಮರ್ಥವಾಗಿ ಎದುರಿಸಬಲ್ಲ ಸಾಮರ್ಥ್ಯ ಮೈಗೂಡಿಸಿಕೊಂಡಿರುತ್ತಾರೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ಎನ್‌ಎಸ್‌ಎಸ್ ಭವನದಲ್ಲಿ ಶುಕ್ರವಾರ ನಡೆದ ಯುವಜನೋತ್ಸವ ಕಾರ್ಯಕ್ರಮ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶಾಲಾ–ಕಾಲೇಜು ದಿನಗಳಲ್ಲಿ ಎರಡು ವರ್ಗದ ವಿದ್ಯಾರ್ಥಿಗಳನ್ನು ಕಾಣುತ್ತೇವೆ. ಒಂದು ವರ್ಗದ ವಿದ್ಯಾರ್ಥಿಗಳು ಕೇವಲ ಪಠ್ಯಚಟುವಟಿಕೆಯಲ್ಲಿ ತೊಡಗಿಸಿಕೊಂಡು ಹೆಚ್ಚಿನ ಅಂಕ ಗಳಿಸುವ ಗುರಿಯನ್ನು ಹೊಂದಿದ್ದರೆ, ಮತ್ತೊಂದು ವರ್ಗ ಪಠ್ಯೇತರ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುತ್ತದೆ. ಈ ಪಂಗಡ ಜೀವನ ಕಲೆ ಬಲ್ಲವರಾಗಿರುತ್ತಾರೆ.

ಎನ್‌ಎಸ್‌ಎಸ್ ಹಾಗೂ ಎನ್‌ಸಿಸಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ಜೀವನದ ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮಾಡಲಿದ್ದಾರೆ. ಔದ್ಯೋಗಿಕ ಕ್ಷೇತ್ರಗಳು ಮಾತ್ರವಲ್ಲದೆ, ಸಾಂಸಾರಿಕ ಜೀವನದಲ್ಲೂ ಯಶಸ್ಸು ಸಾಧಿಸುವ ಗುಣ ಹೊಂದಿದ್ದಾರೆ. ಎದುರಾಗುವ ಯಾವುದೇ ಕ್ಲಿಷ್ಟಕರ ಸನ್ನಿವೇಶವನ್ನು ಸಮರ್ಥವಾಗಿ ನಿಭಾಯಿಸುವ ಶಕ್ತಿಯನ್ನು ಎನ್‌ಎಸ್‌ಎಸ್, ಎನ್‌ಸಿಸಿ ಕಲಿಸುತ್ತವೆ. ಎಲ್ಲಾ ಕಡೆ ಒಂದು ವಿಶೇಷ ಸ್ಥಾನಮಾನ ಲಭಿಸಲಿದೆ. ಉದ್ಯೋಗದಲ್ಲೂ ವಿಶೇಷವಾಗಿ ಪರಿಗಣಿಸಲಾಗುತ್ತದೆ. ಬೇರೆ ವಲಯಗಳಲ್ಲೂ ಎನ್‌ಎಸ್‌ಎಸ್ ವಿದ್ಯಾರ್ಥಿಗಳಿಗೆ ಆದ್ಯತೆ ನೀಡುತ್ತಾರೆ. ಯುವಜನೋತ್ಸವ ನಿಮ್ಮ ಭವಿಷ್ಯ ರೂಪಿಸುತ್ತದೆ. ನಿಮಗೆ ಉತ್ತಮ ಭವಿಷ್ಯ ದೊರೆಯಲಿದೆ. ನೀವು ಸಾಂಸ್ಕೃತಿಕವಾಗಿ ಮನಸ್ಸನ್ನು ಸನ್ನದ್ಧಗೊಳಿಸಿ ಕೊಂಡರೆ ಮುಂದೆ ಯಾವುದೇ ಸಮಸ್ಯೆಗಳು ಬಂದರೂ ನಿಭಾಯಿಸಬಹುದು ಎಂದು ತಿಳಿಸಿದರು.

ಇದಕ್ಕೂ ಮುನ್ನ ರಾಷ್ಟ್ರೀಯ ಸೇವಾ ಯೋಜನೆಯ ಪ್ರಾದೇಶಿಕ ನಿರ್ದೇಶಕ ಡಿ.ಕಾರ್ತಿಕೇಯನ್ ಸಮಾರೋಪ ಭಾಷಣ ಮಾಡಿ, ಕಳೆದ ಐದು ದಿನಗಳಿಂದ ನಡೆದ ಯುವಜನೋತ್ಸವದಲ್ಲಿ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳಿಂದ ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಆಗಮಿಸಿ, ಸಾಕಷ್ಟು ವಿಷಯದ ಬಗ್ಗೆ ಸಕ್ರಿಯವಾಗಿ ವಿವಿಧ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದೀರಿ. ಶಿಬಿರದಲ್ಲಿ ಕಲಿತ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅತ್ಯುತ್ತಮವಾಗಿ ಯುವಜನೋತ್ಸವ ಮೂಡಿ ಬಂದಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಪ್ರಶಸ್ತಿ ಪ್ರದಾನ: ವಿವಿಧ ಚಟುವಟಿಕೆಯಲ್ಲಿ ಉತ್ತಮ ಪ್ರದರ್ಶನ ನೀಡಿದ ಲೇಖನ ಹಾಗೂ ಸುಪ್ರಿತ್ ಅತ್ಯುತ್ತಮ ಸ್ವಯಂ ಸೇವಕ ಪ್ರಶಸ್ತಿ ಪಡೆದುಕೊಂಡರು. ವಿವಿಧ ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ನೀಡಿದ ಮಂಗಳೂರು ವಿಶ್ವವಿದ್ಯಾನಿಲಯದ ಎನ್‌ಎಸ್‌ಎಸ್ ತಂಡಕ್ಕೆ ಮೊದಲ ಬಹುಮಾನ, ರಾಯಚೂರು ಅಗ್ರಿಕಲ್ಚರಲ್ ವಿವಿಗೆ ಎರಡನೇ ಬಹುಮಾನ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮೂರನೆ ಬಹುಮಾನ ವಿತರಿಸಲಾಯಿತು. ವಸ್ತು ಪ್ರದರ್ಶನ ಸ್ಪರ್ಧೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಪ್ರಥಮ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ದ್ವಿತೀಯ ಬಹುಮಾನ ಹಾಗೂ ರಾಯಚೂರು ಅಗ್ರಿಕಲ್ಚರಲ್ ವಿವಿಗೆ ಮೂರನೇ ಬಹುಮಾನ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾದ ಪ್ರೊ.ಶಬ್ಬೀರ್ ಮೊಹಮದ್ ಮುಸ್ತಫಾ, ಮಹದೇಶು, ಎನ್‌ಎಸ್‌ಎಸ್ ಕಾರ್ಯಕ್ರಮ ಸಂಯೋಜನಾಧಿಕಾರಿ ಪ್ರೊ. ಎಂ.ಬಿ.ಸುರೇಶ್, ಮೈಸೂರು ವಿಶ್ವವಿದ್ಯಾನಿಲಯದ ಸಂಜೆ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಡಾ.ಆರ್.ನಿಂಗರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಸರಸ್ವತಿಪುರಂನಲ್ಲಿರುವ ಎನ್‌ಎಸ್‌ಎಸ್ ಭವನದಲ್ಲಿ ನಡೆದ ಯುವ ಜನೋತ್ಸವ ಸಮಾರೋಪ ಸಮಾರಂಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳು ಪ್ರಶಸ್ತಿ ಸ್ವೀಕರಿಸಿದರು.

ದೆಹಲಿ ಹೈಕೋರ್ಟ್ ನ್ಯಾಯಾಧೀಶರ ಮನೆಯಲ್ಲಿ ಕಂತೆ ಕಂತೆ ಹಣ ಪತ್ತೆ!

ನ್ಯಾಯಾಂಗ ವ್ಯವಸ್ಥೆಯಲ್ಲಿ ತಲ್ಲಣ; ಜಡ್ಜ್ ವರ್ಗಾವಣೆಗೆ ಕೊಲಿಜಿಯಂ ಆದೇಶ

ನವದೆಹಲಿ, ಮಾ.21– ಕಳೆದ ವಾರ ದೆಹಲಿ ಹೈಕೋರ್ಟ್ ನ್ಯಾಯಾಧೀಶ ಯಶವಂತ್ ವರ್ಮಾ ಅವರ ಮನೆಯಲ್ಲಿ ಸಂಭವಿಸಿದ ಬೆಂಕಿ ಅವಘಡದ ಸಮಯದಲ್ಲಿ ಲೆಕ್ಕಕ್ಕೆ ಸಿಗದ ಭಾರೀ ಪ್ರಮಾಣದ ಹಣ ಪತ್ತೆಯಾಗಿದ್ದು, ಸುಪ್ರೀಂ ಕೋರ್ಟ್ ಕೊಲಿಜಿಯಂ ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಿದೆ.



ಜಡ್ಜ್ ನಿವಾಸದಲ್ಲಿ ಪತ್ತೆಯಾದ ಅಪಾರ ಪ್ರಮಾಣದ ಹಣ ಕುರಿತು ಸುಪ್ರೀಂ ಕೋರ್ಟ್ ಸಿಜೆಐಗೆ ಮಾಹಿತಿ ನೀಡಲಾಗಿತ್ತು. ಸುಪ್ರೀಂ ಚೀಫ್ ಜಸ್ಟೀಸ್ ಸಂಜೀವ್ ಖನ್ನಾ ನೇತೃತ್ವದ ಕೊಲಿಜಿಯಂ ಜಸ್ಟೀಸ್ ವರ್ಮಾ ಅವರನ್ನು ವರ್ಗಾಯಿಸುವ ನಿರ್ಧಾರ ತೆಗೆದುಕೊಂಡಿದೆ.

ಮಾರ್ಚ್ 14ರಂದು ಅವರ ನಿವಾಸದಲ್ಲಿ ಬೆಂಕಿ ಕಾಣಿಸಿಕೊಂಡಾಗ ನ್ಯಾಯಮೂರ್ತಿ ಯಶವಂತ್ ವರ್ಮಾ ನಗರದಲ್ಲಿ ಇರಲಿಲ್ಲ. ಹೀಗಾಗಿ ಅವರ ಕುಟುಂಬ ಸದಸ್ಯರು ಅಗ್ನಿಶಾಮಕ ಮತ್ತು ರಕ್ಷಣಾ ಸೇವೆಗಳು ಮತ್ತು ಪೊಲೀಸರಿಗೆ ಕರೆ ಮಾಡಿದ್ದರು. ಬೆಂಕಿಯನ್ನು ನಂದಿಸಿದ ನಂತರ, ಪೊಲೀಸರು ಮತ್ತು ಅಗ್ನಿಶಾಮಕ ದಳದವರು ಮನೆ ಒಳಗೆ ಪ್ರವೇಶಿಸಿದಾಗ, ಒಂದು ಕೋಣೆಯಲ್ಲಿ ಅಪಾರ ಪ್ರಮಾಣದ ನಗದು ಪತ್ತೆಯಾಗಿದೆ. ಅದನ್ನು ಗಮನಿಸಿದ ಪೊಲೀಸರಿಗೆ ಇದು ಅನಾಮಧೇಯ ಹಣ ಎಂಬ ಅನುಮಾನ ಬಂದಿದೆ. ಇದರ ನಂತರ, ದೆಹಲಿ ಪೊಲೀಸರು ಗೃಹ ಸಚಿವಾಲಯಕ್ಕೆ ಮಾಹಿತಿ ನೀಡಿದರು. ಗೃಹ ಸಚಿವಾಲಯವು ಸಿಜೆಐಗೆ ವರದಿ ಕಳುಹಿಸಿತು.

ನ್ಯಾಯಮೂರ್ತಿ ವರ್ಮಾ ಅವರ ವರ್ಗಾವಣೆಯ ಬಗ್ಗೆ ಸರ್ವಾನುಮತದಿಂದ ನಿರ್ಧರಿಸಲು ಕೊಲಿಜಿಯಂ ಅನ್ನು ಪ್ರೇರೇಪಿಸಿತು. ಅವರನ್ನು ಅಲಹಾಬಾದ್‌ನಲ್ಲಿರುವ ಅವರ ಮಾತೃ ನ್ಯಾಯಾಲಯಕ್ಕೆ ವಾಪಸ್ ಕಳುಹಿಸಲಾಗಿದೆ. ಅಕ್ಟೋಬರ್ 2021ರಲ್ಲಿ ದೆಹಲಿ ಹೈಕೋರ್ಟ್‌ಗೆ ನೇಮಕಗೊಳ್ಳುವ ಮೊದಲು ಅಲಹಾಬಾದ್ ನ್ಯಾಯಾಲಯದಲ್ಲಿ ಸೇವೆ ಸಲ್ಲಿಸಿದ್ದರು ಎಂದು ಟೈಮ್ಸ್ ನೌ ವರದಿ ಮಾಡಿದೆ.

ನ್ಯಾಯಾಧೀಶರ ಮನೆಯಲ್ಲಿ ಕೋಟಿ–ಕೋಟಿ ಹಣ ಸಿಕ್ಕಿಲ್ಲ; ಅಗ್ನಿಶಾಮಕ ಸೇವೆಗಳ ಮುಖ್ಯಸ್ಥ ಅತುಲ್ ಗಾರ್ಗ್

ನವದೆಹಲಿ, ಮಾ.21– ದೆಹಲಿ ಹೈಕೋರ್ಟ್ ನ್ಯಾಯಾಧೀಶ ಯಶವಂತ್ ವರ್ಮಾ ಅವರ ಮನೆಯಲ್ಲಿ ಸಂಭವಿಸಿದ ಬೆಂಕಿ ಅವಘಡದ ಸಮಯದಲ್ಲಿ ಲೆಕ್ಕಕ್ಕೆ ಸಿಗದ ಭಾರೀ ಪ್ರಮಾಣದ ಹಣ ಪತ್ತೆಯಾಗಿತ್ತು ಎಂಬ ವರದಿಯನ್ನು ದೆಹಲಿ ಅಗ್ನಿಶಾಮಕ ಸೇವೆಗಳ ಮುಖ್ಯಸ್ಥ ಅತುಲ್ ಗಾರ್ಗ್ ಶುಕ್ರವಾರ ತಳ್ಳಿ ಹಾಕಿದ್ದಾರೆ. ನ್ಯಾಯಾಧೀಶರ ಮನೆಯಲ್ಲಿ ಬೆಂಕಿ ನಂದಿಸುವಲ್ಲಿ ವೇಳೆಯಲ್ಲಿ ಅಗ್ನಿಶಾಮಕ ಸಿಬ್ಬಂದಿ ಯಾವುದೇ ಹಣ ಪತ್ತೆ ಮಾಡಿಲ್ಲ ಎಂದು ತಿಳಿಸಿದ್ದಾರೆ. ಮಾರ್ಚ್ 14 ರಂದು ರಾತ್ರಿ 11.35 ಗಂಟೆಗೆ ವರ್ಮಾ ಅವರ ದೆಹಲಿಯ ಲುಟ್ಯೆನ್ಸ್ ನಿವಾಸದಲ್ಲಿ ಬೆಂಕಿ ಕಾಣಿಸಿಕೊಂಡಿರುವ ಬಗ್ಗೆ ನಿಯಂತ್ರಣ ಕೊಠಡಿಗೆ ಕರೆ ಬಂದಿತ್ತು. ತಕ್ಷಣವೇ ಎರಡು ಅಗ್ನಿಶಾಮಕ ವಾಹನಗಳು ಸ್ಥಳಕ್ಕೆ ದೌಡಾಯಿಸಿದವು.

ರಾತ್ರಿ 11–43ಕ್ಕೆ ಅಗ್ನಿ ಶಾಮಕ ವಾಹನಗಳು ಸ್ಥಳಕ್ಕೆ ತೆರಳಿದವು. ಸ್ಟೇಷನರಿ ಮತ್ತು ಗೃಹೋಪಯೋಗಿ ವಸ್ತುಗಳನ್ನು ಸಂಗ್ರಹಿಸಿದ ಸ್ಟೋರ್ ರೂಮ್‌ನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. 15 ನಿಮಿಷಗಳ ಕಾರ್ಯಾಚರಣೆ ಬಳಿಕ ಬೆಂಕಿಯನ್ನು ನಂದಿಸಲಾಯಿತು ಎಂದು ಅತುಲ್ ಗಾರ್ಗ್ ತಿಳಿಸಿದ್ದಾರೆ.

ಮಂಚೇಗೌಡನಕೊಪ್ಪಲಲ್ಲಿ ವಿಭಾಗ ಮಟ್ಟದ ಕಬ್ಬಡಿ ಪಂದ್ಯಾವಳಿಗೆ ಚಾಲನೆ



ಮೈಸೂರು ಮಂಚೇಗೌಡನಕೊಪ್ಪಲಿನ ಗ್ರಾಮದೇವತೆ ಮಾರಿಹಬ್ಬದ ಪ್ರಯುಕ್ತ ಮೈಸೂರು ವಿಭಾಗ ಮಟ್ಟದ ಕಬ್ಬಡಿ ಪಂದ್ಯಾವಳಿ(ಅರಿಲಮ್ಮ ಕಪ್–2025)ಗೆ ಶುಕ್ರವಾರ ಚಾಲನೆ ನೀಡಲಾಯಿತು.

ಮೈಸೂರು, ಮಾ.21(ಎಂಕೆ)– ಮೈಸೂರು ಮಂಚೇಗೌಡನಕೊಪ್ಪಲಿನ ಗ್ರಾಮದೇವತೆ ಮಾರಿಹಬ್ಬದ ಪ್ರಯುಕ್ತ ಎಂಜಿಕೆ ಯೂತ್ಸ್ ಸ್ಪೋರ್ಟ್ ಕ್ಲಬ್ ಸಹಯೋಗದೊಂದಿಗೆ ಆಯೋಜಿಸಿರುವ ಮೈಸೂರು ವಿಭಾಗ ಮಟ್ಟದ ಕಬ್ಬಡಿ ಪಂದ್ಯಾವಳಿ(ಅರಿಲಮ್ಮ ಕಪ್–2025)ಗೆ ಶುಕ್ರವಾರ ಚಾಲನೆ ನೀಡಲಾಯಿತು.

ಪ್ರೊಕಬ್ಬಡಿ ಮಾದರಿಯಲ್ಲಿ ನಡೆಯುವ ಮೂರು ದಿನಗಳ ಹೊನಲು ಬೆಳಕಿನ ಕಬ್ಬಡಿ ಪಂದ್ಯಾವಳಿಗೆ ವೈದ್ಯ ಡಾ.ಶುಶ್ರೂತ್‌ಗೌಡ ಚಾಲನೆ ನೀಡಿದರು. ನಗರಪಾಲಿಕೆ ಮಾಜಿ ಸದಸ್ಯೆ ಪ್ರೇಮಾ ಶಂಕರೇಗೌಡ, ಮಂಚೇಗೌಡನ ಕೊಪ್ಪಲು ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿ ರವಿ ಮಂಚೇಗೌಡನ ಕೊಪ್ಪಲು, ಮುಖಂಡರಾದ ನಾಗರಾಜು, ನಾರಾಯಣ, ಪ್ರಭಾಕರ್, ಪುಟ್ಟರಾಜು, ಮರಿಸ್ವಾಮಿ ಮತ್ತಿತರರಿದ್ದರು.

ಕಬ್ಬಡಿ ಪಂದ್ಯಾವಳಿಯಲ್ಲಿ 8 ತಂಡಗಳು ಭಾಗವಹಿಸಿದ್ದು, ಪ್ರಥಮ ಬಹುಮಾನ 1,30,000 ರೂ., ದ್ವಿತೀಯ ಬಹುಮಾನ 70,000 ರೂ., ತೃತೀಯ ಹಾಗೂ ನಾಲ್ಕನೆ ಬಹುಮಾನ 30,000 ರೂ. ಜೊತೆಗೆ ಆಕರ್ಷಕ ಟ್ರೋಫಿ ನೀಡಲಾಗುವುದು. ಮಾ.23ರಂದು ಭಾನುವಾರ ಫೈನಲ್ ಪಂದ್ಯಗಳು ನಡೆಯಲಿವೆ.

ಬೆಂಗಳೂರು ವೈಭವ್ ಹೋಟೆಲ್ ಸಪ್ಲೈಯರ್ ರೆಹಮಾನ್ ಬ್ಯಾಗಲ್ಲಿ ಹ್ಯಾಂಡ್ ಗ್ರೆನೇಡ್ ಪತ್ತೆ!

ಬೆಂಗಳೂರು, ಮಾ.21– ವೈಭವ್ ಹೋಟೆಲ್‌ನ ಸಪ್ಲೈಯರ್ ಬ್ಯಾಗ್‌ನಲ್ಲಿ ಹ್ಯಾಂಡ್ ಗ್ರೆನೇಡ್ ಪತ್ತೆಯಾಗಿದೆ. ಇದನ್ನು ಕಂಡು ಆತಂಕಗೊಂಡ ಹೋಟೆಲ್ ಸಿಬ್ಬಂದಿ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ಪರಿಶೀಲನೆ ನಡೆಸಿ, ಗ್ರೆನೇಡ್ ಮತ್ತು ಸಪ್ಲೈಯರ್ ಅಬ್ದುಲ್ ರೆಹಮಾನ್ ವಶಕ್ಕೆ ಪಡೆದು ತೀವ್ರ ವಿಚಾರಣೆ ನಡೆಸಿದ್ದಾರೆ.

ಬೆಂಗಳೂರಿನ ವೈಭವ್ ಹೋಟೆಲ್‌ನಲ್ಲಿ ಅಬ್ದುಲ್ ರೆಹಮಾನ್ ಎಂಬಾತ ಸಪ್ಲೈಯರ್ ಆಗಿ ಕೆಲಸ ಮಾಡುತ್ತಿದ್ದ. ತಾನು ಬೆಳ್ಳಹಳ್ಳಿಯ ನಿವಾಸಿ ಎಂದು ಹೇಳಿಕೊಂಡಿದ್ದ. ಈ ವೇಳೆ ಹೋಟೆಲ್ ಸಿಬ್ಬಂದಿ ಆಧಾರ ಕಾರ್ಡ್ ತೋರಿಸುವಂತೆ ಕೇಳಿದ್ದಾರೆ. ಅಬ್ದುಲ್ ಆಧಾರ್ ಕಾರ್ಡ್ ತೋರಿಸದೆ ಸತಾಯಿಸಿದ್ದನು. ಇದರಿಂದ ಎಚ್ಚೆತ್ತ ಸಿಬ್ಬಂದಿ ಶೆಡ್‌ನಲ್ಲಿದ್ದ ರೆಹಮಾನ್‌ನ ಬ್ಯಾಗ್ ಚೆಕ್ ಮಾಡಿದಾಗ ಹ್ಯಾಂಡ್ ಗ್ರನೇಡ್ ಪತ್ತೆಯಾಗಿತ್ತು.

ಸದ್ಯ ವಶಕ್ಕೆ ಪಡೆದಿರುವ ಗ್ರೆನೇಡ್ ಅನ್ನು ಪೊಲೀಸರು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (FSL) ರವಾನಿಸಿದ್ದಾರೆ. ಇನ್ನು ಸಂಪಿಗೆಹಳ್ಳಿ ಠಾಣೆ ಪೊಲೀಸರು ಅಬ್ದುಲ್ ರೆಹಮಾನ್‌ನ ತೀವ್ರ ವಿಚಾರಣೆ ನಡೆಸಿದ್ದಾರೆ. ವಿಚಾರಣೆ ವೇಳೆ ಅಬ್ದುಲ್ ಬಾಂಬ್ ಮಾದರಿಯ ವಸ್ತು ರಸ್ತೆಯಲ್ಲಿ ಸಿಕ್ಕಿತ್ತು ಎಂದು ಹೇಳಿದ್ದಾನೆ ಎನ್ನಲಾಗಿದೆ. ಸದ್ಯ ಸಂಪಿಗೆಹಳ್ಳಿ ಪೊಲೀಸರು ಅಬ್ದುಲ್ ರೆಹಮಾನ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ. ಸದ್ಯ ಪೊಲೀಸರು ಗ್ರೇನೇಡ್ ಎಲ್ಲಿ ಇತ್ತು? ಅದು ಹೇಗೆ ಸಿಕ್ತು? ಅದನ್ನ ಏಕೆ ತೆಗೆದುಕೊಂಡುಬಂದಿದ್ದ, ಏನಾದರೂ ಬ್ಲಾಸ್ಟ್ ಮಾಡುವ ಪ್ಲ್ಯಾನ್ ಇತ್ತಾ... ಹೀಗೆ ಎಲ್ಲಾ ಆಯಾಮಗಳಲ್ಲಿ ತನಿಖೆ ನಡೆಸಿದ್ದಾರೆ.

ವಿಮಾನಯಾನಕ್ಕೆ ಕಳೆದೆರಡು ವರ್ಷದಲ್ಲಿ ಬರೋಬ್ಬರಿ 34 ಕೋಟಿ ವೆಚ್ಚ

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾರಾಟದ್ದೆ 32 ಕೋಟಿ!

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿ ಬಾರಿ ಬೆಂಗಳೂರಿನಿಂದ ತಮ್ಮ ತವರು ಜಿಲ್ಲೆ ಮೈಸೂರಿಗೆ ವೈಮಾನಿಕ ಮಾರ್ಗದಲ್ಲಿ ಪ್ರಯಾಣಿಸಿದಾಗಲೆಲ್ಲಾ 10ರಿಂದ 20 ಲಕ್ಷ ರೂ. ವೆಚ್ಚವಾಗಿದೆ.

ಕಳೆದ ವರ್ಷ ಮಾರ್ಚ್‌ನಲ್ಲಿ ಸಿದ್ದರಾಮಯ್ಯ ಎರಡು ದಿನಗಳಲ್ಲಿ ಎರಡು ಬಾರಿ 34.5 ಲಕ್ಷ ರೂ.ಗಿಂತ ಹೆಚ್ಚು ವೆಚ್ಚದ ಚಾರ್ಟರ್ಡ್ ವಿಮಾನದಲ್ಲಿ ಮೈಸೂರಿಗೆ ಪ್ರಯಾಣಿಸಿದ್ದಾರೆ ಎಂದು ರಾಜ್ಯ ಸರ್ಕಾರದ ಅಂಕಿ–ಅಂಶಗಳು ಹೇಳುತ್ತಿವೆ.

ಸಾಮಾನ್ಯ ಪ್ರಯಾಣಿಕರಿಗೆ ಮೈಸೂರು–ಬೆಂಗಳೂರು ನಡುವಿನ 150 ಕಿ.ಮೀ. ಏಕಮುಖ ಸಂಚಾರಕ್ಕೆ ಇಂಧನ ಹಾಗೂ ಟೋಲ್ ಸೇರಿ 2 ಸಾವಿರ ರೂ. ಖರ್ಚಾಗಬಹುದು. ನೂತನ ಎಕ್ಸ್‌ಪ್ರೆಸ್ ವೇಯಲ್ಲಿ ಉಭಯ ನಗರಗಳ ನಡುವಿನ ಪ್ರಯಾಣಕ್ಕೆ 2 ತಾಸಿಗಿಂತ ಕಡಿಮೆ ಸಮಯ ಹಿಡಿಯುತ್ತದೆ.

ವಿಧಾನ ಪರಿಷತ್ತಿನಲ್ಲಿ ಜೆಡಿಎಸ್ ಸದಸ್ಯ ಜವರಾಯಿ ಗೌಡ ಅವರ ಪ್ರಶ್ನೆಗೆ ರಾಜ್ಯ ಸರ್ಕಾರ ನೀಡಿರುವ ಉತ್ತರ ಅಚ್ಚರಿ ಮೂಡಿಸಿದೆ. 2023ರ ಮಾರ್ಚ್‌ನಿಂದ 2025ರ ಜನವರಿವರೆಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಕರ್ನಾಟಕ ರಾಜ್ಯಪಾಲರು ಮತ್ತು ಭಾರತದ ಮಾಜಿ ಮುಖ್ಯ ನ್ಯಾಯಮೂರ್ತಿಗಳು ಚಾರ್ಟರ್ಡ್ ವಿಮಾನ ಮತ್ತು ಹೆಲಿಕಾಪ್ಟರ್ ಬಳಸಿದ ವಿವರವನ್ನು ಬಹಿರಂಗಪಡಿಸಿದ್ದು, ಈ ಅವಧಿಯಲ್ಲಿ ಚಾರ್ಟರ್ಡ್ ವಿಮಾನಗಳ ಬಳಕೆಗೆ ಸಂಬಂಧಿಸಿದ 34 ಕೋಟಿ ರೂ. ಮೌಲ್ಯದ ಬಿಲ್‌ಗಳಲ್ಲಿ ಸುಮಾರು 32 ಕೋಟಿ ರೂ.



ಸಿದ್ದರಾಮಯ್ಯ ಅವರ ಲೆಕ್ಕದಲ್ಲಿದೆ.

ಮೇ 2023ರಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೇವಲ ಒಂದು ವಾರದ ನಂತರ ಸಿದ್ದರಾಮಯ್ಯ, ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ದೆಹಲಿಗೆ ಪ್ರಯಾಣಿಸಲು ವಿಮಾನ ಬಾಡಿಗೆಗೆ ಪಡೆದಿದ್ದರು. ಇದಕ್ಕೆ 41,53,600 ವೆಚ್ಚವಾಗಿದೆ. ಸಚಿವ ಸಂಪುಟ ರಚನೆ ಮಾತುಕತೆ ಉತ್ತುಂಗದಲ್ಲಿದ್ದ ಕಾರಣ ಸಿಎಂ ಜೊತೆಗೆ ಅವರ ಆಪ್ತರೂ ಅವರೊಂದಿಗಿದ್ದರು. ಪರಿಷತ್ತಿನಲ್ಲಿ ಸರ್ಕಾರ ನೀಡಿದ ಮಾಹಿತಿ ಪ್ರಕಾರ ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ನಂತರ ಅವರ ಚಾರ್ಟರ್ಡ್ ವಿಮಾನ ಮತ್ತು ಹೆಲಿಕಾಪ್ಟರ್ ಬಳಕೆಯ ಬಿಲ್‌ಗಳು 32 ಕೋಟಿ ದಾಟಿವೆ.

ಮಾಜಿ ಸಿಜೆಐ ಡಿ.ವೈ.ಚಂದ್ರಚೂಡ್ ಮೂರು ಬಾರಿ ಚಾರ್ಟರ್ ಬಳಕೆಯ ಅಂಕಿ–ಅಂಶಗಳನ್ನೂ ಸೇರಿಸಲಾಗಿದೆ. ಅವರು ಕಳೆದ ವರ್ಷ ಮಾರ್ಚ್ 26 ರಂದು ತಿರುಪತಿಗೆ ಚಾರ್ಟರ್ಡ್ ವಿಮಾನದಲ್ಲಿ ಪ್ರಯಾಣಿಸಿದ್ದರ ವೆಚ್ಚ 10,85,600 ರೂ.ಗಳಾಗಿವೆ. ನಂತರ ಜುಲೈ 19ರಂದು ಬೆಂಗಳೂರಿನಿಂದ ಮಧುರೈಗೆ ತೆರಳಿ ವಾಪಸ್ಸಾಗಿದ್ದಾರೆ. ಅಕ್ಟೋಬರ್ 3ರಂದು ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣಿಸಿದ್ದರು. ಈ ಮೂರು ಪ್ರವಾಸಗಳಿಂದ ಕರ್ನಾಟಕಕ್ಕೆ 45 ಲಕ್ಷ ರೂ.ಗಳಿಗೂ ಹೆಚ್ಚು ವೆಚ್ಚವಾಗಿದೆ ಎಂದು ತಿಳಿಸಲಾಗಿದೆ.

ಇನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಬೆಂಗಳೂರು ಪೂರ್ವದಲ್ಲಿರುವ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಉತ್ತರದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ತೆರಳಲು ಹೆಲಿಕಾಪ್ಟರ್ ಬಾಡಿಗೆ ಪಡೆದಿದ್ದು, ಒಂದು ಗಂಟೆಗಿಂತ ಕಡಿಮೆ ಪ್ರಯಾಣಕ್ಕೆ 7,19,800 ರೂ. ಖರ್ಚು ಮಾಡಲಾಗಿದೆ. ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಅವರ ವಾಯುಯಾನಕ್ಕೆ 2023ರ ಜನವರಿಯಿಂದ 2024ರ ಜುಲೈವರೆಗೆ ರಾಜ್ಯ ಖಜಾನೆಯಿಂದ 1,75,62,466 ರೂ. ವೆಚ್ಚವಾಗಿದೆ. ಅವರು ಮುಂಬೈ ಮತ್ತು ಇಂದೋರ್‌ಗೆ ಪ್ರವಾಸ ಮಾಡಿದ್ದಾರೆ. ಅಲ್ಲದೆ ಕಳೆದ ವರ್ಷ ಮಾರ್ಚ್ 1ರಂದು ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ಪ್ರಯಾಣಿಸಿದ್ದಲ್ಲದೆ 5 ದಿನಗಳ ನಂತರ ಮತ್ತೊಮ್ಮೆ ವಿಮಾನ ಬಾಡಿಗೆಗೆ ಪಡೆದಿದ್ದು, ಈ ಎರಡು ಪ್ರವಾಸಕ್ಕೆ ತಲಾ 12,78,333 ರೂ. ವೆಚ್ಚವಾಗಿದೆ.

ವಿಪಕ್ಷ ಟೀಕೆ: ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರು ಧರಿಸುವ ಬಟ್ಟೆ, ಕೋಟ್, ಗಡಿಯಾರ ಮತ್ತು ಶೂಗಳ ಬಗ್ಗೆ ಟೀಕಿಸುತ್ತಾರೆ. ಆದರೆ ಸಿದ್ದರಾಮಯ್ಯ ಅವರು ವೈಮಾನಿಕ ಪ್ರಯಾಣಕ್ಕೆ ಕೋಟಿ ಕೋಟಿ ವ್ಯಯಿಸುತ್ತಿರುವ ಬಗ್ಗೆ ಬಾಯಿ ಬಿಡುತ್ತಿಲ್ಲ. ಸಾರ್ವಜನಿಕ ಹಣವನ್ನು ವೈಯಕ್ತಿಕ ಲಾಭಕ್ಕಾಗಿ ಬಳಸುವುದು ಹೇಗೆಂಬುದು ಕಾಂಗ್ರೆಸ್‌ಗೆ ಕರಗತವಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಆದರೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿಗಳು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಪ್ರಯಾಣಿಸಬೇಕಾಗುತ್ತದೆ. ವಾರಕ್ಕೆ ಎರಡರಿಂದ ಮೂರು ಬಾರಿ ಮಾತ್ರ ಮಂಗಳೂರು ಮತ್ತು ಕಲಬುರಗಿಗೆ ವಿಮಾನಗಳಿವೆ ಹಲವು ಸ್ಥಳಗಳಿಗೆ ವಿಮಾನ ಸೌಲಭ್ಯವೇ ಇಲ್ಲ. ಬಳ್ಳಾರಿ, ತೋರಣಗಲ್‌ಗೆ ವಿಮಾನವಿದೆಯಾದರೂ ಅಲ್ಲಿಂದ ಇತರ ಸ್ಥಳಗಳಿಗೆ ಹೋಗಬೇಕಾಗುತ್ತದೆ. ಸಮಯದ ಕೊರತೆಯಿರುವುದರಿಂದ ನಮ್ಮ ಮುಖ್ಯಮಂತ್ರಿ ಮಾತ್ರವಲ್ಲ, ಇತರ ರಾಜ್ಯಗಳ ಮುಖ್ಯಮಂತ್ರಿಗಳೂ ಕೂಡ ಪ್ರಯಾಣಕ್ಕಾಗಿ ಹೆಲಿಕಾಪ್ಟರ್‌ಗಳನ್ನು ಬಳಸುತ್ತಾರೆ. ಅದರಲ್ಲಿ ಯಾವುದೇ ತಪ್ಪಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

ಬೇಕು ಬೇಕಾದವರಿಗೆ ಕ್ಯಾಬಿನೆಟ್ ದರ್ಜೆ; ಹೊರೆ

ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರವು ಸ್ವಪಕ್ಷದ ನಾಯಕರ ಹಾಗೂ ಕಾರ್ಯಕರ್ತರನ್ನು ಸಮಾಧಾನಪಡಿಸಲು ಕ್ಯಾಬಿನೆಟ್ ದರ್ಜೆ ಸ್ಥಾನಗಳನ್ನು ಹಂಚಿಕೆ ಮಾಡಿದೆ. ಈ ಹಿನ್ನೆಲೆಯಲ್ಲಿ ಸುಮಾರು 14 ಮಂದಿಗೆ ಮನೆ, ಕಚೇರಿ, ಸಿಬ್ಬಂದಿ, ಪೊಲೀಸ್ ಬೆಂಗಾವಲಿರುವ ಅಧಿಕೃತ ಕಾರು, ಸಿಎಂ ವಿವೇಚನೆಗೆ ಅನುಗುಣವಾಗಿ ಭಾರೀ ವೇತನ ನೀಡಲಾಗುತ್ತಿದೆ. ಇದಕ್ಕಾಗಿ ರಾಜ್ಯದ ಖಜಾನೆಯಿಂದ ವ್ಯಯಿಸುತ್ತಿರುವುದು ಟೀಕೆಗೆ ಗುರಿಯಾಗಿದೆ.

ಕಳೆದ ವರ್ಷ ಫೆಬ್ರವರಿಯಲ್ಲಿ ದಿ ಪ್ರಿಂಟ್ ವರದಿ ಮಾಡಿದಂತೆ, ಸಿದ್ದರಾಮಯ್ಯ ತಮ್ಮ ಸಚಿವ ಸಂಪುಟದ ಹೊರಗಿನ ಸುಮಾರು 56 ಜನರಿಗೆ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ ನೀಡಿದ್ದಾರೆ. ಇದರಲ್ಲಿ ಸರ್ಕಾರದ ಸಲಹೆಗಾರರೂ ಇದ್ದಾರೆ. ಮುಖ್ಯಮಂತ್ರಿಗಳು, ವಿಶೇಷ ಸಲಹೆಗಾರರು ಮಾತ್ರವಲ್ಲದೆ ಕಾನೂನು, ಮಾಧ್ಯಮ, ವೈದ್ಯಕೀಯ ಮತ್ತು ಸಾಮಾನ್ಯ ಸಲಹೆಗಾರರನ್ನು ಹೊಂದಿದ್ದಾರೆ. ವಿವಿಧ ಮಂಡಳಿ ಮತ್ತು ಸಮಿತಿಗಳ ಅಧ್ಯಕ್ಷರು ಭಾರೀ ವೆಚ್ಚದ ವ್ಯಾಪ್ತಿಯಲ್ಲಿದ್ದಾರೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಮೇಲ್ವಿಚಾರಣೆಗೆ ಸಮಿತಿ ರಚಿಸಿ, ಪಕ್ಷದ ಕಾರ್ಯಕರ್ತರನ್ನು ನೇಮಿಸಿರುವುದು ಮತ್ತಷ್ಟು ಟೀಕೆಗೆ ಕಾರಣವಾಗಿದೆ. ರಾಷ್ಟ್ರೀಯ ಮಟ್ಟದ ಸಮಿತಿ ಅಧ್ಯಕ್ಷರು ಮತ್ತು ಐದು ಉಪಾಧ್ಯಕ್ಷರಿಗೆ ಕ್ಯಾಬಿನೆಟ್ ದರ್ಜೆ ಮತ್ತು ರಾಜ್ಯ ಸಚಿವರ ಸೌಲಭ್ಯಗಳಿಗೆ, ಜಿಲ್ಲಾ ಮತ್ತು ತಾಲೂಕು ಮಟ್ಟದ ಸಮಿತಿಗಳ ಅಧ್ಯಕ್ಷರಿಗೆ ಮಾಸಿಕ 25,000 ರಿಂದ 40,000 ರೂ.ಗಳ ಗೌರವ ಧನ ನೀಡಲು ಸರ್ಕಾರ ನಿರ್ಧರಿಸಿದ್ದು, ಈ ಮೂಲಕ ಪಕ್ಷದ ಕಾರ್ಯಕರ್ತರಿಗೆ 60 ಕೋಟಿ ರೂ. ಸಾರ್ವಜನಿಕ ಹಣವನ್ನು ನೀಡುತ್ತಿದೆ ಎಂಬುದು ಬಿಜೆಪಿ ಆರೋಪವಾಗಿದೆ. ಆದರೆ, ಉಪ ಮುಖ್ಯಮಂತ್ರಿ ಶಿವಕುಮಾರ್, ಪಕ್ಷವನ್ನು ಅಧಿಕಾರಕ್ಕೆ ತಂದ ಕಾರ್ಯಕರ್ತರಿಗೆ ಪ್ರತಿಫಲ ನೀಡುವುದು ಸರ್ಕಾರದ ಇಚ್ಛೆ ಎಂದು ಹೇಳಿದ್ದನ್ನು ಸ್ಮರಿಸಬಹುದು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಖಡ್ಗಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೀಮ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬಡಾಸ್ ರವಿಕುಮಾರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಯೂರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ಅಸ್ತ್ರಂ ದಿ ಸೀಕ್ರೆಟ್ (ತ)	4 ಪ್ರದರ್ಶನಗಳು
ಸಂಗಂ	
ಬರ್ಗೆಟ್ ಬಸ್ಯಾ (ಕ)	4 ಪ್ರದರ್ಶನಗಳು
ಲಿಡೋ	
ಡಾಕೂ ಮಹಾರಾಜ್(ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 2	ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.
ಸ್ಕ್ರೀನ್ 4	ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.
ಸ್ಕ್ರೀನ್ 2	ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮುಕ್ತ ವಿವಿಯಿಂದ ಸತೀಶ್ ಜಾರಕಿಹೊಳಿ ಸೇರಿ ಮೂವರಿಗೆ ಗೌರವ ಡಾಕ್ಟರೇಟ್

ಮೈಸೂರು, ಮಾ.21– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು ಈ ಬಾರಿ ಸಚಿವ ಸತೀಶ್ ಜಾರಕಿಹೊಳಿ ಸೇರಿದಂತೆ ಮೂವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದೆ.



ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿ ಮುಂದಿನ ವಾರ ನಡೆಯಲಿರುವ ಮುಕ್ತ ವಿವಿಯ 20ನೇ ಘಟಿಕೋತ್ಸವದಲ್ಲಿ ಲೋಕೋಪಯೋಗಿ ಸಚಿವ ಸತೀಶ್ ಎಲ್.ಜಾರಕಿಹೊಳಿ, ಕಲಬುರ್ಗಿಯ ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷೆ ಡಾ.ದಾಕ್ಷಾಯಣಿ ಎಸ್.ಅಪ್ಪ ಹಾಗೂ ಐಡಿಯಲ್ ಎಜುಕೇಷನ್ ಸೊಸೈಟಿ ಛೇರ್ಮನ್ ಸಿ.ಎಂ.ಇರ್ಫಾನುಲ್ಲಾ ಶರೀಫ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲು ಮುಕ್ತ ವಿವಿಯ ಕುಲಾಧಿಪತಿಗಳೂ ಆದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅನುಮೋದಿಸಿರುವುದಾಗಿ ತಿಳಿದು ಬಂದಿದೆ. ಡಾ.ದಾಕ್ಷಾಯಣಿ ಅವರಿಗೆ ಕಳೆದ ವರ್ಷ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿದ್ದು, ಇದೀಗ ಮುಕ್ತ ವಿವಿಯ ಗೌರವಕ್ಕೂ ಪಾತ್ರರಾಗುತ್ತಿದ್ದಾರೆ.

ಮನೆಯಲ್ಲೇ ಕೆಲಸ ಆಮಿಷ; ಗೃಹಿಣಿಗೆ 18.84 ಲಕ್ಷ ವಂಚನೆ

ಮೈಸೂರು, ಮಾ.21– ಮನೆಯಲ್ಲೇ ಕೆಲಸ ಜಾಹಿರಾತು ನಂಬಿ ಗೃಹಿಣಿಯೊಬ್ಬರು 18.84 ಲಕ್ಷ ರೂ. ಹಣ ಹೂಡಿಕೆ ಮಾಡಿ, ಮೋಸ ಹೋಗಿದ್ದಾರೆ. ಮೈಸೂರಿನ ಹೆಬ್ಬಾಳು ಬಡಾವಣೆ ಗೃಹಿಣಿಯೊಬ್ಬರು, ಇನ್ಸ್ಟಾಗ್ರಾಮ್‌ನಲ್ಲಿ ಮನೆಯಿಂದ ಕೆಲಸ ಜಾಹಿರಾತು ನೋಡಿ ಅದರಲ್ಲಿದ್ದ ಲಿಂಕ್ ಮೇಲೆ ಕ್ಲಿಕ್ ಮಾಡಿ ಮೋಸದ ಜಾಲಕ್ಕೆ ಸಿಲುಕಿದ್ದಾರೆ.

ಲಿಂಕ್ ಕ್ಲಿಕ್ ಮಾಡಿದ ನಂತರ ವಾಟ್ಸಾಪ್‌ನಲ್ಲಿ ಮನೆಯಲ್ಲೇ ಕೆಲಸ ಮಾಡಿ, ಹಣ ಗಳಿಸುವ ಬಗ್ಗೆ ಸಂದೇಶ ಬಂದಿದೆ. ಅದಕ್ಕೆ ಪ್ರತಿಕ್ರಿಯಿಸಿದ ಗೃಹಿಣಿ, ರೇಟಿಂಗ್ ನೀಡುವ ಕೆಲಸ ಮಾಡಿದ್ದರಿಂದ ಮೊದಲಿಗೆ 800 ರೂ. ಕಮಿಷನ್ ನೀಡಲಾಗಿದೆ. ನಂತರ 10 ಸಾವಿರ ರೂ. ಹೂಡಿಕೆ ಮಾಡಿ, ಟಾಸ್ಕ್ ಕಂಪ್ಲೀಟ್ ಮಾಡಿದಕ್ಕೆ 4 ಸಾವಿರ ಬಂದಿದೆ. ಬಳಿಕ ಹೆಚ್ಚು ಲಾಭದಾಸೆಗೆ 1 ಲಕ್ಷ ಹೂಡಿದ್ದಾರೆ. ಹೀಗೆ ಹಂತಹಂತವಾಗಿ 18.84 ಲಕ್ಷ ರೂ. ಹೂಡಿಕೆ ಮಾಡಿದ್ದಾರೆ. ಕಡೆಗೆ ಯಾವುದೇ ಕಮಿಷನ್ ಹಣವೂ ಬಂದಿಲ್ಲ, ಯಾರೂ ಸಂಪರ್ಕಕ್ಕೆ ಸಿಕ್ಕಿಲ್ಲ. ಇದರಿಂದ ಮೋಸ ಹೋಗಿರುವುದು ಅರಿವಾಗಿ ಸೆನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಕೊಟ್ಟಿಗೆಯಲ್ಲಿ ಕಟ್ಟಿದ್ದ 4 ಕುರಿ ಕಳವು

ಮೈಸೂರು, ಮಾ.21– ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ 4 ಕುರಿಗಳನ್ನು ಕದ್ದೊಯ್ದಿರುವ ಘಟನೆ ಮೈಸೂರು ಸಮೀಪದ ಚೋರನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ನಾಗರಾಜು ಈ ಸಂಬಂಧ ಆಲನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಬುಧವಾರ ರಾತ್ರಿ ಮನೆ ಪಕ್ಕದ ಕೊಟ್ಟಿಗೆಯಲ್ಲಿ 12 ಕುರಿಗಳನ್ನು ಕಟ್ಟಿ ಹಾಕಿದ್ದೆವು. ಮರಿದಿನ ಬೆಳಗ್ಗೆ ಕೊಟ್ಟಿಗೆಗೆ ಹೋದಾಗ 4 ಕುರಿಗಳನ್ನು ಕಳ್ಳತನ ಮಾಡಿರುವುದು ಗೊತ್ತಾಯಿತು ಎಂದು ದೂರಿನಲ್ಲಿ ತಿಳಿಸಿದ್ದಾರೆ. ಮೈಸೂರು ನಗರ ಸಮೀಪದ ಹಳ್ಳಿಗಳಲ್ಲಿ ಮೇಕೆ–ಕುರಿಗಳ ಕಳ್ಳತನ ವ್ಯಾಪಕವಾಗಿದೆ. ಕುಟುಂಬ ನಿರ್ವಹಣೆಗೆ ಕೃಷಿ ಜೊತೆಗೆ ಹೈನುಗಾರಿಕೆ, ಕುರಿ–ಮೇಕೆ ಸಾಕಾಣಿಕೆ ಮಾಡಿಕೊಂಡಿರುವ ರೈತರು, ಕಳ್ಳರ ಹಾವಳಿಯಿಂದ ಕಂಗಾಲಾಗಿದ್ದಾರೆ.

ಬೇಕಾಗಿದ್ದಾರೆ

ಮೈಸೂರಿನ ಯುಆರ್‌ಸಿ ಎನ್‌ಸಿಸಿ ಗ್ರೂಪ್‌ಗೆ ಹೌಸ್ ಕೀಪರ್ ನೇಮಕಾತಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕನಿಷ್ಠ 10 ನೇ ತರಗತಿ ತೇರ್ಗಡೆಯೊಂದಿಗೆ ಹೌಸ್ ಕೀಪಿಂಗ್‌ನಲ್ಲಿ ಕೆಲಸದ ಅನುಭವ ಹೊಂದಿರುವ ಯಾವುದೇ ವ್ಯಕ್ತಿ 27 ಮಾರ್ಚ್ 2025 ರೊಳಗೆ ಅರ್ಜಿ ಸಲ್ಲಿಸಬಹುದು ಮೇಲೆ ತಿಳಿಸಲಾದ ಉದ್ಯೋಗಾವಕಾಶವು ಪುರುಷ ಅಭ್ಯರ್ಥಿಗಳಿಗೆ ಮಾತ್ರ ಗುತ್ತಿಗೆ ಆಧಾರದ ಮೇಲೆ ಲಭ್ಯವಿದೆ

0821-2423533

ಕಾಣೆಯಾಗಿದ್ದಾರೆ



ಹೆಸರು: ನಾಗೇಂದ್ರ
ವಯಸ್ಸು: 42
ವಿಳಾಸ: ಎಲ್ಲಮ್ಮ ತಾಯಿ ದೇವಸ್ಥಾನ, ಮಂಡಿ ಮೊಹಲ್ಲಾ.
ಕಾಣೆಯಾದ ದಿನಾಂಕ: 05.03.2025
ಕಾಣೆಯಾದ ಸಮಯ: ಸಂಜೆ: 7.30ಕ್ಕೆ

ಸಿಕ್ಕವರು ಸಂಪರ್ಕಿಸಿ: **8722623582**

ಬೇಕಾಗಿದ್ದಾರೆ

ಆಫೀಸ್ – ಇನ್ – ಚಾರ್ಜ್

ಉತ್ತಮ ಕಂಪ್ಯೂಟರ್ ಜ್ಞಾನದೊಂದಿಗೆ ನಮ್ಮ ಲೆಕ್ಕ ಪತ್ರಗಳನ್ನು ನಿರ್ವಹಿಸಲು. ಚಿಲ್ಕುಂದ ಸುತ್ತ ಮುತ್ತ ಇದ್ದರೆ ಅನುಕೂಲ

ಕಾವೇರಿ ಕಾಂಕ್ರೀಟ್ ಪ್ರೊಡಕ್ಟ್ಸ್
ಹುಣಸೂರು ತಾಲೂಕು, ಚಿಲ್ಕುಂದ – 571 113

Call: 96862 44144 / 94490 04191

FOR SALE

18 Gunta Coconut Garden
9 km from Ring Road
CLEAR TITLE
9606452159

SITE FOR SALE

Commercial corner plot 80'x120'
at Gokulam 3rd Stage, on main road.
Clear Titles.
15,000/P.sft.Negotiable.
Interested parties
Contact: 9845397832
Brokers excuse.

FOR SALE

2 Acres Coconut Garden
18 km from Ring Road
CLEAR TITLE
7019470527

PUBLIC NOTICE

This is to inform the general public that our clients **Sri.V. Vinayak Shankar and Sri. Viren Viraj Shankar** are the absolute owners and in peaceful possession and enjoyment of the schedule mentioned properties, and are also running a BPO business in the name & style of **M/s. Decipher Health Records LLP., and M/s. VChart Services.**

It is recently learnt by our clients that persons by name **Smt. C. Chitrakala and Sri. Akshay E, (Alias Akshay Gowda E,)** have created some fraudulent documents in respect of the schedule properties claiming to be the owners of the schedule properties. The said persons do not hold any rights, title and interest over the schedule properties. There are several Criminal and Civil disputes pending against the above parties at Mysuru in **OS.674/23. Mis/78/23, OS.327/24, OS.1672/24 and CC/101/25** and before the Hon'ble High Court of Karnataka in **WP/35011/24**. This is to inform the general public not to enter into any kind of transaction with the said persons in respect of the schedule properties and if any transactions have already taken place, the same are not binding on our clients. Any person or persons having any such claim may lodge their claim with us at the address mentioned below with all supportive documents.

SCHEDULES

ITEM NO.1
All that part and parcel of the converted property in ALN 50/84-85 bearing **Sy.No.80/1B**, measuring **0-14** Guntas, with AC Sheed situated at Alanahalli Village, Kasaba Hobli, Mysuru Taluk, and same is bounded on at Alanahalli Village, Kasaba Hobli, Mysuru Taluk, and same is bounded on

East by : Sy.No.80/1A property
West by : Road
North by : SyNo.92 property
South by : Sy.No.80/1B 2 & 3 property.

ITMEM NO.2
All that piece and parcel of residential converted property bearing No.1010/968, having Unique Code No.15220043303624890 issued by Allnahalli Grama panchayath formed out of **Sy No 80/1A** measuring **0-35 Guntas,** converted from agricultural to industrial as per conversion order in ALN(1)C R 135/2009-10, Dated: 16-09-2009, situated at Alanahalli Village, Kasaba Hobli, Mysuru Taluk, measuring 3541.00 Sq.mtr., With AC Sheets and same is bounded on:

East by : Portion of Ring Road formed in Sy.No.80/1A.
West by : Road
North by : Land in Sy No.92.
South by : Land in Sy.No.80/1B 2 & 3.

MR.N.SRINIVAS,
Advocate
Office No.16, "H" Colony, 1 st Cross, Indiranagar 1st Stage, Extension, Bengaluru - 560 038.
Mob: 98451 65285 / 95350 10184,
E-Mail: Srinivasn.seena@yahoo.com.



JOB OPPORTUNITY FOR FEMALES

Qualification
Any Graduates can apply
Role: TEAM ASSISTANCE
(Fluent English) Work from office

GENEAID INDIA PRIVATE LIMITED
742, E&F Block, Kuvempunagar, Mysuru-570023
Call : **99863 80009 / 77608 11113**
Email : **info@geneaid.in**

ಸಮರ್ಥ ನಿಧಿ ಲಿಮಿಟೆಡ್

ಜೆ.ಪಿ.ನಗರ, ಮೈಸೂರು 0821–4068286

ಬೇಕಾಗಿದ್ದಾರೆ

- ಪಿಗ್ಮಿ ಸಂಗ್ರಹಕಾರರು (ಏಜೆಂಟ್/ಉದ್ಯೋಗಿ)
- ವಾಹನ ಸಾಲಕ್ಕೆ ಎಕ್ಸಿಕ್ಯೂಟಿವ್
- ಅಕೌಂಟ್ಸ್ ಎಕ್ಸಿಕ್ಯೂಟಿವ್ B.com/B.B.M
  ವಿದ್ಯಾರ್ಹತೆ: ಪಿಯುಸಿ/ಯಾವುದೇ ಪದವಿ
- ಆಕರ್ಷಕ ವೇತನ ಮತ್ತು ಪ್ರೋತ್ಸಾಹ ಧನ ನೀಡಲಾಗುವುದು

ಸಂಪರ್ಕಿಸಿ: ಪ್ರಸನ್ನ ಶೆಟ್ಟಿ, ಶಾಖಾ ವ್ಯವಸ್ಥಾಪಕರು
9880345934 | 9880630458

PUBLIC NOTICE

NOTICE is hereby given that, my clients Sri.Dileep Kumar.H.R, S/o. Late.Ramesh Kumar.H.S., and Smt. Yogitha W/o. Sri. Dileep Kumar.H.R., Both are jointly R/at: No. 169, 23d Cross, 14th Main, 'D' Block, JP.Nagar, Mysore have intended to purchase the schedule property belonging to Sri.Narayana.N, S/o. Sri.Nagaraju. R., R/at: #101, 13th Cross, Janatha Badavane, J.P.Nagar, Mysore. Any persons claiming right, title or interest in the said properties or any part thereof by way of sale, gift, lease, inheritance, exchange, mortgage, charge, lien, trust, possession, easement, attachment or otherwise how-so-ever are hereby required to make the same known to the undersigned at his office within 7 days from the date hereof, falling which, the said transactions will be completed, without any reference to such claim and the same, if any shall be considered as waived.

SCHEDULE : All that piece and parcel of the site bearing No. 110 carved out of land bearing Sy. No.25/1 & 2, measuring East to West 30 feet and North to south 40 feet situated at Nachanahalli Village, J.P.Nagar, Mysore and bounded on: East by : Property bearing No.111. West by: Road, North by: Road, South by : Property bearing No.117.

Sd/- ABHINANDAN.H
Advocate and Legal Consultant
Office Address:- 7/4-E, 5th Main, 1st Cross, Jayanagara, Mysuru-14
Phone No. 9964426903, 8105796222
E-Mail: advabhinandan@gmail.com

ಮೈಸೂರು ಮಿತ್ರ 45

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

–ಜಾಹೀರಾತು ವ್ಯವಸ್ಥಾಪಕರು

Exchange your old sofa set to brand new sofa set. Also repair done.
Mob: 9591012944

MRC EYE HOSPITAL

(MRC CHARITABLE TRUST)
H-1, Vinaya marga, Siddhartha Layout, Mysore - 570 011
Tel.No. **94806 57223/0821-2472102;**
Email: **administrator@mrceyehospital.in**

EXPRESSION OF INTEREST

Expression of Interest Invited to run a DIAGNOSTIC LABORATORY CENTRE AT THE MRC EYE HOSPITAL, so as to reach the Administrator of the MRC Eye hospital by 5.00PM on or before **28th March 2025.** For more details including Terms and conditions please contact the MRC Eye Hospital office.

Sd/- Secretary
MRC Charitable Trust

ನಿವೇಶನಗಳು ಮಾರಾಟಕ್ಕಿದೆ

ಮೈಸೂರು ನಗರದಿಂದ 10.ಕಿ.ಮೀ ದೂರದಲ್ಲಿರುವ ದಡದಹಳ್ಳಿ ರಸ್ತೆಯಲ್ಲಿರುವ ಆಕರ್ಷಕ ಬಡಾವಣೆಯಲ್ಲಿ **30x40, 30x50, 40x60, 50x80** ಅಳತೆಯ ನಿವೇಶನಗಳು ಆಕರ್ಷಕ ದರದಲ್ಲಿ ದೊರೆಯುತ್ತವೆ.
ಆಸಕ್ತರು ಸಂಪರ್ಕಿಸಿ.

99453 04441

Step beyond your expectations !!

at our Grand Venue Rajendra Kalamandhira

- WEDDINGS ENGAGEMENTS
- CONFERENCES
- TRADE FAIRS
- PRODUCT LAUNCHES

- Wedding/convention hall with special rates
- 2 banquet halls to accommodate 200
- 45 Air conditioned rooms with discount

Ramanuja Road, Mysuru
9845923388 / 9845963388
rajendrakalamandhira@rpsshotels.com / viceroycomforts@rpsshotels.com

AVAIL SPECIAL OFFERS AND DISCOUNTS

ಬೇಕಾಗಿದ್ದಾರೆ

ಮೈಸೂರಿನ ಹೆಸರಾಂತ ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಮ್ಯಾನ್, ಮ್ಯಾನೇಜರ್, ಡಿಜಿಟಲ್ ಮಾರ್ಕೆಟಿಂಗ್, ವಿಡಿಯೋಗ್ರಾಫಿ, ಮತ್ತು ಟೆಲಿಕಾಲರ್ ಕೆಲಸ ಮಾಡಲು ಅನುಭವವುಳ್ಳ 100 ಜನ ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಇಎಸ್‌ಐ+ಪಿಎಫ್ ಮತ್ತು ಇನ್ಸೆಂಟೀವ್, ಸೌಲಭ್ಯದೊಂದಿಗೆ, ಗಾಂಧಿ ಸರ್ಕಲ್, ಮೈಸೂರು

9740809996
ಸಂಪರ್ಕ ವೇಳೆ: ಬೆಳಗ್ಗೆ 10.30 ರಿಂದ

ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ ಮೈಸೂರು ಜಿಲ್ಲೆ –571107

ಇ–ಮೇಲ್ :itstaff_ulb_periyapatna@yahoo.com, Phone(O): 08223-273036

ಸಂ:ಪಿಪುಕಾ/ಪಿ.ಆರ್/ಸಂತೆ ಖಿಸ್ತು ಹರಾಜು/1/2024–25 ದಿನಾಂಕ: 19.03.2025

ಮರು ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, **2025–26ನೇ** ಸಾಲಿನ ಅಂದರೆ **ದಿನಾಂಕ:01.04.2025 ರಿಂದ 31.03.2026ರವರೆಗೆ** ಪಿರಿಯಾಪಟ್ಟಣ ಪುರಸಭೆಗೆ ಸೇರಿದ ಸಂತೆ ಸುಂಕ ವಸೂಲಾತಿ ಹಕ್ಕು, ವಾರ್ಷಿಕ ಹರಾಜು ಇಸ್ತಿಯಾರ್ ಮರು ಬಹಿರಂಗ ಹರಾಜನ್ನು **ದಿನಾಂಕ:26.03.2025ರ** ಬುಧವಾರ ಬೆಳಿಗ್ಗೆ 11.00ಗಂಟೆಯಿಂದ ಪುರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳು ಹಾಗೂ ಮುಖ್ಯಾಧಿಕಾರಿಗಳ ಉಪಸ್ಥಿತಿಯಲ್ಲಿ ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಮರು ಬಹಿರಂಗ ಹರಾಜು ಮಾಡಲಾಗುವುದು. ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಈ ಕೆಳಕಂಡ ಠೇವಣಿ ಮೊತ್ತವನ್ನು ಡಿ.ಡಿ. ಮುಖಾಂತರ ಪಡೆದು **ದಿನಾಂಕ:25.03.2025ರ** ಸಂಜೆ 5.30 ರೊಳಗೆ ಕಛೇರಿಯ ಕಂದಾಯ ಶಾಖೆಯಲ್ಲಿ ಸಲ್ಲಿಸಿ ಹರಾಜಿನಲ್ಲಿ ಭಾಗವಹಿಸಿ ಬಿಡ್ ಮಾಡಬಹುದು.

1. **ಸಂತೆ ಸುಂಕ ವಸೂಲಾತಿ ಹಕ್ಕು :** (ಮೆಲ್ಲಹಳ್ಳಿ ಗೇಟಿನಿಂದ ಉಪ್ಪಾರಗೇರಿ ಗೇಟಿನವರೆಗೆ) ಹರಾಜು ಠೇವಣಿ ಮೊತ್ತ ರೂ. 50,000/–ಗಳ ಡಿ.ಡಿ. ಪಡೆಯುವುದು
2. ಹೆಚ್ಚಿನ ಮಾಹಿತಿಗಾಗಿ ಕಂದಾಯ ಶಾಖೆಯಲ್ಲಿ ಮಾಹಿತಿ ಪಡೆಯಬಹುದು.

ಸಹಿ/–(ಶ್ರೀ. ಪ್ರಕಾಶ್ ಸಿಂಗ್) ಅಧ್ಯಕ್ಷರು,ಪುರಸಭೆ, ಪಿರಿಯಾಪಟ್ಟಣ
ಸಹಿ/–(ಶ್ರೀಮತಿ. ಸುವರ್ಣ) ಉಪಾಧ್ಯಕ್ಷರು,ಪುರಸಭೆ, ಪಿರಿಯಾಪಟ್ಟಣ
ಸಹಿ/–(ಶ್ರೀ. ಅಬ್ದುಲ್ ಅರ್ಷದ್) ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/–(ಶ್ರೀ ಕೆ. ಮುತ್ತಪ್ಪ) ಮುಖ್ಯಾಧಿಕಾರಿ, ಪುರಸಭೆ, ಪಿರಿಯಾಪಟ್ಟಣ

DIPR-DD-MYS/1479/KSMCA-1106/2024-25

SAPIENT COLLEGE

Sapient Estd.2015
The Change Makers

ADMISSION OPEN

COURSES OFFERED

EABS – Economics, Accountancy, Business studies, Statistics
EABCS – Economics, Accountancy, Business studies, Computer Science
BABS – Basic Maths, Accountancy, Business studies, Statistics

UNDER GRADUATE

BCA – Bachelor of Computer Application
BBA – Bachelor of Business Administration
BCOM – Bachelor of Commerce

COACHING OFFERED BY J K SHAH (MUMBAI)
CA FOUNDATION, CS EET & CERTIFICATE COURSES

LANGUAGES OFFERED
ENGLISH, KANNADA , HINDI, SANSKRIT, FRENCH ,ARABIC & MALAYALAM.

10th year Celebration

Sapient offers : Special fee concession of Rs 10,000/- to Degree & pre-university students.
(Conditions apply *)

Contact us 9980737788 / 0821-2334642
sapientcollegeofcommerce@gmail.com
sapientcollege.in

#763/764, Metagalli Extension, Before Ring Road Junction, Mysuru -570016

WANTED

PART TIME
COOKS - 6pm to Close
WAITERS - 6pm to Close
Contact
BOPYS BAR & Restaurant
Near Aishwarya Petrol Bunk, Vijayanagar, Hunsur Road, Mysore

APARTMENT FORSALE

Sowparnika Blue Bells, 3rd Stage, Vijaynagar, Hinkal, having 2 Bedroom, Hall, Kitchen, 2 bathroom, 2 balcony, with furnished facility of 1129 Sq.ft. Super Built-up Area.
CONTACT:
8453647779

ನಗರಸಭಾ ಕಾರ್ಯಾಲಯ, ಹುಣಸೂರು

CITY MUNICIPAL COUNCIL HUNSUR
ಮೈಸೂರು ಜಿಲ್ಲೆ - 571105
E-mail : ka.hunsur.cmc@gmail.com ಫೋನ್: 08222-252048

ಸಂ:ಹುನಸಕಾ:/ಕ.ವ/ಪಿ.ಆರ್/ಹ/01/2025-26 ದಿನಾಂಕ: 18-03-2025

"ಹರಾಜು ಇಸ್ತಿಹಾರ್"

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಹುಣಸೂರು ನಗರಸಭೆಗೆ ಸೇರಿದ 1) ಆಡು–ಕುರಿ ಮಾಂಸದ ಅಂಗಡಿಗಳು, 2) ಗುರುವಾರದ ಸಂತೆ ಸುಂಕ ವಸೂಲಾತಿ, 3) ಪಟ್ಟಣದ ಫುಟ್‌ಬಾತ್ ದಿನವಹಿ ನೆಲ ಬಾಡಿಗೆ ಸುಂಕ ವಸೂಲಾತಿ, 4) ಪಟ್ಟಣದಾದ್ಯಂತ ವಾಹನದಲ್ಲಿ ಮೀನು ಮಾರಾಟ ಮಾಡು ಹಕ್ಕು, 5) ಸಂತೆ ಮೈದಾನದಲ್ಲಿರುವ ಮೀನು ಮಾರಾಟ ಅಂಗಡಿ, 6) ನಗರಸಭೆಯಆವರಣ ಹಾಗೂ ಪಂಪ್‌ಹೌಸ್‌ನಲ್ಲಿರುವ ತೆಂಗಿನ ಮರಗಳ ಫಸಲು ಹಕ್ಕು 7) ಅನುಪಯುಕ್ತ ನ್ಯೂಸ್ ಪೇಪರ್‌ಗಳ ಹಕ್ಕನ್ನು, ದಿನಾಂಕ 29.03.2025ನೇ ಶನಿವಾರ ಬೆಳಿಗ್ಗೆ 11–00 ಗಂಟೆಗೆ ನಗರಸಭಾ ಕಛೇರಿ ಆವರಣದಲ್ಲಿ ನಗರಸಭಾ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್. ಶರವಣರವರು ಮತ್ತು ಪೌರಾಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದವರ ಸಮ್ಮುಖದಲ್ಲಿ ಈ ಕೆಳಕಂಡ ಬಾಬುಗಳನ್ನು ಹರಾಜು ಮೂಲಕ 12 (ಹನ್ನೆರಡು) ತಿಂಗಳ ಅವಧಿಗೆ ಅಂದರೆ ದಿನಾಂಕ 01–04–2025 ರಿಂದ 31–03–2026ರವರೆಗೆ ವಿಲೇ ಮಾಡಲಾಗುವುದು. ಹೆಚ್ಚಿನ ವಿವರಗಳಿಗೆ ಕಛೇರಿಯ ಕೆಲಸದ ವೇಳೆಯಲ್ಲಿ ಕಂದಾಯ ವಿಭಾಗದಿಂದ ಮಾಹಿತಿಯನ್ನು ಪಡೆಯಬಹುದು.

1. ಹರಾಜಿನಲ್ಲಿ ಭಾಗವಹಿಸಲು ಇಚ್ಚೆವುಳ್ಳವರು ಈ ಕೆಳಕಂಡ ಠೇವಣಿಯನ್ನು ಹರಾಜಿಗೆ ಮುಂಚಿತವಾಗಿ ಪ್ರತ್ಯೇಕವಾಗಿ ಬ್ಯಾಂಕ್‌ಡಿ.ಡಿ/ ಠೇವಣಿಕಟ್ಟಿ ಹರಾಜಿನಲ್ಲಿ (ಆಧಾರ್/ಪಾನ್‌ಕಾರ್ಡ್/ ಚುನಾವಣಾ ಗುರುತಿನ ಚೀಟಿಯೊಂದಿಗೆ) ಭಾಗವಹಿಸತಕ್ಕದ್ದು.
2. ಹರಾಜಿನಲ್ಲಿ ಭಾಗವಹಿಸುವವರು ಸ್ಥಿರಾಸ್ತಿವುಳ್ಳವರಾಗಿದ್ದು ನಗರ ಸಭೆಗೆ ಯಾವುದೇ ಬಾಕಿದಾರರಾಗಿರಬಾರದು ಮತ್ತು ಬಿಡ್ ಮಾಡುವವರು ಹರಾಜಿಗೆ ಮುನ್ನ ಬಾಕಿ ಇಲ್ಲದಿರುವ ದೃಢೀಕರಣ ಪತ್ರ ಹಾಜರುಪಡಿಸತಕ್ಕದ್ದು.
3. ಹರಾಜು ಖೈದಾದ ದಿನವೇ ಅಖೈರು ಬಿಡ್‌ದಾರರು ಹೊರತುಪಡಿಸಿ ಉಳಿದವರಿಗೆ ಠೇವಣಿಯನ್ನು ವಾಪಸ್ ಮಾಡಲಾಗುವುದು.
4. ಹರಾಜು ಖೈದಾದ ದಿನವೇ ಕುರಿ ಮಾಂಸ ಅಂಗಡಿಗಳು, ಗುರುವಾರದ ಸಂತೆ, ಮೀನು ಮಾರಾಟ ಹಾಗೂ ಫುಟ್‌ಪಾತ್ ನೆಲ ಬಾಡಿಗೆ ವಸೂಲಿ ಮಾಡುವ ಅಖೈರು ಹಕ್ಕುದಾರರು 12 ತಿಂಗಳ ಮುಂಗಡವನ್ನು ನಗದು ರೂಪದಲ್ಲಿ ನಗರಸಭೆಗೆ ಜಮಾ ಮಾಡಿ ರಶೀದಿ ಪಡೆಯತಕ್ಕದ್ದು.
5. ಹರಾಜು ಖೈದಾದ ಬಿಡ್‌ದಾರರು ರೂ.200/– ಛಾಪಾಕಾಗದದಲ್ಲಿ ಮುಚ್ಚಳಿಕೆ ಬರೆದುಕೊಟ್ಟು ಕಛೇರಿಯಿಂದ ಅಧಿಕೃತ ಆದೇಶ ಪಡೆದು ದಿನಾಂಕ 01–04–2025ರಿಂದ ರೂಡಿಸಿಕೊಳ್ಳುವ ಹಕ್ಕನ್ನು ಪಡೆಯತಕ್ಕದ್ದು. ಹರಾಜು ನಗರಸಭೆ ಕೌನ್ಸಿಲ್ ಮಂಜೂರಾತಿಗೆ ಒಳಪಟ್ಟಿರುತ್ತದೆ.
6. ಅಖೈರು ಬಿಡ್‌ದಾರರು ಯಾವ ಕಾರಣಕ್ಕೂ ಅಂದರೆ ಸಂಘ ಸಂಸ್ಥೆಗಳಿಂದ ಬಂದ್ ಆಚರಣೆ, ಗಲಭೆ, ನಿಷೇಧಾಜ್ಞೆಗಳ ಕಾರಣ ವಾರದ ಸಂತೆಗಳು ಮತ್ತು ಇತರ ಎಲ್ಲಾ ಐಟಂಗಳಿಗಾಗಿ ಮುಂದಿಟ್ಟ ಖಿಸ್ತು ಮೊಬಲಗನ್ನು ಮನ್ನಾ ಮಾಡಲಾಗುವುದಿಲ್ಲ.
7. ಮಾಂಸ ಮಾರಾಟ ಮಾಡುವವರು ಸರ್ಕಾರದಿಂದ ಹಾಗೂ ಪೌರಾಯುಕ್ತರು ಸೂಚಿಸಿರುವ ದಿನಗಳಲ್ಲಿ ಕತ್ತರಿಸಿ ಮಾರಾಟ ಮಾಡುವುದನ್ನು ನಿಷೇಧಿಸಿ ಆದೇಶ ಹೊರಡಿಸಿದಲ್ಲಿ ತಪ್ಪದೇ ಮಾರಾಟ ನಿಲ್ಲಿಸತಕ್ಕದ್ದು, ಅಂತಹ ದಿನಗಳಲ್ಲಿ ಯಾವುದೇ ಪರಿಹಾರವಿರುವುದಿಲ್ಲ. ಸರ್ಕಾರದ ಆದೇಶದಂತೆ ಆಯಾ ದಿನಗಳಲ್ಲಿ ಕುರಿ, ಕೋಳಿ, ಮೇಕೆ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ.
8. ಹರಾಜು ಮಂಜೂರಾದ ಬಿಡ್‌ದಾರರು ಬಾಬಿನ ಹಕ್ಕನ್ನು ದಿನಾಂಕ 01–04–2025ರಿಂದ 31–03–2026ರವರೆಗೆ ಮಾತ್ರವೇ ಹೊಂದಿರುತ್ತಾರೆ. ಹರಾಜು ಖೈದಾದ ಕೂಡಲೇ ಆಯಾ ಅಖೈರು ಬಿಡ್‌ದಾರರು ಅಂತಿಮ ಬಿಡ್ ಮೊಬಲಗಿನ 12 ತಿಂಗಳ ಹಣವನ್ನು ಪಾವತಿಸತಕ್ಕದ್ದು. ತಪ್ಪಿದ್ದಲ್ಲಿ ಮರು ಹರಾಜು ಮಾಡಲಾಗುತ್ತದೆ. ಹಾಗೂ ಠೇವಣಿ ಮತ್ತು ಮುಂಗಡ ಮೊಬಲಗನ್ನು ನಗಸಭೆಯ ನಿಧಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.
9. ಪ್ರತಿಗುರುವಾರ ಸಂತೆ ನಡೆಯುವಾಗ ಸಾರ್ವಜನಿಕರಿಗೆ ತಿರುಗಾಡಲು ತೊಂದರೆಯಾಗುವುದರಿಂದ ರಸ್ತೆ ಬಾಬುವಿನಲ್ಲಿ ವ್ಯಾಪಾರ ಮಾಡುವುದು, ಟೆಂಟ್ ಹಾಕುವುದನ್ನು ನಿಷೇಧಿಸಿರುತ್ತೆ. ಈ ಕೆಳಗೆ ವಿವರಿಸಿರುವಂತೆ ಐಟಂವಾರು ನಿಗಧಿತ ಫೀ ವಸೂಲಿ ಮಾಡತಕ್ಕದ್ದು.
10. ಸಂತೆಗಳು ನಡೆಯುವ ದಿನದಂದು ಸಂತೆ ನಡೆಯುವ ವ್ಯಾಪ್ತಿಯಲ್ಲಿ ಮಾತ್ರ ವಸೂಲಿ ಮಾಡುವ ಹಕ್ಕುಳ್ಳವರಾಗಿರುತ್ತಾರೆ. ಉಳಿದ ಜಾಗಗಳು ಸಂತೆ ವ್ಯಾಪ್ತಿಗೊಳಪಟ್ಟಿರುವುದಿಲ್ಲ.
11. ಅಧಿಕೃತವಾಗಿ ನೀಡುವ ನಿಗಧಿತ ಫೀ ವಸೂಲಿಗಾಗಿ ರಶೀದಿಗಳಿಗೆ ಈ ಕಛೇರಿಯ ಅಧಿಕೃತ ಮುದ್ರೆ ಒತ್ತಿಸಿ ನಿಗಧಿತದರದಲ್ಲಿ ಮಾತ್ರ ಫೀ ವಸೂಲಿ ಮಾಡಿ ರಶೀದಿ ನೀಡತಕ್ಕದ್ದು. ತಪ್ಪಿದಲ್ಲಿ ನೀವು ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಮರು ಹರಾಜು ಮಾಡಲಾಗುವುದು ಅಥವಾ ಇಲಾಖಾ ವತಿಯಿಂದ ವಸೂಲಿ ಮಾಡಲಾಗುವುದು.
12. ಹರಾಜು ಬಿಡ್‌ಆದ 12 ತಿಂಗಳ ಠೇವಣಿ ಹಣವನ್ನು ಪಾವತಿಸಬೇಕು. ತಪ್ಪಿದ್ದಲ್ಲಿಡಿ ಪಾಜಿಟ್ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
13. ದಿನವಹಿ ಫುಟ್‌ಪಾತ್ ವಸೂಲಿ ಹಕ್ಕನ್ನು ಬಿಡ್ ಮೂಲಕ ಪಡೆದ ಬಿಡ್‌ದಾರರುರಸ್ತೆ ಬದಿಯಲ್ಲಿರುವ ತಳ್ಳುವ ಗಾಡಿಯವರಿಗೆ ಕಸವನ್ನು ಡಸ್ಟ್‌ಬಿನ್ ಇಟ್ಟು ವಿಲೇ ಮಾಡುವ ಬಗ್ಗೆ ತಿಳುವಳಿಕೆ ನೀಡಿ ಡಸ್ಟ್‌ಬಿನ್ ಇಡಿಸುವುದು. ತಪ್ಪಿದ್ದಲ್ಲಿ ಪುರಸಭಾ ಕಾಯ್ದೆ ರೀತ್ಯಾ ದಂಡ ವಿಧಿಸಲಾಗುವುದು.
14. ಕಾಲಕಾಲಕ್ಕೆ ಸರ್ಕಾರ ನಿಗಧಿಪಡಿಸುವ ತೆರಿಗೆಗಳನ್ನು ಸೇರಿಸಿ ಪಾವತಿಸಲು ಬದ್ಧರಾಗಿರುತ್ತದ್ದು. ತಪ್ಪಿದ್ದಲ್ಲಿ ಕಾನೂನು ರೀತ್ಯಾ ಕ್ರಮವಹಿಸಲಾಗುವುದು.
15. ಹರಾಜಿನಲ್ಲಿ ಅಂಗೀಕರಿಸುವ ಹಾಗೂ ತಿರಸ್ಕರಿಸುವ ಸಂಪೂರ್ಣ ಹಕ್ಕು ನಗರಸಭೆ ಕಾಯ್ದಿರಿಸಿದೆ.

ಕ್ರ.ಸಂ	ಬಾಬುಗಳ ವಿವರ	ಅವಧಿ	ಹರಾಜು ನಡೆಯುವ ದಿನಾಂಕ ಮತ್ತು ಸ್ಥಳ	ಠೇವಣಿ ಮೊತ್ತ
1	ಸಂತೆ ಮಾಳದಲ್ಲಿರುವ ಮಾಂಸದ ಅಂಗಡಿಗಳು, ಅಂಗಡಿಗಳ ವಿವರ 1 ರಿಂದ 10ರವರೆಗೆ ಮಾಂಸದಅಂಗಡಿ (ನೂತನಕಟ್ಟಡದಲ್ಲಿ)	01–04–2025 ರಿಂದ 31–03–2026ರವರೆಗೆ	29.03.2025 ರಂದು ನಗರಸಭಾಕಛೇರಿಯಲ್ಲಿ ಬೆಳಿಗ್ಗೆ 11–00 ಗಂಟೆಯಿಂದ	30,000–00
2	ಹುಣಸೂರು ಟೌನ್‌ನ ಎಲ್ಲಾ ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುವವರಲ್ಲಿ ದಿನವಹಿ ನೆಲ ಬಾಡಿಗೆ ಸುಂಕ ವಸೂಲಿ	—"—	—"—	50,000–00
3	ಪ್ರತಿ ಗುರುವಾರ ಸಂತೆ ಸುಂಕ ವಸೂಲಿ ಮಾಡುವ ಹಕ್ಕು ಸಂತೆ ಮೈದಾನದಲ್ಲಿ ಎ.ಪಿ.ಎಂ.ಸಿ ಯಿಂದ ನಿರ್ಮಿಸಿರುವ ಕಟ್ಟಡದಜಾಗ ಹೊರತುಪಡಿಸಿ (ಸಂತೆ ಮೈದಾನದ ಆವರಣ ಮಾತ್ರ) ಕರ್ನಾಟಕ ರಾಜ್ಯ ಪತ್ರ ಪ್ರಕಟಣೆ ಸಂಖ್ಯೆ 2316/ಭಾಗ–6–ಎ/ ದಿನಾಂಕ 02–06–2016 ರಂತೆ	—"—	—"—	50,000–00
4	ಪಟ್ಟಣದಾದ್ಯಂತ ವಾಹನಗಳಲ್ಲಿ ಮೀನು ಮಾರಾಟ ಮಾಡುವ ಹಕ್ಕು	—"—	—"—	50,000–00
5	ಸಂತೆ ಮೈದಾನದಲ್ಲಿರುವ ಮೀನು ಮಾರಾಟ ಅಂಗಡಿ	—"—	—"—	30,000–00
6	ನಗರಸಭೆ ಆವರಣ ಹಾಗೂ ಪಂಪ್‌ಹೌಸ್‌ನಲ್ಲಿರು ವತೆಂಗಿನ ಮರದ ಫಸಲು ಹಕ್ಕು	—"—	—"—	2,000–00
7	ಅನುಪಯುಕ್ತ ನ್ಯೂಸ್ ಪೇಪರ್ ಹಕ್ಕು	—"—	—"—	500–00

ಸಹಿ/– (ಶ್ರೀ ಎಸ್.ಶರವಣರವರು) ಅಧ್ಯಕ್ಷರು ನಗರಸಭೆ ಹುಣಸೂರು
ಸಹಿ/– (ಶ್ರೀಮತಿ ಆಶಾ ರವರು) ಉಪಾಧ್ಯಕ್ಷರು ನಗರಸಭೆ ಹುಣಸೂರು
ಸಹಿ/– (ಶ್ರೀ ಹರೀಶ್‌ಕುಮಾರ್) ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ ಹುಣಸೂರು
ಸಹಿ/– (ಶ್ರೀ ಮಾನಸ ಎಂ, ಕೆ.ಎಂ.ಎ.ಎಸ್, ಶ್ರೇಣಿ–1) ಪೌರಾಯುಕ್ತರು ನಗರಸಭೆ ಹುಣಸೂರು
ಹಾಗೂ ಸರ್ವ ಸದಸ್ಯರುಗಳು, ನಗರಸಭೆ, ಹುಣಸೂರು